ಅ) ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಜಾಸತ್ತಾತ್ಮಕ ಪ್ರಕ್ರಿಯೆ ಚುನಾವಣೆಯ ಮೂಲಕ ಜನತೆ ತಮ್ಮ ಸಂಕಲ್ಪವನ್ನು ವ್ಯಕ್ತಪಡಿಸಿರುವ ಬಗ್ಗೆ ನನಗೆ ಸದಾ ಅತ್ಯುನ್ನತ ಗೌರವವನ್ನು ತರುತ್ತದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಚುನಾವಣೆ ಶಾಂತಯುತವಾಗಿ ನಡೆದಿದೆ ಎಂದು ತಮ್ಮ ಭಾಷಣದಲ್ಲಿ ಅವರು ತಿಳಿಸಿದ್ದಾರೆ. ನಾನು ಈ ಚುನಾವಣೆ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ರಾಜ್ಯಪಾಲರು ಭಾಷಣ ಮಾಡುವಾಗ ನಾವು ಪ್ರತಿ ಸಾರಿಯು ನಮ್ಮದೇ ವಿಧಾನದಲ್ಲಿ ರಾಷ್ಟ್ರಪತಿಗಳ ಭಾಷಣವಾಗಲಿ ಅಥವಾ ರಾಜ್ಯಪಾಲರ ಭಾಷಣವನ್ನು ವಿರೋಧ ಮಾಡಿ, ಇದು ಬೇರೆ ದಿಕ್ಕಿನಲ್ಲಿ ಹೋಗಬೇಕು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ರೀತಿ ಸರಿಯಲ್ಲ ಎನ್ನತಕ್ಕ ವಾದವನ್ನು ಈ ಸದನದಲ್ಲಿ ಜಂಟಿ ಅಧಿವೇಶನದಲ್ಲಿ ಪ್ರತಿ ಸಾರಿ ನಾನು ಮಂಡಿಸುತ್ತಾ ಇದ್ದೇನೆ. ಹಾಗೆ ಅಂದಾಕ್ಷಣ ಅದು ರಾಜ್ಯಪಾಲರಿಗೆ ಅಗೌರವ ಸೂಚಿಸುವ ಉದ್ದೇಶವಲ್ಲ. ಅವರಿಗೆ ವೈಯಕ್ತಿಕವಾಗಿ ನಮಗೆ ಬಹಳ ಗೌರವವಿದೆ. ಆ ಬಗ್ಗೆ ಎರಡು ಮಾತುಗಳಿಲ್ಲ. ಆದರೆ, ಒಂದು ರೀತಿ ಈ ವ್ಯವಸ್ಥೆ ಸರಿಯಲ್ಲ ಎನ್ನತಕ್ಕದ್ದು ನನ್ನ ಮೂಲಭೂತವಾದ ಪ್ರಶ್ನೆ. ಅದರಿಂದ ನನ್ನ ಅನಿಸಿಕೆಯನ್ನು ನಾನು ವ್ಯಕ್ತಪಡಿಸಿದ್ದೇನೆ. ಇವತ್ತು ರಾಜ್ಯಪಾಲರ ಭಾಷಣ ಆದನಂತರ ಒಂದು ಇಂಗ್ಲೀಷ್ ಪತ್ರಿಕೆಯಲ್ಲಿ " ರೌಡಿಗಳು ರಾಜ್ಯಪಾಲರ ಭಾಷಣವನ್ನು ತಡೆಹಿಡಿದರು " ಎಂದು ಬರೆದರು, ನಾನು ಆ ಪತ್ರಿಕೆಯ ಮೇಲೆ ಹಕ್ಕುಚ್ಯುತಿ ನಿರ್ಣಯ ತರಬೇಕೆಂದು ಯೋಚನೆ ಮಾಡಿದೆ. ಆದರೆ ಕೊನೆಗೆ ಅವರು ಏನಾದರೂ ಬರೆದುಕೊಳ್ಳಲಿ ಬಿಡಿ, ನಾವು ಏಕೆ ತಲೆ ಕೆಡಿಸಿಕೊಳ್ಳಬೇಕು ಎಂದು ಸುಮ್ಮನಾದೆ. ಸಾಮಾನ್ಯ ದೃಷ್ಟಿಯಿಂದ ನಾನು ಯಾವಾಗಲೂ ಪತ್ರಿಕೆಗಳ ಮೇಲೆ ಹಕ್ಕುಚ್ಯುತಿಯನ್ನು ತರುವುದಿಲ್ಲ. ರಾಜ್ಯಪಾಲರ ಭಾಷಣವನ್ನು ತಡೆದವರು ಎಲ್ಲರೂ ರೌಡಿಗಳು ಎನ್ನುವ ಭಾವನೆ ಅವರಲ್ಲಿ ಬಂದಾಗ ಅದನ್ನು ದೊಡ್ಡದು ಮಾಡುವುದು ಸರಿಯಲ್ಲ ಎಂದು ಯೋಚನೆ ಮಾಡಿ ಅದನ್ನು ಕೈಬಿಟಿದ್ದೇನೆ. ಈ ಒಂದು ನೀತಿಯನ್ನು ಅಳವಡಿಸಿಕೊಂಡು ನಾನು ಹಕ್ಕುಚ್ಯುತಿ ತರಲು ಹೋಗಲಿಲ್ಲ. ಇನ್ನು ಇಲ್ಲಿ ಕಾಂಗ್ರೆಸ್‌ನವರು ಮತ್ತು ಭಾರತೀಯ ಜನತಾ ಪಕ್ಷದವರು ಸರ್ಕಾರ ರಾಜೀನಾಮೆ ಕೊಡಬೇಕು, ಶಾಸನ ಸಭೆಯನ್ನು ವಿಸರ್ಜನೆ ಮಾಡಬೇಕು, ಚುನಾವಣೆ ಮಾಡಬೇಕು ಎನ್ನುವ ಮಾತಿನಲ್ಲಿ ಅಷ್ಟೊಂದು ಶಕ್ತಿ ಇಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಏಕೆ ಚುನಾವಣೆ ಆಗಬೇಕು, ಏಕೆ ಶಾಸನ ಸಭೆ ವಿಸರ್ಜನೆಯಾಗಬೇಕು, ಅದಕ್ಕೆ ಕಾರಣಗಳು ಏನು ಎನ್ನುವುದು ಬಹಳ ಪ್ರಾಮುಖ್ಯವಾದ ಅಂಶ. ರಾಜ್ಯಪಾಲರ ಭಾಷಣಕ್ಕೆ ಆಗಬಹುದು, ರಾಜಕೀಯ ಒತ್ತಡಕ್ಕೆ ಆಗಬಹುದು, ಈ ಶಾಸನಸಭೆಗೆ ಚುನಾವಣೆ ಬರಬೇಕಾದರೆ

ಇನ್ನೂ ಒಂದು ವರ್ಷಗಳ ಮೇಲೆ 10 ತಿಂಗಳು ಇವೆ. ಮತ್ತು ಈಗಾಗಲೇ ಸದನ ಬಿದ್ದು ಹೋಗತಕ್ಕಂತಹ ಯಾವ ಪರಿಸ್ಥಿತಿಯೂ ನಿರ್ಮಾಣವಾಗಿಲ್ಲ. ಇಂಥ ಸಂದರ್ಭದಲ್ಲಿ ವಿಸರ್ಜನೆಯಾಗಬೇಕು, ಚುನಾವಣೆಯಾಗಬೇಕು ಎನ್ನುವುದರಲ್ಲಿ ವಾದ ಇಲ್ಲ. ಹೀಗಾಗಿ ಅದರಲ್ಲಿ ಎರಡು ದ್ವಂದ್ವ ಅಭಿಪ್ರಾಯ ಉಂಟಾಗಿವೆ, ಒಂದು ಕಾಂಗ್ರೆಸ್‌ನವರು ನೇರವಾಗಿ ವಿಸರ್ಜನೆ ಮಾಡಿ ಮತ್ತೆ ಚುನಾವಣೆ ಆಗಬೇಕು ಎನ್ನುತ್ತಾರೆ. ಭಾರತೀಯ ಜನತಾ ಪಕ್ಷದವರು ಚುನಾವಣೆಯಾಗಬೇಕು, ವಿಸರ್ಜನೆಯಾಗಬೇಕು ಎನ್ನುತ್ತಾರೆ. ಲೋಕಶಕ್ತಿಯವರು ವಿಸರ್ಜನೆ ಬೇಡ, ನಾವು ಸರ್ಕಾರ ರಚನೆ ಮಾಡುತ್ತೇನೆ ಎನ್ನುತ್ತಾರೆ. ನಾನು ಇಲ್ಲಿಯವರೆಗೆ ನೋಡಿದೆ ಅವರು ಸರ್ಕಾರ ರಚನೆ ಮಾಡುವಂತಹ ಯಾವ ಅಂಶಗಳೂ ಕಂಡುಬಂದಿಲ್ಲ. ಅವರು ಸರ್ಕಾರ ರಚನೆ ಮಾಡಲು ಬಹಿರಂಗವಾಗಿ ಸದಸ್ಯರೆಲ್ಲರೂ ತಕ್ಷಣ ಪಕ್ಷ ಬಿಟ್ಟು ಹೊರಗಡೆ ಬನ್ನಿ ಎನ್ನುವ ಹುಯಿಲು ಎಬ್ಬಿಸಿದ್ದರು. ಇವರು ಬಹಿರಂಗವಾಗಿ ಪಕ್ಷಾಂತರಕ್ಕೆ ಪ್ರಚೋದನೆ ಮಾಡುವುದು ಒಳ್ಳೆಯದಲ್ಲ. ಅವರು ಪಕ್ಷಾಂತರ ಮಾಡಿ, ನೀವು ಎಲ್ಲಾ ಬನ್ನಿ ನಾವು ಮತ್ತು ಭಾರತೀಯ ಜನತಾ ಪಕ್ಷದವರು ಕೂಡಿ ಸರ್ಕಾರ ರಚನೆ ಮಾಡೋಣ ಎನ್ನುವುದು ಲೋಕಶಕ್ತಿಯ ಮುಖಂಡರ ವಾದ. ಆದರೆ ಭಾರತೀಯ ಜನತಾ ಪಕ್ಷದವರು ಇಲ್ಲ ಅದಕ್ಕೆ ನಾವು ತಯಾರಾಗಿಲ್ಲ, ನೇರವಾಗಿ ಚುನಾವಣೆಯಾಗಬೇಕು ಎಂದು ಹೇಳುತ್ತಾರೆ. ನಾನು ಇದನ್ನು ಸ್ಪಷ್ಟಪಡಿಸುತ್ತೇನೆ. ಈಗ ಚುನಾವಣೆಗೆ ಹೋಗತಕ್ಕ ಪ್ರಶ್ನೆ ಇಲ್ಲ. ಸಂಪೂರ್ಣವಾಗಿ ಜನತೆ ತಮ್ಮ ಮತದಾನ ಮಾಡಿದ್ದಾರೆ ಅವರು ನಮಗೆ ಕೊಟ್ಟಿರುವುದು ಐದು ವರ್ಷಗಳ ಕಾಲಾವಧಿ. ಆ ಐದು ವರ್ಷ ಮುಗಿದ ನಂತರ ಚುನಾವಣೆಯಾಗಬೇಕೇ ಹೊರತು ಮಧ್ಯದಲ್ಲಿ ಆಗಬಾರದು. ಇದಕ್ಕೆ ನನ್ನ ಸ್ಪಷ್ಟವಾದ ವಿರೋಧ ಇದೆ. ಈ ಸದನಕ್ಕೆ ಕೊಟ್ಟಿರುವ ಐದು ವರ್ಷಗಳ ಕಾಲಾವಧಿಯ ತೀರ್ಪು, ಆ ಐದು ವರ್ಷಗಳು ಮುಗಿಯುವರೆಗೆ ಚುನಾವಣೆಯಾಗುವುದಕ್ಕೆ ಮತ್ತು ವಿಸರ್ಜನೆ ಮಾಡುವುದಕ್ಕೆ ನನ್ನ ಸ್ಪಷ್ಟವಾದ ವಿರೋಧ ಇದೆ. ಈ ಪಕ್ಷಾಂತರಕ್ಕೆ ಮಾತ್ರ ಕಡಿವಾಣವನ್ನು ಹಾಕಬೇಕು. ತಕ್ಷಣ ಒಂದೂವರೆ ತಿಂಗಳಲ್ಲಿ 133 ಜನರ ಬೆಂಬಲ ಇದೆ ಎಂದು ಘೋಷಣೆಯಾಗಿದೆ, ಲೆಕ್ಕ ಹಾಕಿದ್ದಾರೆ. ಅದು ಆದನಂತರ ನಮ್ಮ ಲೋಕಶಕ್ತಿಯ ಮುಖಂಡರಾದಂತಹ ಶ್ರೀ ದೇಶಪಾಂಡೆಯವರು ನೇರವಾಗಿ ರಾಜ್ಯಪಾಲರ ಹತ್ತಿರ ಹೋದರು, ಏಟ್ರಿಯಾ ಹೋಟೆಲಿನಲ್ಲಿ ಸಭೆ, ಎಲ್ಲರನ್ನೂ ಬನ್ನಿ ಬನ್ನಿ ಎಂದು ಕರೆದರು, ಆದರೆ ಯಾರೂ ಹೋಗಲಿಲ್ಲ. ಇವತ್ತು ಬೆಳಿಗ್ಗೆ ಪತ್ರಿಕೆಯಲ್ಲಿ ಅವರೇ ಜನತಾ ದಳಕ್ಕೆ ವಾಪಸ್ಸು ಬರುತ್ತಿದ್ದಾರೆ ಎಂದು ಓದಿದ ಮೇಲೆ ನಮ್ಮ ಪ್ರಜಾಪ್ರಭುತ್ವ ಇಷ್ಟೊಂದು ಹೀನಾಯ ಪರಿಸ್ಥಿತಿಗೆ ಬರಬಾರದಿತ್ತು ಎನ್ನಿಸುತ್ತದೆ. ಇವತ್ತು ನಾನು ಪತ್ರಿಕೆಗಳಲ್ಲಿ ನೋಡಿದ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳನ್ನು ಇವರು ಭೇಟಿ ಮಾಡಿದ್ದಾರೆ. ಮುಖ್ಯಮಂತ್ರಿಗಳ ಜೊತೆ ಭೇಟಿ ಮಾಡಿರುವ ವಿಚಾರವನ್ನು ಅವರು ಗೌಪ್ಯವಾಗಿ ಇಡಲು ಸಾಧ್ಯವಿಲ್ಲ. ಏಕೆಂದರೆ ಅವರು

ರಾಜ್ಯದ ಮುಖ್ಯಮಂತ್ರಿಗಳೇ ಹೊರತು ಅವರ ವೈಯಕ್ತಿಕ ಮಂತ್ರಿಗಳಲ್ಲ. ಸರ್ಕಾರವನ್ನು ಉರುಳಿಸುತ್ತೇನೆ ಎಂದು ಹೊರಗಡೆ ಹೋದ ವ್ಯಕ್ತಿ, ಒಬ್ಬ ಪ್ರಾಮಾಣಿಕ ರಾಜಕಾರಣಿ ಮಾತನಾಡತಕ್ಕ ರೀತಿ ಇದು ಅಲ್ಲ. ಅವರಿಬ್ಬರ ನಡುವೆ ನಡೆದಂತಹ ಮಾತುಕತೆ ಬಹಿರಂಗವಾಗಬೇಕು, ಈ ಸದನದ ಮುಂದೆ ಬರಬೇಕು, ಏಕೆಂದರೆ ಅದು ಅವರಿಬ್ಬರ ಸ್ವತ್ತಲ್ಲ. ಅದು ಹೊರಗಡೆ ಬರಲಿಲ್ಲವೆಂದರೆ ಅದು ಪ್ರಜಾಪ್ರಭುತ್ವ ವ್ಯವಸ್ಥೆಗೆ ನಾಚಿಕೆಗೇಡು. ಇವತ್ತು ಪಕ್ಷ ಬಿಟ್ಟು ಹೋಗುವುದು, ನಾಳೆ ವಿಸರ್ಜನೆ ಎನ್ನುವುದು, ನಾಡಿದ್ದು ಸರ್ಕಾರ ರಚನೆ ಮಾಡುತ್ತೇವೆ ಎನ್ನುವುದು ಮತ್ತೆ ತಿರುಗಿ ಅದೇ ಮುಖ್ಯಮಂತ್ರಿಗಳ ಜೊತೆಗೆ ಬರುವುದು, ಇದು ಸಾಮಾನ್ಯ ತಿಳುವಳಿಕೆ ಇರುವಂತಹವರು ಮಾಡುವ ಕೆಲಸವಲ್ಲ. ನಾವು ಪ್ರಜಾಪ್ರಭುತ್ವಕ್ಕೆ ಅಪಾರವಾದ ಮೌಲ್ಯವನ್ನು ಕೊಟ್ಟಿದ್ದೇವೆ. ಆ ಮೌಲ್ಯಕ್ಕೆ ಭ್ರಷ್ಟಾಚಾರವನ್ನು, ಭ್ರಷ್ಟಾಚಾರದ ಪರಮಾವಧಿಯನ್ನು ತಡೆಯತಕ್ಕ ಪರಿಣಾಮಕಾರಿ ತಿದ್ದುಪಡಿ ಈ ಚುನಾವಣೆ ಕಾಯಿದೆಯಲ್ಲಿ ಬರಲಿಲ್ಲ ಎಂದರೆ ಇದು ಪ್ರಜಾತಂತ್ರಕ್ಕೆ ಕಂಟಕಪ್ರಾಯವಾಗದ್ದು. ಯಾರು ನಂಬುತ್ತಾರೋ, ಬಿಡುತ್ತಾರೆ ನನಗೆ ಗೊತ್ತಿಲ್ಲ. ಈ ಚುನಾವಣೆಗಾಗಿ ಈ ದೇಶದಲ್ಲಿ ಮತ್ತು ರಾಜ್ಯದಲ್ಲಿ ಒಂದು ಕೋಟಿ ರೂಪಾಯಿಯಿಂದ 15 ಕೋಟಿ ರೂಪಾಯಿವರೆಗೆ ಖರ್ಚು ಆಗಿರುವುದು ಉಂಟು. ಒಂದೊಂದು ಕ್ಷೇತ್ರದಲ್ಲಿ ಈ ರೀತಿ ಖರ್ಚು ಮಾಡುವುದಾದರೆ ಇದು ಯಾವ ವರ್ಗಕ್ಕೆ ಅನುಕೂಲ? ಇಷ್ಟು ಹಣ ಖರ್ಚು ಮಾಡಬೇಕಾದರೆ ಇವರಿಗೆ ಹಣ ಯಾರು ಕೊಡುತ್ತಾರೆ? ಬಂಡವಾಳ ಶಾಹಿಗಳು ಆಗಿರಬಹುದು, ಕಾರ್ಖಾನೆಯವರು ಆಗಿರಬಹುದು, ಅಥವಾ ಲೂಟಿ ಮಾಡುವವರು ಆಗಿರಬಹುದು. ಅವರು ಕೊಟ್ಟ ಇಷ್ಟು ಹಣವನ್ನು ಖರ್ಚು ಮಾಡಿ ನಾನು ಚುನಾವಣೆಯಲ್ಲಿ ಗೆದ್ದು ಬಂದರೆ ಈ ವ್ಯವಸ್ಥೆ ಯಾರ ಹಿಡಿತದಲ್ಲಿ ಸಿಗುತ್ತದೆ? ಬಂಡವಾಳ ಶಾಹಿಗಳು ಹಾಡಿಸುತ್ತಾರೆ ಈ ವ್ಯವಸ್ಥೆ ಅವರ ಶಕ್ತಿಗೆ ಸಿಗುತ್ತದೆ. ಮತ್ತು ಶಾಸನ ಸಭೆ, ಲೋಕಸಭೆ ಅವರ ಹಿಡಿತದಲ್ಲಿ ಸಿಗುತ್ತದೆ. ಅವರು ಹೇಳಿದ ಹಾಗೆ ಕೇಳಬೇಕಾಗುತ್ತದೆಯೇ ವಿನಃ ಜನತೆ ಪರವಾಗಿ ಕೆಲಸಗಳನ್ನು ಮಾಡಲು ಆಗುವುದಿಲ್ಲ. ಆದ್ದರಿಂದ ಮದ್ಯ ಮತ್ತು ಹಣದ ಪ್ರಭಾವನ್ನು ನಿಲ್ಲಿಸತಕ್ಕ ಪರಿಣಾಮಕಾರಿಯಾದ ಚುನಾವಣಾ ಕಾಯಿದೆಗೆ ತಿದ್ದುಪಡಿ ಬರಲಿಲ್ಲವಾದರೆ ಇನ್ನು ನೂರು ವರ್ಷಗಳಾದರೂ ಈ ದೇಶದಲ್ಲಿ, ಎರಡು ವರ್ಗಗಳಾಗುವುದು ಖಂಡಿತ. ಒಂದು ಹಣ ಉಳ್ಳವರು ಮಾತ್ರ ಚುನಾವಣೆಗೆ ನಿಲ್ಲಬೇಕು. ಹಣ ಇಲ್ಲದೇ ಇದ್ದವರು ನಿಂತರೆ ತಮ್ಮ ಜೀವನವನ್ನು ಕಳೆದುಕೊಳ್ಳಬೇಕು. ಈ ಪ್ರಜಾಪ್ರಭುತ್ವ ವ್ಯವಸ್ಥೆ ಭದ್ರವಾಗಿ ಉಳಿಯಬೇಕಾದರೆ ಮದ್ಯ ಮತ್ತು ಹಣದ ಪ್ರಭಾವನ್ನು ನಿಲ್ಲಿಸತಕ್ಕ ವ್ಯವಸ್ಥೆಯಾಗಬೇಕು. ಈ ಚುನಾವಣಾ ಪದ್ಧತಿಯನ್ನು ಬದಲಾವಣೆ ಮಾಡಬೇಕು ಇದಕ್ಕಾಗಿ ನಮ್ಮ ಪಕ್ಷ ಕರ್ನಾಟಕದಿಂದ ದೆಹಲಿಯವರೆಗೆ ಹೋರಾಟ ಮಾಡಲು ಸಿದ್ಧ ಎನ್ನತಕ್ಕ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಮುಂದು):-ಚುನಾವಣೆಗಳಲ್ಲಿ ಕೆಲವರು ಗೆಲ್ಲಲೇ ಬೇಕು. ಇದು ನಿಜ. ಆದರೆ ಚುನಾವಣೆ ಎಂದರೆ ಏನು? ತ್ಯಾಗ ಮಾಡಿದವರು, ಹೋರಾಟ ಮಾಡಿದವರು, ಸೇವೆ ಮಾಡಿದವರು, ಕೆಲಸ ಮಾಡಿದವರು, ಇಂಥವರುಗಳು ಚುನಾವಣೆಗೆ ನಿಂತು ಸೋಲುವುದು ಎಂದಾದರೆ ಈ ಚುನಾವಣಾ ವ್ಯವಸ್ಥೆ ನಮಗೆ ಬೇಕೇ? ಇದು ಇವತ್ತಿನ ಪರಿಸ್ಥಿತಿ. ನನಗನ್ನಿಸುತ್ತದೆ, ಇವತ್ತು ಕೆಲವರು ಅಂದರೆ ವಾಜಪೇಯಿಯಂಥವರು ಎಷ್ಟೇ ವರ್ಷ ಇರಲಿ, ಅವರು ಸಂಸತ್ತಿಗೆ ಬರಬೇಕು, ಜಾರ್ಜ್ ಫರ್ನಾಂಡಿಸ್‌ರವರು ಎಷ್ಟೇ ವರ್ಷ ಇರಲಿ, ಅವರು ಸಂಸತ್ತಿಗೆ ಬರಬೇಕು, ಅರ್ಜುನ್ ಸಿಂಗ್‌ರಂಥವರು ಸಂಸತ್ತಿಗೆ ಬರಬೇಕು, ಎನ್.ಡಿ.ತಿವಾರಿಯಂಥವರು ಬರಬೇಕು. ಇಂಥವರು ಬರಬೇಕು. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಈ ವ್ಯವಸ್ಥೆಯಲ್ಲಿ ಲೋಕಸಭೆಯಲ್ಲಿ ಇವರ್‍ಯಾರು ಇಲ್ಲ. 'ಬಿ' ಫಾರಂ ವ್ಯವಸ್ಥೆಯಲ್ಲಿ, ಭ್ರಷ್ಟಾಚಾರದ ನೀತಿಯಲ್ಲಿ ಯಾರೋ ನಿಂತು, ಯಾರೋ ಗೆದ್ದು ಬರುವುದಾದರೆ ಇದು ಅವ್ಯವಸ್ಥೆಯಾಗುತ್ತದೆ ಗೆದ್ದಿರುವವರ ಬಗ್ಗೆ ನಾನು ಆಕ್ಷೇಪಣೆ ಮಾಡಲು ಹೋಗುವುದಿಲ್ಲ. ಉದಾಹರಣೆಗೆ, ಮಂಡ್ಯದಲ್ಲಿ ಮಾದೇಗೌಡರು ಕಾವೇರಿಯ ಬಗ್ಗೆ ನಿರಂತರವಾಗಿ ಹೋರಾಟ ಮಾಡಿದರು. ಕಡಿಮೆ ಹೋರಾಟವನ್ನೇನೂ ಮಾಡಲಿಲ್ಲ, ಹಗಲು ರಾತ್ರಿ ಇದಕ್ಕಾಗಿ ಹೋರಾಟ ಮಾಡಿದರು. ಆದರೆ ಈಗ ಅಲ್ಲಿ ಗೆದ್ದಿರತಕ್ಕಂತವರು ನನ್ನ ಸ್ನೇಹಿತರೇ ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಆದರೆ ಅಂಥ ಕಲಾವಿದರುಗಳನ್ನು ರಾಜ್ಯಸಭೆಗೆ ಅಥವಾ ವಿಧಾನ ಪರಿಷತ್ತಿಗೆ ನಾಮಕರಣ ಮಾಡುವುದರ ಮೂಲಕ ಅವರನ್ನು ನಾವು ವಿಧಾನ ಪರಿಷತ್ತಿಗೆ ನಾಮಕರಣ ಮಾಡುವುದರ ಮೂಲಕ ಅವರನ್ನು ನಾವು ಉಪಯೋಗಿಸಿಕೊಳ್ಳಬೇಕು ಅದೇ ರೀತಿ ಹೇಳುವುದಾದರೆ, ದೇವೇಗೌಡರು, ಮಾಜಿ ಪ್ರಧಾನಿಗಳು ಚುನಾವಣೆಗೆ ನಿಂತಿದ್ದರು. ನಾನು ಹೇಳುತ್ತೇನೆ, ಒಬ್ಬ ಸಿನಿಮಾ ನಟಿಯನ್ನು ಅವರ ವಿರುದ್ಧ ನಿಲ್ಲಿಸಿದ್ದರೆ ದೇವೇಗೌಡರು ಗೆಲ್ಲುತ್ತಿರಲಿಲ್ಲ, ಅಂದರೆ ಇದರ ಅರ್ಥ, ಈ ವ್ಯವಸ್ಥೆ ಹೇಗಿದೆ ಎಂದರೆ ದುಡಿಮೆ ಮಾಡದವರು, ಪ್ರಾಮಾಣಿಕತೆಯಿಂದ, ಕೆಲಸ ಮಾಡಿದಂಥವರು ಸೋಲುತ್ತಾರೆ. ಇಂಥ ಅನೇಕರು ಇವತ್ತು ನಮ್ಮಲ್ಲಿ ಸೋತಿರತಕ್ಕಂಥವರು ಇದ್ದಾರೆ. ಬಂಗಾರಪ್ಪನವರು ಬರಬೇಕಾಗಿತ್ತು. ನಾನು ಗೆದ್ದಿರುವವರ ಬಗ್ಗೆ ಆಕ್ಷೇಪಣೆ ಮಾಡುವುದಿಲ್ಲ. ಡಿ.ಬಿ. ಚಂದ್ರೇಗೌಡರು ಬರಬೇಕಾಗಿದ್ದಂಥವರು ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇವರೆಲ್ಲಾ ಸೋತು, ಅವರಿಗೆ ಸರಿಸಮಾನರಾಗಿರತಕ್ಕಂಥವರು ಗದ್ದರು ಎಂದರೆ ಅವರು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಗೆದ್ದಿದ್ದಾರೆ. ಅದರ ಬಗ್ಗೆ ನನ್ನದೇನೂ ತಕರಾರಿಲ್ಲ. ಕೆಲವು ಸಭೆಗಳಿಗೆ ಯಾರು ಬರಬೇಕು ಎನ್ನುವಂಥಾದ್ದನ್ನು ನಾವು ಪ್ರಾಮಾಣಿಕವಾಗಿ ಯೋಚನೆ ಮಾಡಬೇಕು. ನಾನು ಅನೇಕ ಸಲ ಹೇಳಿದ್ದೇನೆ? ಸ್ಪೀಕರ್ ಸ್ಥಳದಲ್ಲಿ ಕುಳಿತಿರುವಂಥವರು ಚುನಾವಣೆಗೆ ನಿಂತಿದ್ದರೆ, ಬೇರೆ ವಿರೋಧ ಪಕ್ಷದವರು ಅವರ ವಿರುದ್ಧ ಅಭ್ಯರ್ಥಿಯನ್ನು ಚುನಾವಣೆಗೆ ನಿಲ್ಲಿಸಬಾರದು ಎಂದು. ಏಕೆಂದರೆ, ಸ್ಪೀಕರ್ ಆಗಿದ್ದಂಥವರು ಎಲ್ಲಾಕಡೆಗಳಲ್ಲಿ ಈ ಸದನವನ್ನು ನೋಡಿಕೊಂಡಂಥವರು. ಅಂಥವರ ವಿರುದ್ಧ ಬೇರೆಯವರನ್ನು ಚುನಾವಣೆಗೆ ನಿಲ್ಲಿಸಬಾರದು ಎನ್ನುವುದನ್ನು ನಾನು ಮೊದಲಿನಿಂದಲೂ ಒತ್ತಾಯ ಮಾಡುತ್ತಿದ್ದೇನೆ. ಅನೇಕರ ಬಗ್ಗೆ ನಾನು ಹೇಳುತ್ತೇನೆ, ನಮ್ಮಲ್ಲಿ ಅನೇಕ ಮುಖಂಡರುಗಳು ಈ ಸದನಕ್ಕೆ ಬರುವುದಕ್ಕೆ ಸಾಧ್ಯವಾಗಿಲ್ಲ, ಅವರು ಸೋತಿದ್ದಾರೆ. ಇದನ್ನು ನಾವು ನೋಡಿದಾಗ ಇಂಥ ಕೆಲವರು

ಚುನಾವಣೆಯಲ್ಲಿ ಗೆಲ್ಲತಕ್ಕಂಥ ವ್ಯವಸ್ಥೆಯನ್ನು ಬೇರೆ ಪಕ್ಷದವರಾದ ನಾವು ಮಾಡಿಕೊಡಬೇಕು. ಅವರು ಈ ಸದನಕ್ಕೆ ಬರಬೇಕು, ಈ ಸದನದ ಮೌಲ್ಯ ಜಾಸ್ತಿಯಾಗಬೇಕು, ಮತ್ತು ಗೌರವ ಜಾಸ್ತಿಯಾಗಬೇಕು ಎನ್ನುವ ತಿಳುವಳಿಕೆ ಬರಬೇಕು. ಉಪಾಧ್ಯಕ್ಷರೆ, ತಮಗೆ ಒಂದು ವಿಷಯ ಜ್ಞಾಪನದಲ್ಲಿರಬಹುದು, ಸಾಹುಕಾರ್ ಚನ್ನಯ್ಯನಂಥವರು ಎರಡು ಸಲ ಸೋತರು. ವರು ಈ ರಾಜ್ಯ ಕಟ್ಟಿದಂಥವರು ಮತ್ತು ಸ್ವಾತಂತ್ರ್ಯಕ್ಕಾಗಿಯೂ ಹೋರಾಟ ಮಾಡಿದಂಥವರು ಅಂಥವರು ಸೋತರು ಎಂದರೆ ನಮಗೆ ಎಷ್ಟು ನೋವಾಗುತ್ತದೆ ಅಂಥವರು ಈ ಸದನಕ್ಕೆ ಬರಬೇಕು. ನಮ್ಮ ಸೌಭಾಗ್ಯದಿಂದ ಅವರು ಒಂದು ಸಲ ಬಂದರು. ನಾವೆಲ್ಲಾ ಒಟ್ಟಿಗೆ ಇದ್ದೆವು. 1967ರಲ್ಲಿ ನಮ್ಮ ಜೊತೆಯಲ್ಲಿ ಅವರು ಇದ್ದರು. ನನಗನ್ನಿಸುತ್ತದೆ ಸಾಹುಕಾರ್ ಚನ್ನಯ್ಯನಂಥವರು ಇಲ್ಲಿ ಬಂದು ಕುಳಿತುಕೊಂಡಾಗ ಈ ಸದನದ ಗಾಂಭೀರ್ಯತೆ ಮತ್ತು ಶಕ್ತಿ ಹೆಚ್ಚುತ್ತದೆ ಎನ್ನುವ ಮಾತನ್ನು ನಾನು ತಮ್ಮ ಮೂಲಕ ಸದನದ ಗಮನಕ್ಕೆ ತರುತ್ತಿದ್ದೇನೆ. ಇವತ್ತು ರಾಜ್ಯಸಭಾ ಚುನಾವಣೆಗಳಲ್ಲಿ ಏನಾಗಿದೆ ಎಂದರೆ, ಯಾರೋ ಒಬ್ಬರಿಗೆ ಕೊಟ್ಟು ಬಿಡೋಣ ಎನ್ನುವಂತಾಗಿದೆ ರಾಜ್ಯಸಭೆಗೆ ನಾವು ಯಾರನ್ನು ಕಳುಹಿಸಬೇಕು ಎನ್ನುವಂಥ ಒಂದು ಯೋಚನೆ, ವ್ಯವಸ್ಥೆ ನಮ್ಮಲ್ಲಿ ಬರಬೇಕು. ಮೊದಲನೆಯದಾಗಿ, ಯಾರನ್ನು ಕಳುಹಿಸಬೇಕು ಎನ್ನುವುದು, ಎರಡನೆಯದಾಗಿ, ಹೊರಗಿನವರು ಬರಬಾರದು. ಅದು ಯಾವುದೇ ಪಕ್ಷದವರಾಗಲಿ, ಕರ್ನಾಟಕದಲ್ಲಿ ಹೊರಗಿನವರನ್ನು ತಂದು ಇಲ್ಲಿ ಚುನಾಯಿಸಿ ಗೆಲ್ಲಿಸತಕ್ಕಂಥಾದ್ದಕ್ಕೆ ನಮ್ಮ ಕರ್ನಾಟಕ ಧರ್ಮಛತ್ರವಾಗಬಾರದು, ಹೊರಗಿನವರನ್ನು ತಂದು, ಅಲ್ಲಿ ಸೋತಿರುವಂಥವರನ್ನು ಇಲ್ಲಿ ಗೆಲ್ಲಿಸುವುದು, ಅಲ್ಲಿಗೆ ಅನುಕೂಲವಾಗಿರುವಂಥವರನ್ನು ಗೆಲ್ಲಿಸುವುದು ನಮ್ಮಲ್ಲಿ ಆಗಬಾರದು. ಇವತ್ತು ನನಗನ್ನಿಸುತ್ತದೆ,ಎಂ.ಎಸ್. ಗುರುಪಾದಸ್ವಾಮಿಯವರು ಕರ್ನಾಟಕದಲ್ಲಿ ಒಬ್ಬ ಅತ್ಯಂತ ಎತ್ತರವಾದಂಥ ವ್ಯಕ್ತಿ. ಜವಹರಲಾಲ್ ನೆಹರೂರವರ ಕಾಲದಲ್ಲಿ ಬಂದಂಥವರು, ಅವರ ಭಾಷಣಗಳು, ಅವರ ಮಾತು, ಅವರ ನೀತಿ, ನಡವಳಿಕೆ ಇವೆಲ್ಲವನ್ನೂ ನೋಡಿದರೆ ಒಂದು ಹಂತದಲ್ಲಿ ನಾನು ಬಹಳ ಪ್ರೌಢಿಮೆಯಿಂದ ಹೇಳುತ್ತೇನೆ, ಅವರು ಈ ದೇಶದ ಪ್ರಧಾನಿಯಾಗಲೂ ಲಾಯಕ್ಕು ಆಗಿರತಕ್ಕ ವ್ಯಕ್ತಿ ಎನ್ನುವ ಮಾತನ್ನು ನಾನು ಪ್ರಾಮಾಣಿಕತಯಿಂದ ಹೇಳುತ್ತೇನೆ. ಆದರೆ ಇವತ್ತು ಜನತಾದಳದಲ್ಲಿ ಅವರ ಹೆಸರೇ ಇಲ್ಲ. ಅವರು ಇದ್ದಾರೆ ಎನ್ನುವುದೂ ಸಹ ನಿಮ್ಮಲ್ಲಿ ಯಾರ ಗಮನಕ್ಕೂ ಬಂದಿಲ್ಲ. ನಾನು ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ರಾಜ್ಯಸಭೆಗೆ ಎಂಥವರು ಹೋಗಬೇಕು ಎನ್ನುವುದನ್ನು ನಮ್ಮಲ್ಲಿ ಅರ್ಥಮಾಡಿಕೊಳ್ಳದಿದ್ದರೆ ಇದು ನಿಜವಾಗಿಯೂ ಬಹಳ ಕಷ್ಟವಾಗುತ್ತದೆ ಮತ್ತು ನಾಮಕರಣಗಳ ಬಗ್ಗೆ ಹೇಳುವುದಾದರೆ ಅವು ರಾಜಕೀಯ ನಾಮಕರಣವಾಗಿವೆ. ವಿಧಾನ ಪರಿಷತ್ತಿಗೆ ಮೂರು ನಾಮಕರಣ ಸ್ಥಾನಗಳಿವೆ. ಇವು ರಾಜಕೀಯ ನಾಮಕರಣ. ರಾಜ್ಯಸಭೆಗೆ ಆಗತಕ್ಕಂಥಾದ್ದೂ ರಾಜಕೀಯ ನಾಮಕರಣ. ಇದು ಹೀಗೆ ಆಗಬಾರದು. ಈ ವಿಚಾರದಲ್ಲಿ ನಾವು ಇವತ್ತು ಇಲ್ಲಿರುವ ಹನುಮಂತಯ್ಯನವರ ಚಿತ್ರಪಟಕ್ಕೆ ಕೈಯೆತ್ತಿ ನೂರಲ್ಲ, ಸಾವಿರ ಸಾವಿರ ಸಲ ನಮಸ್ಕರಿಸಬೇಕು, ಅವರ ಕಾಲದಲ್ಲಿ ಟಿ. ಚೌಡಯ್ಯನವರು ಮತ್ತು ಪ್ರೌಢಿಮೆ ಇರತಕ್ಕಂಥ ಎಂಥೆಂಥ ಕಲಾವಿದರುಗಳನ್ನು ನಾಮಕರಣ ಮಾಡಿ, ಆ ಮೂರು ಸ್ಥಾನಗಳೂ ಅವರಿಗೇ ಸಲ್ಲಬೇಕು ಅನ್ನತಕ್ಕಂಥ ಮಾತಿಗೆ ಒಂದು ಗೆರೆಯನ್ನು ಹಾಕಿ ಕೊಟ್ಟಂಥ ವ್ಯಕ್ತಿ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಇವತ್ತು ನಾವು ಅವರನ್ನು

ನೆನಸಿಕೊಳ್ಳಬೇಕು. ಇವತ್ತು ನಾನು ನೇರವಾಗಿ ಈರಾಜ್ಯದ ಎಲ್ಲಾ ಪಕ್ಷದವರನ್ನು ಕೇಳುತ್ತಿದ್ದೇನೆ, ತತ್ವ, ನೀತಿ ಮೇಲೆ ಮತದಾನ ಸಾಧ್ಯವೇ ಆಗಿಲ್ಲ. ಇವತ್ತು ನಮ್ಮ ಚಾಮರಾಜನಗರದಲ್ಲಿ ಒಂದು ರೀತಿಯಾಯಿತು, ಶಿವಮೊಗ್ಗದಲ್ಲಿ ಇನ್ನೊಂದು ರೀತಿಯಾಯಿತು. ಬೆಂಗಳೂರಿನಲ್ಲಿ ಹೋದಸಾರಿ ಮೂವತ್ತು ಸಾವಿರ ಮತಗಳ ಲೀಡಿಂಗ್ ತೆಗೆದುಕೊಂಡವರು. ಈ ಸಲ ಮೂರು ಪಕ್ಷ ಲೀಡಿಂಗ್ ತೆಗೆದುಕೊಂಡಿದ್ದಾರೆ ಎಂದರೆ ಜನ ಏನು ಮಾಡಿದ್ದಾರೆ? ಇದೇನು ಮಾಯಾ ಮಂತ್ರವೋ? ಚುನಾವಣೆಯ ವ್ಯವಸ್ಥೆ ಯಾವ ದಿಕ್ಕಿಗೆ ಹೋಗಿದೆ ಎಂದರೆ ತತ್ವ ಮತ್ತು ನೀತಿಯನ್ನು ಗಾಳಿಗೆ ತೂರಿದರು. ಈ ರೀತಿ ಎಲ್ಲವನ್ನೂ ಗಾಳಿಗೆ ತೂರಿ ಯಾವುದೋ ಒಂದು ಹಂತದಲ್ಲಿ ಕರುಣೆ, ವಿಶ್ವಾಸದಿಂದ ಅವರಿಗೆ ಒಂದು ಸಲ ಕೊಟ್ಟಿದ್ದೇವೆ, ಇವರಿಗೆ ಒಂದು ಸಲ ಕೊಡೋಣ ಎಂದು ಕೊಟ್ಟಿದ್ದಾರೆ. ಯಾರಿಗಾದರೂ ಕೊಡಿ. ಆದರೆ ನೀವು ಮತವನ್ನು ಏತಕ್ಕಾಗಿ ಕೊಡುತ್ತೀರಿ? ಯಾವುದಕ್ಕಾಗಿ ಮತ ಕೊಡುತ್ತೀರಿ? ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಇನ್ನೂ ನಾವು ಮತದಾರರನ್ನು ಎಚ್ಚರ ಮಾಡಿಲ್ಲ. ಮತದಾರರನ್ನು ಹೇಗೋ ಒಲಿಸಿಕೊಂಡು ನಾವು ಮತಹಾಕಿಸಿಕೊಳ್ಳುವುದನ್ನು ಮಾಡಿದ್ದೇವೆಯೇ ಹೊರತು ಪ್ರಾಮಾಣಿಕವಾಗಿ ಮತದಾರರನ್ನು ಎಚ್ಚರಿಕೆ ಮಾಡಿಲ್ಲ. ಇದು ಅತ್ಯಂತ ಅಪಾಯಕಾರೀ ಬೆಳವಣಿಗೆ. ಮತ್ತು ಪಕ್ಷಾಂತರ ಬಗ್ಗೆ ಹೇಳುವುದಾದರೆ ನಮಗೆ ನಾಚಿಕೆಯಾಗುತ್ತದೆ, ಈ ದೇಶದ ಜನ ನಮ್ಮನ್ನು ಏನನ್ನುತ್ತಾರೆ ಎನ್ನುವುದು ಗೊತ್ತಿಲ್ಲ, ಇವತ್ತು ನಾನು ಕಾಂಗ್ರೆಸ್ಸಿಗೆ ಸೇರುತ್ತೇನೆ, ಅಲ್ಲಿ ನನಗೆ ಟಿಕೆಟ್ ಸಿಗಲಿಲ್ಲ ಎಂದರೆ ನಾಳೆ ಬೆಳಿಗ್ಗೆ ಬಿ.ಜೆ.ಪಿ ಯಲ್ಲಿರುತ್ತೇನೆ. ಅಲ್ಲಿ ಟಿಕೆಟ್ ಸಿಗಲಿಲ್ಲವೆಂದರೆ ನಾಡಿದ್ದು ಜನತಾದಳವೆಂದರೆ ಇದು ನಿಜವಾಗಿಯೂ ಅಸಹ್ಯವಾಗುತ್ತದೆ. ಇಷ್ಟೇ ಅಲ್ಲದೆ, ಈ ಪಕ್ಷ ಬಿಟ್ಟ ತಕ್ಷಣ ಆ ಪಕ್ಷದಲ್ಲಿ ಸೀಟು ಕೊಡುತ್ತಾರೆ. ಇಲ್ಲಿ ಕಾದಿರುತ್ತಾರೆ, ನಾವು ಸೀಟು ಕೊಡುವುದಕ್ಕೆ ತಯಾರಿದ್ದೇವೆ, ನೀವು ಬನ್ನಿ ಎಂದು. ಆ ಪಕ್ಷದ ನೀತಿಯನ್ನು ಹಗಲು ರಾತ್ರಿ ಒಪ್ಪಿದಂಥ ವ್ಯಕ್ತಿ, ಆ ಪಕ್ಷ ಬಿಟ್ಟು ಬಂದ ನಂತರ ಇಲ್ಲಿ ಟಿಕೆಟ್ ಕೊಡುವುದು, ನಂತರ ಅವರನ್ನು ಚುನಾವಣೆಯಲ್ಲಿ ಗೆಲ್ಲಿಸುವುದು ಆಗುತ್ತಿದೆ. ಇದು ನೀತಿಯೇ? ನಿಯಮವೇ? ಹೀಗಾದರೆ ನಮ್ಮ ದೇಶದ ಗತಿಯೇನಾಗಬೇಕು? ಸ್ವಾತಂತ್ರ್ಯ ಬಂದು 50 ವರ್ಷವಾಗಿದೆ. ಮುಂದೆ ಅದರ ಗತಿಯೇನಾಗಬೇಕು? ನಾವು ಎಲ್ಲಿಗೆ ತಲುಪುತ್ತೇವೆ? ಗೆದ್ದವರ ಬಗ್ಗೆ ಖಂಡಿತವಾಗಿ ನನ್ನ ತಕರಾರಿಲ್ಲ. ಜನ ಅವರಿಗೆ ಮತ ನೀಡಿದ್ದಾರೆ, ಸಂತೋಷ ಆದರೆ ಯಾವ ಆಧಾರದ ಮೇಲೆ ಚುನಾವಣೆ ನಡೆಯುತ್ತಿದೆ? ಯಾವ ಆಧಾರದ ಮೇಲೆ ಮತದಾನ ನಡೆಯುತ್ತಿದೆ? ನಮ್ಮ ಪಕ್ಷದಲ್ಲಿ ಹತ್ತಾರು ಜನರಿಲ್ಲ. ನಾನು ಇರುವುದು ಒಬ್ಬನೇ. ನಿಮ್ಮಲ್ಲಿ 30 ಜನ, 40 ಜನ, 50 ಜನ ಶಾಸಕರು ಇರತಕ್ಕಂಥ ಪಕ್ಷಗಳು 'ಬಿ' ಫಾರಂ ಕೊಡುವಾಗ, ಆ ವ್ಯಕ್ತಿಯ ಗುಣವನ್ನು ನೋಡಬೇಕು. 'ಬಿ' ಫಾರಂಗೆ ನೀವು ಮತ ತೆಗೆದುಕೊಳ್ಳುತ್ತಿದ್ದೀರಿ. ಇತ್ತೀಚಿನ ದಿನಗಳಲ್ಲಿ ನಮ್ಮ ವ್ಯವಸ್ಥೆಯೆಂದರೆ 'ಬಿ' ಫಾರಂಗೆ ಮತ. 'ಬಿ' ಫಾರಂ ಕೊಟ್ಟವರಿಗೆ ಮತ. ವ್ಯಕ್ತಿಯನ್ನು ನೋಡುವುದಿಲ್ಲ, ಪಕ್ಷ ನೋಡುತ್ತಾರೆ, ಮತ ಕೊಡುತ್ತಾರೆ. ನೀವು 'ಬಿ' ಫಾರಂಗೆ ಕೊಡುವಾಗ ಅಡಿಯಿಂದ ಮುಡಿಯವರೆಗೆ ನೋಡಿ, ಈ ವ್ಯಕ್ತಿಯ ಪರಿಸ್ಥಿತಿ ಏನು? ಎಷ್ಟರಮಟ್ಟಿಗೆ ಇವರು ರಾಜ್ಯದಲ್ಲಿ ಕೆಲಸ ಮಾಡಿದ್ದಾರೆ ಎನ್ನತಕ್ಕಂಥ ಚಿಂತನೆ ದೇಶದಲ್ಲಿ ಆಗಬೇಕು. ಕನಿಷ್ಟ ಇವರ ತ್ಯಾಗ ಏನು? ಎನ್ನುವ ಮನೋಭಾವನೆಯನ್ನು ನೋಡದೆ ಟಿಕೆಟ್ ಕೊಡುವುದಾದರೆ ಈ ದೇಶದಲ್ಲಿ ಅದು

ಒಳ್ಳೆಯ ಸಂಪ್ರದಾಯವಾಗುವುದಿಲ್ಲ. 'ಬಿ' ಫಾರಂ ವ್ಯವಸ್ಥೆಯಿಂದ ಪ್ರಜಾತಂತ್ರ ಉಳಿಯುತ್ತದೆ ಎನ್ನುವ ನಂಬಿಕೆ ನನಗೆ ಇತ್ತೀಚಿನ ದಿನಗಳಲ್ಲಿ ಹೋಗಿದೆ. ಹೋರಾಟ ಮಾಡಿಯೋ, ಗದ್ದಲ ಮಾಡಿಯೋ, ಹೆದರಿಸಿಯೋ, ಜಾತಿಯೋ ಹೀಗೆ ಏನಾದರೂ ಒಂದು ಹೇಳಿ 'ಬಿ' ಫಾರಂ ತೆಗೆದುಕೊಳ್ಳುವುದು, ನಂತರ ಚುನಾವಣೆಯಲ್ಲಿ ಗೆಲ್ಲುವುದು, ಚುನಾವಣೆಯಲ್ಲಿ ಜನರೆಲ್ಲಾ ಪಕ್ಷಗಳ ಮೇಲಿರುವ ಒಲವಿನ ಮೇಲೆ ಮತ ಹಾಕುತ್ತಾರೆ. ಇದೇ ರೀತಿಯಾದರೆ ಇದು ಒಳ್ಳೆಯ ನೀತಿಯಲ್ಲ ಎನ್ನತಕ್ಕಂಥ ಮಾತನ್ನು ನಾನು ತಮಗೆ ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ ಪಕ್ಷಾಂತರಕ್ಕೆ ತಡೆ ಹಾಕಬೇಕಾದರೆ ಪಕ್ಷಾಂತರಕ್ಕೆ ಕಡ್ಡಾಯವಾಗಿ ತಡೆ ಬರಲೇಬೇಕು. ಪಕ್ಷವನ್ನು ಬಿಟ್ಟ ನಂತರ, ಒಂದು ಪಕ್ಷವನ್ನು ಬಿಟ್ಟು ತಕ್ಷಣವೇ ಅವರು ಎಲ್ಲೇ ಇರಲಿ, ಲೋಕಸಭೆಯಲ್ಲಿರಬಹುದು, ಶಾಸನ ಸಭೆಯಲ್ಲಿರಬಹುದು ಅವರ ಸದಸ್ಯತ್ವ ರದ್ದಾಗಲೇಬೇಕು. ಅದಕ್ಕೋಸ್ಕರ ಅಧ್ಯಕ್ಷರಿಗೆ ಅರ್ಜಿ ಹಾಕಿ, ಅದನ್ನು ಸದಸ್ಯತ್ವ ರದ್ದಾಗಲೇಬೇಕು. ಅದಕ್ಕೋಸ್ಕರ ಅಧ್ಯಕ್ಷರಿಗೆ ಅರ್ಜಿ ಹಾಕಿ, ಅದನ್ನು ಅಧ್ಯಕ್ಷರು ಪರಿಶೀಲನೆ ನಡೆಸಬೇಕು, ಅವರನ್ನು ಕೇಳಿ, ಇವರನ್ನು ಕೇಳಿ ತೆಗೆದು ಹಾಕತಕ್ಕದ್ದಲ್ಲ. ಇದು ಇವತ್ತಿನ ಪರಿಸ್ಥಿತಿ. ಈ ಪಕ್ಷದಿಂದ ಗೆದ್ದಮೇಲೆ, ನಾಳೆ ಬೆಳಿಗ್ಗೆ ಬೇರೆ ಪಕ್ಷ ಸೇರಿದ ತಕ್ಷಣ, ಬೇರೆ ಪಕ್ಷ ಸೇರಿರುವುದು ಗೊತ್ತಾದ ತಕ್ಷಣವೇ ಸದಸ್ಯತ್ವ ರದ್ದಾಗತಕ್ಕಂಥ ಪರಿಣಾಮಕಾರಿಯಾದ ತಿದ್ದುಪಡಿ ಇವತ್ತು ಸ್ಪಷ್ಟವಾಗಿ ಬರಬೇಕಾಗಿದೆ. ಮತ್ತು ನನ್ನ ಸಲಹೆಯೆಂದರೆ ಕಡ್ಡಾಯ ಮತದಾನ ಪದ್ಧತಿ ಜಾರಿಗೆ ಬರಬೇಕು. ಬಹುಶಃ ಇದನ್ನು ಬಹಳ ಜನ ಒಪ್ಪುವುದು, ಬಿಡುವುದು ಪ್ರಶ್ನೆ ಬೇರೆ ಕಡ್ಡಾಯ ಮತದಾನ ಜಾರಿಗೆ ಬಂದರೆ ಬಹಳಷ್ಟು ಭ್ರಷ್ಟಾಚಾರ ನಿಲ್ಲುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ, ಈ ಚುನಾವಣಾ ಕಾಯಿದೆ ಸಮಗ್ರವಾಗಿ ಬದಲಾವಣೆಯಾಗುವುದಕ್ಕೆ ಎಲ್ಲಾ ಪಕ್ಷದವರು ಮತ್ತು ದೇಶದ ಎಲ್ಲ, ಚಿಂತಕರೂ ಇದರ ಬಗ್ಗೆ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಬೇಕು ಎನ್ನುವುದು ನನ್ನ ಕಳಕಳಿಯ ಮನವಿ. ಇವತ್ತು ಈ ಜನತಾದಳ ಸರ್ಕಾರಕ್ಕೆ ಆಡಳಿತ ಮಾಡಲು 5 ವರ್ಷ ಕೊಟ್ಟಿರತಕ್ಕಂಥಾದ್ದು ಇದೆ. ಈ ಮಧ್ಯೆ ಚುನಾವಣೆಯಲ್ಲಿ ತಮಗೆ ಕೊಟ್ಟಂಥ ಮತ ಅಂದರೆ ಈ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ತಮಗೆ ಕೊಟ್ಟಂಥ ಮತ ಅಂದರೆ ಈ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿನ ಮತವನ್ನು ನೋಡಿದಾಗ ಅದು ನಿಮಗೆ ವಿರುದ್ಧವಾಗಿದೆ. ಇದಕ್ಕೆ ಕಾರಣವೇನು? ನಿಮ್ಮ ಆಡಳಿತದಲ್ಲಿ ಎಲ್ಲೋ ಲೋಪವಿರಬೇಕು. ಲೋಪ ಇಲ್ಲದಿದ್ದರೆ ಸಾಮಾನ್ಯವಾಗಿ ಜನ ಈ ರೀತಿ ಮಾಡುತ್ತಾರೆಂದು ಪ್ರಶ್ನೆ ಅಲ್ಲ. ಇವತ್ತು ಈ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮಾನ್ ಜೆ.ಹೆಚ್. ಪಟೇಲರು ಒಬ್ಬ ಒಳ್ಳೆಯ ವ್ಯಕ್ತಿತ್ವ ಇರತಕ್ಕಂಥವರು, ಮತ್ತು ಬಹಳ ಪ್ರಾಮಾಣಿಕವಾಗಿರಬೇಕೆಂದು ಹೇಳುವವರು. ಯಾವುದೇ ಹಗರಣಗಳು ಇಲ್ಲದೆ ಇರುವ ಒಬ್ಬ ವ್ಯಕ್ತಿ. ಆದರೆ ಸೋಲುವುದಕ್ಕೆ ಕಾರಣವೇನು? ಅವರು ಆಡಳಿತವನ್ನು ನಡೆಸುವುದರಲ್ಲಿ ವೈಯುಕ್ತಿವಾದ ದ್ವೇಷ ಸಾಧನೆ ನಮ್ಮಲ್ಲಿ ಯಾರಿಗೂ ಇಲ್ಲ. ನಾನು ಅನೇಕ ಕಡೆ ಮಾತನಾಡಿದಾಗ ಪಟೇಲರು ಇರಲಿ ಎನ್ನುವ ಭಾವನೆ ನಮ್ಮಲ್ಲಿ ಇದೆ. ಉದ್ದೇಶ ಏನು ಅವರ ಒಳ್ಳೆಯತನ ಮತ್ತು ಅವರ ನಡತೆ. ನಮ್ಮ ಜೊತೆ ಮಾತನಾಡುವ ಶೈಲಿ ಇವೆಲ್ಲಾ ನೋಡಿದಾಗ ಒಂದು ಕಡೆ ಅವರು ಯಾವ ಹಿನ್ನೆಲೆಯಲ್ಲಿ ಬೆಳೆದು ಬಂದರು, ಸಮಾಜವಾದದ ಹಿನ್ನೆಲೆಯಲ್ಲಿ ಬೆಳೆದು ಬಂದ ಶ್ರೀಮಾನ್ ಜೆ.ಹೆಚ್.

ಪಟೇಲರು ಅದೇ ಧಾಟಿಯಲ್ಲೇ ನಡೆದು ಬಂದಿದ್ದರೆ ಬಹುಶಃ ನಮ್ಮ ಸರ್ಕಾರದಲ್ಲಿ ಈ ಒಂದು ಲೋಕಸಭಾ ಚುನಾವಣೆಯಲ್ಲಿ ತಾವು ಅಷ್ಟು ಅಪಾಯಕ್ಕೆ ಸಿಕ್ಕುತ್ತಿರಲಿಲ್ಲವೇನೋ ಎಂಬುದು ನನ್ನ ಭಾವನೆ ಮುಖ್ಯ ಮಂತ್ರಿಗಳು ಒಂದು ರೀತಿ ಅವರು, ಸಚಿವರುಗಳು ಒಂದು ರೀತಿ ಆದರು, ಇವರಿಬ್ಬರಿಗೆ ದೊಡ್ಡ ಕಂದಕ ಆಗಿ ಹೋಯಿತು. ಯಾವ ಸಚಿವರು ಯಾವ ಸಚಿವ ಸಂಪುಟದಲ್ಲಿ ಏನೇನು ಆಗುತ್ತದೆ, ಏನು ಮಾಡುತ್ತಿದ್ದಾರೆ ಎನ್ನತಕ್ಕಂತಹ ವ್ಯವಸ್ಥೆಯನ್ನು ಅವರು ನೋಡಲೂ ಇಲ್ಲ. ನಿಮ್ಮ ಬಗ್ಗೆ ನನಗೆ ನಂಬಿಕೆ ಇದೆ ನಡೆದುಕೊಂಡು ಹೋಗಿ ಎಂದು ಬಿಟ್ಟರು. ಯಾರಿಗೂ ತೊಂದರೆ ಕೊಡಬೇಕು, ಪಿತೂರಿ ಮಾಡಬೇಕು ಎನ್ನುವ ಭಾವನೆ ಅವರಲ್ಲಿ ಇಲ್ಲ. ರಾತ್ರಿ ಎಲ್ಲಾ ಫೈಲ್ ನೋಡಬೇಕು, ಯಾರಿಗೆ ಫೈಲ್‌ಗೆ ಗೆರೆ ಹಾಕಬೇಕು, ಅದು ಯಾವುದೂ ಇಲ್ಲ. ಇದು ಸನ್ಯಾಸಿಗಳಿಗೆ ಲಾಯಕ್ಕೇ ಹೊರತು ಮುಖ್ಯ ಮಂತ್ರಿಗಳಿಗೆ ಅಲ್ಲ. ಅವರು ಸನ್ಯಾಸಿ ಆಗುವುದಕ್ಕೆ ತಯಾರಿಲ್ಲ. ಅದು ಸತ್ಯ. ಅವರು ಪ್ರಾಮಾಣಿಕವಾಗಿ ಸನ್ಯಾಸಿಯಾಗುವುದಿಲ್ಲ. ಅವರ ನಡೆ ನುಡಿ ನೋಡಿದರೆ ಸನ್ಯಾಸಿ ಆಗುವುದಕ್ಕೆ ಯಾವುದೇ ಗುರುತು ಇಲ್ಲ. ಅದು ಸ್ಪಷ್ಟ. ಇದರ ಬಗ್ಗೆ ನನ್ನ ತಕರಾರು ಏನೂ ಇಲ್ಲ. ಅವರನ್ನು ನಾನು ಈಗ ತಿದ್ದುವುದಕ್ಕೆ ಆಗುತ್ತದೆಯೇ? ಸನ್ಯಾಸಿಯಾಗಿ, ಸನ್ಯಾ ಸೇರಿ ಎಂದರೆ ಇವೆಲ್ಲಾ ನಂಬ ಬೇಡಿ ಎಂದು ಹೇಳಿದರು. ಅದು ಸತ್ಯ. ಆದ್ದರಿಂದ ಈ ಒಂದು ನಡೆಯನ್ನೇ ದುರುಪಯೋಗಪಡಿಸಿಕೊಂಡು ರಾಜ್ಯದಲ್ಲಿ ಆಡಳಿತ ಅಷ್ಟು ಜೋರಾಗಿ ನಡೆಯ ಒಂದು ಹಂತದಲ್ಲಿ ನಮ್ಮಲ್ಲಿ ಹಳ್ಳಿ ಕಡೆ ರಥ ಹೋಗುವಾಗ ಭಾರಿ ಜೋರಾಗಿ ರಥ ಬಂದಾಗ ಗೊದಮ ಎಂದು ಕೊಡುತ್ತಾರೆ. ಗೊದಮ ಕೊಟ್ಟರೆ ಎಂತಹ ರಥ ಬಂದರೂ ನಿಲ್ಲುತ್ತದೆ. ಪರಿಸ್ಥಿತಿ ಹೀಗಿರುವಾಗ ಅವರಿಗೆ ಚೆನ್ನಾಗಿ ಆರೋಗ್ಯವಾಗಿರಬೇಕು. ಮತ್ತು ಸರ್ಕಾರವು ಆರೋಗ್ಯವಾಗಿರಬೇಕು. ಅವರು ಯಾವಾಗ ಅನಾರೋಗ್ಯಕರವಾದ ವ್ಯವಸ್ಥೆಯಲ್ಲಿದ್ದರೆ, ಸರ್ಕಾರ ಕೂಡ ಆರೋಗ್ಯಕರವಾಗಿರುತ್ತದೆ. ಯಾವಾಗ ಅನಾರೋಗ್ಯಕರವಾದ ವ್ಯವಸ್ಥೆಗೆ ಹೋಗುತ್ತಾರೆ ಆಗ ಈ ಸರ್ಕಾರವೂ ಅನಾರೋಗ್ಯಕ್ಕೆ ಬರುತ್ತದೆ. ಇದು ಪರಿಸ್ಥಿತಿ ಅವರಿಗೆ ಇನ್ನು ಒಂದು ವರ್ಷ ಇದೆ ಈ ರಾಜ್ಯಕ್ಕೆ ಏನೂ ಮಾಡಲಿಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಹೊಸ ಜಿಲ್ಲೆಗಳು ಈ ಶತಮಾನದಲ್ಲಿ ಆಗುತ್ತಿರಲಿಲ್ಲ. ಹೊಸ ಜಿಲ್ಲೆಗಳನ್ನು ಮಾಡಿದ್ದಾರೆ ನಾನು ಅವರಿಗೆ ಮುಕ್ತ ಕಂಠದಿಂದ ಹೊಗಳುತ್ತೇನೆ. ಇನ್ನು ಮುಂದೆ ಯಾವ ಮುಖ್ಯ ಮಂತ್ರಿಗಳು ಬಂದರೂ ಮಾಡುವುದಕ್ಕೆ ಆಗುತ್ತಿರಲಿಲ್ಲ. 50 ಜನ ಮುಖ್ಯ ಮಂತ್ರಿಗಳು ಬಂದರೂ ಅವರಿಗೆ ಒಂದು ತರಹ ದಿಟ್ಟತನ. ಧೈರ್ಯ ನೋಡೋಣ ಇದು ಏನಾಗುತ್ತದೆ ಆದ ಹಾಗೆ ಆಗಲಿ ಎಂದು. ಆ ಧೈರ್ಯ ಸಾಹಸದಿಂದ ಜಿಲ್ಲೆಗಳ ನಿರ್ಮಾಣವಾಯಿತು. ಅದಕ್ಕೆ ಎಷ್ಟು ಪ್ರಮಾಣದಲ್ಲಿ ಪ್ರಚಾರ ಸಿಗಬೇಕಾಗಿತ್ತು ಅಷ್ಟು ಸಿಗಲಿಲ್ಲ. ಎಷ್ಟು ಪ್ರಮಾಣದಲ್ಲಿ ನಾವು ಜಿಲ್ಲೆಗಳನ್ನು ಮಾಡಿದ್ದೇವೆ, ಯಾವುದಕ್ಕೋಸ್ಕರ ಜಿಲ್ಲೆ ಮಾಡಿದ್ದೇವೆ, ಜನರಿಗೋಸ್ಕರ ಜನರ ಹಿತಕ್ಕೋಸ್ಕರ ಜಿಲ್ಲೆಗಳನ್ನು ಮಾಡಿದ್ದೇವೆ ಅನ್ನುವುದು ಅವರಿಗೆ ಸರಿಯಾದ ರೀತಿಯಲ್ಲಿ ಪ್ರಚಾರ ಸಿಗದ್ದಕ್ಕೆ ನಾನು ನೋವು ಪಡುತ್ತಿದ್ದೇನೆ. ಆ ವಿಚಾರದಲ್ಲಿ ಸ್ಪಷ್ಟವಾದ ಕೆಲಸವನ್ನು ಅವರು ಮಾಡಿದ್ದಾರೆ, ಪಟೇಲರದ್ದು ಏನಾಗಿದೆ ಎಂದು ತಾವು ನೋಡಿದ್ದೀರಿ ಎಲ್ಲರೂ ನೋಡಿದ್ದಾರೆ. ನಾವು ಹೀಗೆ ಇರಬೇಕೆಂದು ತೀರ್ಮಾನ ಮಾಡಿದ್ದೇವೆ, ಮೋಟು ಮರ ಇದ್ದ ಹಾಗೆ ಇದನ್ನು ಯಾರೂ ಅಲ್ಲಾಡಿಸುವ ಹಾಗಿಲ್ಲ. ಯಾವ ಗಾಳಿಯಾದರೂ ಬರಲಿ, ಯಾರಾದರೂ ಬರಲಿ, ಯಾರಾದರೂ ಕಲ್ಲು

ಹೊಡೆಯಲಿ ನಾನು ಸುಮ್ಮನೆ ನಿಂತಿದ್ದೇನೆ. ಈ ಧೈರ್ಯ ನಾನು ಮೆಚ್ಚುತ್ತೇನೆ. ಅವರ ನಾಯಕತ್ವ ಬದಲಾವಣೆ ಮಾಡಬೇಕು ಎನ್ನತಕ್ಕಂತಹವನು ನಾನಲ್ಲ. ಅವರು 135 ಮತ ತೆಗೆದುಕೊಂಡಾಗ ನನ್ನದು ಒಂದು ಮತ ಇದೆ, ಮತ್ತು ಶ್ರೀರಾಮರೆಡ್ಡಿಯವರೂ ಒಂದು ಮತ ಕೊಟ್ಟಿದ್ದಾರೆ. ಈ ಸದನದಲ್ಲಿ ಹಿಂದೆ ಮುಂದೆ ಚಕಾರ ಎತ್ತದೆ ಮತ ಕೊಟ್ಟಿದ್ದೇವೆ. ಮತ್ತೆ ಅವರ ನಾಯಕತ್ವ ಇರಬೇಕೆನ್ನುವುದರಲ್ಲಿ ನಮ್ಮ ತಕರಾರು ಇಲ್ಲ. ಯಾವ ಉದ್ದೇಶಕ್ಕೆ, ಯಾವ ಕಾರಣಕ್ಕಾಗಿ ತೆಗೆದು ಹಾಕಬೇಕು ಎಂಬ ಪ್ರಶ್ನೆ ನನಗೆ ಇಲ್ಲ. ನಾನು 30 ವರ್ಷಗಳ ಕಾಲ, ಹತ್ತಾರು ವರ್ಷಗಳಿಂದ ಜೊತೆಯಲ್ಲಿ ಓಡಾಡಿದ್ದೇನೆ. ಅವರನ್ನು ನಾವು ಈಗ, ನೀವು ಈ ದಿಕ್ಕಿಗೆ ಬನ್ನಿ ಆ ದಿಕ್ಕಿಗೆ ಬನ್ನಿ ಎಂದು ಸರಿಪಡಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾನು ಅವರಿಗೆ ಮೋಟು ಮರ ಎಂದು ಹೆಸರು ಇಟ್ಟು ಬಿಟ್ಟಿದ್ದೇನೆ. ಯಾವ ಗಾಳಿಯಾದರೂ ಬರಲಿ ಯಾರಾದರೂ ಬರಲಿ ಗಂಭೀರವಾಗಿ ಇದ್ದೇನೆ. ಒಂದು ಸಂತೊಷ, ಯಾವ ರಾಜಕಾರಣಿ ಮೇಲೆ ಯಾರ ಮೇಲೆ ಪಿತೂರಿ ಮಾಡಿಲ್ಲ. ತೊಂದರೆ ಕೊಟ್ಟಿಲ್ಲ. ನಿರ್ದಯವಾಗಿ, ಗಂಭೀರವಾಗಿ ಇರಬಹುದು ಅದು ಸ್ಪಷ್ಟ. ಅದಕ್ಕೆ ನಾನು ನಿಮ್ಮ ಲೋಕಶಕ್ತಿಯವರು ಈಗ ಹೊರಗಡೆ ಹೋಗಿರತಕ್ಕವರು ನೋಡಿದರು ಬಹುಶಃ ಹೆಗಡೆಯವರಿಗಾತ ಪಟೇಲೇ ಉತ್ತಮವೆಂದು ಗೊತ್ತಾಗಿರಬಹುದು, ಆದ್ದರಿಂದ ಈಗ ಒಳಗಡೆ ಬರುವುದಕ್ಕೆ ಏನೋ ವ್ಯವಸ್ಥೆ ನಡೆಯುತ್ತಿರುವ ಹಾಗೆ ಕಾಣುತ್ತದೆ. ನಾನು ಮೊದಲು ಹೇಳಿದ ಹಾಗೆ ನಿಮ್ಮ ವ್ಯವಸ್ಥೆ ಏನು ಎಂಬುದನ್ನು ಸ್ಪಷ್ಟಪಡಿಸಬೇಕು. ಅವರು ಆರೋಗ್ಯವಾಗಿ ಏಕೆ ಇರಬೇಕೆಂದು ಹೇಳಿದೆ ಎಂದರೆ ಜಯದೇವಕ್ಕೆ ಹೋದಾಗ ನಾನು ನೋಡಲು ಹೋಗಿದ್ದೆ ಹೃದ್ರೋಗ ಆಸ್ಪತ್ರೆಗೆ ಅನ್ನುವುದು ಒಂದೇ ಅಲ್ಲ, ಯಾವುದೇ ಆಸ್ಪತ್ರೆಗೆ ಜೆ.ಹೆಚ್. ಪಟೇಲರು ಬಂದರು ಎಂದು ನೀವು ತೋರಿಸಿಕೊಳ್ಳಬಾರದು, ಈ ರಾಜ್ಯದ ಮುಖ್ಯ ಮಂತ್ರಿಯಾಗಿ ನಿಮ್ಮ ಆರೋಗ್ಯ ಜನರ ಮುಂದೆ ಸ್ಪಷ್ಟವಾಗಿ ಇದೆ ಎಂದು ತೋರಿಸಬೇಕೇ ಹೊರತು ಜಯದೇವಕ್ಕೆ ಬಂದಿದ್ದರು ಎಂದು ತೋರಿಸಿಕೊಳ್ಳಬಾರದು. ಆದ್ದರಿಂದ ನಾನು ಹೇಳಿದೆ, ನಿಮ್ಮ ಆರೋಗ್ಯ ತೋರಿಸಿಕೊಳ್ಳಬಾರದು. ಆದ್ದರಿಂದ ನಾನು ಹೇಳಿದೆ, ನಿಮ್ಮ ಆರೋಗ್ಯ ಚೆನ್ನಾಗಿರಬೇಕಾದರೆ ಏನೇನು ಬೇಕು ಅದನ್ನು ಅನುಸರಿಸಬೇಕೆಂದು ಹೇಳಿದೆ. ಅದು ಎಷ್ಟರ ಮಟ್ಟಿಗೆ ಅವರು ಪಾಲಿಸುತ್ತಾರೆ ಬಿಡುತ್ತಾರೆ ಗೊತ್ತಿಲ್ಲ. ಅದು ಅವರಿಗೆ ಸೇರಿದ ವಿಚಾರ. ಹಿಂದೆ ಶಾಂತಿವೇರಿ ಗೋಪಾಲಗೌಡರು, ಬಾಸು ಕೃಷ್ಣಮೂರ್ತಿ, ಅಣ್ಣಯ್ಯ, ಎಸ್. ವೆಂಕಟರಾಮ್, ಯು. ಆರ್. ಅನಂತಮೂರ್ತಿ, ಕಾಗೋಡು ತಿಮ್ಮಪ್ಪ, ಬಂಗಾರಪ್ಪ, ಎಸ್. ರಾಮಸ್ವಾಮಿ, ಮತ್ತು ಕೋಣಂದೂರು ಲಿಂಗಪ್ಪ ಇವರೆಲ್ಲಾ ಒಂದು ಬಳಗ. ಅವತ್ತು ಇವರೆಲ್ಲಾ ಸಮಾಜವಾದದ ಮೇಲೆ ಹೋಗುತ್ತಿದ್ದರು. ಸಮಾಜವಾದ ಎಂದರೆ ಅದಕ್ಕೆ ಹೊಸ ಮೆರಗು ಇದೆ, ಅವರು ಮದ್ಯಪಾನ ಇಲ್ಲದೆ ಸಮಾಜವಾದದ ಮಾತಿಗೆ ಹೋಗುತ್ತಿರಲಿಲ್ಲ. ಇದು ಗುಟ್ಟಾದ ವಿಚಾರ ಅಲ್ಲ. ಅವರೇ ಬಹಿರಂಗವಾಗಿ ಸಮಾಜವಾದಿಗಳು ಯಾರು, ಸಮಾಜವಾದಿಗಳು ಮೊದಲು...

ಶ್ರೀ ಎಂ.ಪಿ. ಪ್ರಕಾಶ: ಈ ಸಂದರ್ಭದಲ್ಲಿ ಒಂದು ಮಾತು ಹೇಳುತ್ತೇನೆ, ಕಾಂಗ್ರೆಸ್‌ನವರು ಮುಂದೆ ಲೆಸ್ ವಿಸ್ಕಿ ಅಂಡ್ ಮೋರ್ ಸೋಡ, ಕಮ್ಯುನಿಸ್ಟರು ಎಂದರೆ, ಈಕ್ವಲ್ ವಿಸ್ಕಿ ಅಂಡ್ ಈಕ್ವಲ್ ಸೋಡ್, ಸಮಾಜವಾದಿಗಳೆಂದರೆ ಓನ್ಲಿ ವಿಸ್ಕಿ ಅಂಡ್ ನೋ ರೋಡ್ ಎಂದು ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಪ್ರಕಾಶ್‌ರವರು ನೋ ವಿಸ್ಕಿ ಓನ್ಲಿ ಸೋಡ ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಅವರು ಸ್ವಲ್ಪ ತೆಗೆದುಕೊಂಡಿದ್ದಾರೆಂದು ಕಾಣುತ್ತದೆ ಸಮಾಜವಾದಿಗಳು ಸತ್ಯ ಹೇಳುತ್ತಾರೆ. ಈ ವಿಚಾರದಲ್ಲಿ ನಾನು ಹಿಂದು ಮುಂದು ಹೋಗುವುದಿಲ್ಲ. ಸಮಾಜವಾದಿ ಎಂದರೆ ನಾನು ಮೊದಲು ಇದು ಆಗಬೇಕು, ಆ ಮೇಲೆ ಚರ್ಚೆ. ಕಾಲ ದಿಕ್ಕು ಬರಬೇಕಾದರೆ ಸಮಾಜವಾದ ಸಿದ್ಧಾಂತದಲ್ಲಿ ಅದು ಒಂದು ತೀರ್ಮಾನ. ಇವರೆಲ್ಲರೂ ಬಾಸು ಕೃಷ್ಣಮೂರ್ತಿಯವರೂ ಕೂಡ ಒಳ್ಳೆಯ ಮೇಧಾವಿ ವ್ಯಕ್ತಿ. ನ್ಯಾಯಾಲಯದಲ್ಲಿ ನ್ಯಾಯಾಧೀಶರನ್ನು ನೇರವಾಗಿ ಇಂಥದ್ದಕ್ಕೆ ಕೊಡಬೇಕು ಎಂದು ಹೇಳುವ ಆ ಒಂದು ಗಟ್ಟಿಗ. ಇವತ್ತು ಬಾಸು ಕೃಷ್ಣಮೂರ್ತಿಯವರನ್ನು ನೆನಸಿಕೊಳ್ಳಲಿಲ್ಲ ಎಂದರೆ ತಪ್ಪಾಗುತ್ತದೆ ಅದರಲ್ಲಿ ದೊಡ್ಡ ಇತಿಹಾಸ ಇದೆ. ಅಣ್ಣಯ್ಯ ಎಷ್ಟು ತ್ಯಾಗ ಮಾಡಿದರು, ಎಸ್. ವೆಂಕಟರಾಮ್, ಯು.ಆರ್. ಅನಂತಮೂರ್ತಿ, ಕಾಗೋಡು ತಿಮ್ಮಪ್ಪ, ಕಾಗೋಡು ತಿಮ್ಮಪ್ಪನವರ ತಂದೆ ಮತ್ತು ಬಂಗಾರಪ್ಪನವರು ಈ ವ್ಯವಸ್ಥೆ ಗೆಲ್ಲ ಆಗ ಪಟೇಲರು ಅದಕ್ಕೆ ಅಧ್ಯಕ್ಷರು. ಈ ಸರ್ಕಾರಕ್ಕೂ ಮದ್ಯಪಾನಕ್ಕೂ ಬಹಳ ಅಪಾರವಾದ ನಂಟು ಇದೆ. ಈ ನಂಟು ಹೇಗಿದೆ ಎಂದು ಅವರ ಜೊತೆಯಲ್ಲಿ ಇದ್ದವರಿಗೆ ಮತ್ತು ಅನುಭವಿಸಿದವರಿಗೆ ಮಾತ್ರ ಗೊತ್ತು. ನೋಡಿದವರಿಗೆ ಗೊತ್ತಿಲ್ಲ ಎನ್ನತಕ್ಕ ಮಾತನ್ನು ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ. ಈ ದೃಷ್ಟಿಯಿಂದ ನೋಡಿದರೆ ಆ ಒಂದು ವ್ಯಕ್ತಿತ್ವಕ್ಕೆ ನಾವೆಲ್ಲರೂ ಶರಣು ಹೋಗುದ್ದೇವೆ ನಿಮ್ಮ ಸ್ನೇಹಭಾಂಧವ್ಯ ಬೇರೆ, ಯಾವತ್ತು ಇನ್ನೊಬ್ಬರ ವಿಚಾರ ಬೇಡ ಎಂದು, ಇಷ್ಟೆಲ್ಲಾ ಹೋರಾಟ ನಡೆಸಿ, ಮಾಡಿದಂಥ ಸಿದ್ಧಾಂತವನ್ನು ನೀವು, ನಿಮ್ಮ ಸರ್ಕಾರದಲ್ಲಿ ಚಾಲನೆ ಕೊಟ್ಟಿದ್ದರೆ, ಚುರುಕುಗೊಳಿಸಿದ್ದರೆ, ಸರ್ಕಾರ ಜನಗೋಸ್ಕರ ಇರತಕ್ಕಂಥದ್ದು, ಜನರ ಕಲ್ಯಾಣಕ್ಕಾಗಿ, ಮತ್ತು ಜನರ ಅಭ್ಯದಯಕ್ಕಾಗಿ ಎಂದು ಹೇಳಿ ಈ ಎಲ್ಲಾ ಜನಪರ ಕೆಲಸಗಳನ್ನು ಜನರಿಗಾಗಿ ನೀವು ಪ್ರಾಮಾಣಿಕವಾಗಿ ಮಾಡಿದ್ದಾರೆ, ಇವತ್ತು ನಿಮಗೆ ಸ್ವಲ್ಪ ಮೋಡ ಕವಿದ ವಾತವರಣ ಬರುತ್ತಿರಲಿಲ್ಲವೆಂಬುದು ಸ್ಪಷ್ಟವಾದ ಮಾತು. ಬಸ್ಸಿನದರವನ್ನು ನೀವು ಎಷ್ಟು ಸಾರಿ ಏರಿಸಿದೀರಿ, ನಿಮ್ಮ ಸರ್ಕಾರಕ್ಕೆ ತೊಂದರೆ. ಬಸ್ಸಿನ ದರವನ್ನು ನೀವು ಎಷ್ಟು ಸಾರಿ ಏರಿಸಿದೀರಿ, ನಿಮ್ಮ ಸರ್ಕಾರಕ್ಕೆ ತೊಂದರೆ ಇರಬಹುದು, ಅನ್ಯಾಯ ಆಗಿರಬಹುದು, ಆದರೆ ಎಷ್ಟು ಬಾರಿ ಏರಿಸುವುದು, ನೀರಿನ ದರವನ್ನು ಏರಿಸಿದ್ದೀರಿ, ವಿದ್ಯುತ್‌ದರ ಏರಿಸಿದ್ದೀರಿ, ಒಂದೇ ಸಮ ಎಲ್ಲಾ ಏರಿಕೆ ಮಾಡಿದಿರಿ. ಆದರೆ ನಿಮಗೆ ಲೋಕಸಭೆ ಚುನಾವಣೆ ಬರುತ್ತದೆ ಎಂದು ಗೊತ್ತಿರಲಿಲ್ಲ, ಗೊತ್ತಿದ್ದರೆ ನೀವು ಖಂಡಿತ ಏರಿಸುತ್ತಿರಲಿಲ್ಲ. ಇದು ನಿಮಗೆ ಆಕಸ್ಮಿಕವಾಗಿ ಬಂದದ್ದು ಆದುದರಿಂದ ನೀವು ಎಲ್ಲಾವನ್ನೂ ಯದ್ವಾತದ್ವಾ ಏರಿಸಿದರಿ, ಆದುದರಿಂದ ಜನ ನಿಮ್ಮನ್ನು ಸೋಲಿಸಿದರು. ಇಡೀ ರಾಜ್ಯದಲ್ಲಿ ರಸ್ತೆಗಳ ಬಗ್ಗೆ ಹೇಳುವುದೇ ಬೇಡ. ಸಂಪೂರ್ಣವಾಗಿ ಹದಗೆಟ್ಟುಹೋಗಿವೆ, ಚಿಂದಿಯಾಗಿವೆ, ಹೆರಿಗೆ ಆಸ್ಪತ್ರೆಗಳೇ ಬೇಡ ಆ ಮಾರ್ಗದಲ್ಲಿ ಹೋದರೆ ಸುಲಭವಾಗಿ ಆಸ್ಪತ್ರೆ ಇಲ್ಲದೆ ಹೆರಿಗೆಯಾಗುತ್ತದೆ. ನನಗೆ ವೈಯಕ್ತಿಕವಾಗಿ, ಲೋಕೋಪಯೋಗಿ ಸಚಿವರ ಬಗ್ಗೆ ಗೌರವ ಇದೆ. ಆದರೆ ಅವರ ರಸ್ತೆಗಳ ಬಗ್ಗೆ ಇಲ್ಲ, ಅವರ ರಸ್ತೆಗಳಿಗೆ ನಾನು ಗೌರವವನ್ನು ಕೊಡುವುದಕ್ಕೆ ಹೋಗುವುದಿಲ್ಲ. ಇವತ್ತು ಇವೆಲ್ಲವೂ ಸಹ ನಿಮಗೆ ಶತ್ರುಗಳಾಗಿ ಪರಿಣಮಿಸಿವೆ. ಆದರೆ ನೀವು ಅದನ್ನು ಅರ್ಥ ಮಾಡಿಕೊಳ್ಳದೆ ಇಂದಿನ

ಪರಿಸ್ಥಿತಿಯಲ್ಲಿ ಅತ್ಯಂತ ಅಪಾಯಕಾರಿ ಬೆಳವಣಿಗೆಯಲ್ಲಿ ನೀವು ಸಿಕ್ಕಿದ್ದೀರಿ. ಮತ್ತು ಕಾವೇರಿ ಬಗ್ಗೆ ನಿಮ್ಮ ಸರ್ಕಾರದ ನಿಲುವು ಏನು? ನಿಮ್ಮ ಚಿಂತನೆ ಏನು, ಕೃಷ್ಣ ಬಗ್ಗೆ ನಿಮ್ಮ ಚಿಂತನೆ ಏನು? ಏನು ಮಾಡಬೇಕು? ಕಾವೇರಿ ನ್ಯಾಯಮಂಡಲಿ ಇರಬೇಕೇ ಬೇಡವೇ? ಮುಂದಿನವರ್ಷದಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತೀರಿ, ಯಾವ ರೀತಿ ಖರ್ಚು ಮಾಡುತ್ತೀರಿ, ನಿಮ್ಮ ಅಂತಿಮ ನಿರ್ಧಾರ ಏನು? ಸರ್ವೋಚ್ಚ ನ್ಯಾಯಾಲಯದ ನಿಲುವು ಏನು? ಅದರ ಬಗ್ಗೆ ನಿಮ್ಮ ವ್ಯವಸ್ಥೆ ಏನು? ಎನ್ನುವುದರ ಬಗ್ಗೆ ಒಂದು ಅಕ್ಷರವನ್ನು ಕೂಡ ನೀವು ರಾಜ್ಯಪಾಲರ ಭಾಷಣದಲ್ಲಿ ತೋರಿಸಿಲ್ಲ. ಇದು ಒಂದು ರೀತಿಯ ದೊಂಬರಾಟ. ನಿಮಗೆ ಗೊತ್ತಿದೆ, ಕರ್ನಾಟಕ ರಾಜ್ಯವನ್ನು ಯಾರು ಬೇಕಾದರೂ ಸವಾರಿ ಮಾಡಬಹುದು, ಇದಕ್ಕೆ ಲಂಗು ಲಗಾಮ್ ಇಲ್ಲ. ಮೊನ್ನೆ ಕಾವೇರಿ ಮಧ್ಯಂತರ ಆದೇಶವನ್ನು ನೀವು ಒಪ್ಪುವುದಾದರೆ ನಮ್ಮ ಬೆಂಬಲವನ್ನು ಕೊಡುತ್ತೇವೆ ಎಂದು ಮಾಜಿ ಮುಖ್ಯಮಂತ್ರಿಗಳಾದ ಜಯಲಲಿತರವರು ಹೇಳಿದ್ದಾರೆ. ನಮ್ಮ ಸಮಸ್ಯೆ ಬಗ್ಗೆ ಯಾರು ಏನು ಬೇಕಾದರೂ ಹೇಳಬಹುದು ಎಂದರೆ ಈ ರಾಜ್ಯದ ಗತಿ ಏನು? ಇದಕ್ಕೆ ಯಾರು ಹೊಣೆಗಾರರು? ರಾಜ್ಯದ ಸಮಸ್ಯೆ ಬಗ್ಗೆ, ಕಾವೇರಿ ಚಿಂತನೆ ಬಗ್ಗೆ, ಇವತ್ತಿನವರೆಗೆ ನೀವು ಯಾವತ್ತಾದರೂ ವಿರೋಧ ಪಕ್ಷದ ನಾಯಕರನ್ನು ಕರೆದು ಮಾತನಾಡಿದ್ದೀರಾ? ಇವತ್ತಿನವರೆಗೆ ನಮ್ಮನ್ನು ಕರೆದಿಲ್ಲ. ವಿರೋಧ ಪಕ್ಷದ ಜೊತೆ ಸೇರಿ ಸಮಸ್ಯೆ ಬಗ್ಗೆ ಮಾತನಾಡತಕ್ಕ ಸೌಜನ್ಯ ಕೂಡ ನಿಮಗೆ ಇಲ್ಲ. ಮತ್ತು ಇವುಗಳ ಬಗ್ಗೆ ನಮಗೆ ಮಾತನಾಡತಕ್ಕ ಸೌಜನ್ಯ ಕೂಡ ನಿಮಗೆ ಇಲ್ಲ ಮತ್ತು ಇವುಗಳ ಬಗ್ಗೆ ನಮಗೆ ಯಾವುದೇ ರೀತಿಯ ಮಾಹಿತಿ ಇಲ್ಲ. ಇದು ಒಂದು ರೀತಿಯ ಗೋಪ್ಯ, ಕಾವೇರಿ, ಕೃಷ್ಣ ಬಗ್ಗೆ ನಿಮಗೆ ಆಸಕ್ತಿ ಇಲ್ಲ. ರಾಜ್ಯದ ಜನತೆ ಬಗ್ಗೆ ಆಸಕ್ತಿ ಇಲ್ಲ, ಇವುಗಳ ಬಗ್ಗೆ ಚಿಂತನೆ ಮಾಡುತ್ತಾ ಇಲ್ಲ, ರಾಜ್ಯಪಾಲರ ಭಾಷಣದಲ್ಲಿ ಕಾವೇರಿ ಬಗ್ಗೆ ನೀವು ಏನು ಎಂಬುದನ್ನು ಹೇಳಿದ್ದರೆ ಸ್ಪಷ್ಟವಾಗುತ್ತಿತ್ತು, ಅದಕ್ಕಿಂತ ಯಾವುದು ಸ್ಪಷ್ಟ? 2000 ವರ್ಷಕ್ಕೆ ಕಾವೇರಿ ಏನು? ಎಲ್ಲಿ ಮುಗಿಸುತ್ತೀರಿ? ಇನ್ನು, ಅಧ್ಯಕ್ಷರೇ, ಈ ಶಾಸನಸಭೆಯನ್ನು ಕನಿಷ್ಟ ನೂರು ದಿವಸ ನಡೆಸಬೇಕು ಎನ್ನುವ ನಮ್ಮ ವಾದ ಏನು ಇದೆ, ಅದಕ್ಕಿನ್ನು ಪುಷ್ಟೀಕರಣ ಸಿಕ್ಕಿಲ್ಲ. ಶಾಸನಸಭೆಯನ್ನು ನೀವು ಕರೆದಾಗ, ನಾವು ಬರುವುದು, ಹೋಗುವುದು ಹೇಗೆ ಇದು ಒಂದು ರೀತಿ ಅಯ್ಯಪ್ಪನ ಛಾವಾಡಿ ಆಗಿದೆ. ಎಷ್ಟು ದಿವಸಕ್ಕೆ ಬೇಕಾದರೂ ಕರೆಯಬಹುದು, ಯಾವಾಗ ಬೇಕಾದರೂ ನಡೆಸಬಹುದು, ಏನು ಬೇಕಾದರೂ ಮಾಡಬಹುದು, ಎಷ್ಟು ದಿವಸಕ್ಕೆ ಬೇಕಾದರೂ ಮುಂದುವರೆಸಬಹುದು, ಯಾವಾಗ ಬೇಕಾದರೂ ಕೊನೆಗೊಳಿಸಬಹುದು, ಎಂದರೆ ಅದು ಒಳ್ಳೆಯದಲ್ಲ. ಇದೊಂದು ಅಪಾಯಕಾರಿ ಬೆಳವಣಿಗೆ. ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಸದನಕ್ಕಿರುವಷ್ಟು ಗಾಂಭೀರ್ಯ, ಶಕ್ತಿ ಮತ್ತೊಂದು ಇಲ್ಲ. ಆದುದರಿಂದ ಈ ಸದನದ ಶಕ್ತಿಯನ್ನು ನಾವು ಯಾವ ಪಕ್ಷದವರಾದರೂ ಕಳೆಯಲಿಕ್ಕೆ ಹೋಗಬಾರದು. ಈ ಸದನವನ್ನು ನೂರು ದಿವಸಗಳ ಕಾಲ ಕರೆಯತಕ್ಕ ವ್ಯವಸ್ಥೆ ಆಗಬೇಕು. ಅಧ್ಯಕ್ಷರೇ, ಇನ್ನು ಈ ವರ್ಗಾವರ್ಗಿ ಬಗ್ಗೆ ಹೇಳಲು, ನಾಚಿಕೆಯಾಗುತ್ತಿದೆ, ಈ ವರ್ಷ ಶುರುವಾದರೆ, ಅದು ಮುಂದಿನ ವರ್ಷಕ್ಕೂ ಮುಂದುವರೆಯುತ್ತದೆ, ಪ್ರತಿನಿತ್ಯ ವರ್ಗಾವರ್ಗಿ. ಸರ್ಕಾರ ಇದರ ಬಗ್ಗೆ ಒಂದು ತೀರ್ಮಾನ ಮಾಡಿ, ಇಲ್ಲವೇ ಶಾಸಕರು ಆಯಾ ಕ್ಷೇತ್ರಗಳಿಗೆ ಕೇಳಿದಂಥ ಅಧಿಕಾರಿಗಳನ್ನು ಹಾಕಿ, ಇಲ್ಲದಿದ್ದರೆ ಸರ್ಕಾರವೇ ಇದರ ಬಗ್ಗೆ ಒಂದು ಸ್ಪಷ್ಟವಾದ ನಿರ್ಧಾರ ಮಾಡಲಿ. ಮೂರು ವರ್ಷಕ್ಕೆ ಮುಂಚಿತವಾಗಿ

ಯಾವ ಅಧಿಕಾರಿಯನ್ನು ಯಾವುದೇ ಕಾರಣಕ್ಕೂ ವರ್ಗ ಮಾಡಬಾರದು ಎಂದು ಕಟ್ಟುನಿಟ್ಟಾದ ಆದೇಶ ಮಾಡಿ. ಇವತ್ತು ಈ ವರ್ಗಾವರ್ಗಿ ಎಂದರೆ ಒಂದು ರೀತಿಯ ಜಾತ್ರೆ ಆಗಿದೆ. ಪ್ರತಿನಿತ್ಯ ಪತ್ರಿಕೆಗಳಲ್ಲಿ ಈ ವರ್ಗಾವರ್ಗಿಗಳ ಬಗ್ಗೆ ನೋಡುತ್ತಿದ್ದೇವೆ. ಈ ಒಂದು ಹಂತದಲ್ಲಿ ಈ ವರ್ಗಾವರ್ಗಿಗಳ ಬಗ್ಗೆ ನೋಡುತ್ತಿದ್ದೇವೆ. ಈ ಒಂದು ಹಂತದಲ್ಲಿ ಈ ವರ್ಗಾವರ್ಗಿಯನ್ನು ನಿಲ್ಲಿಸತಕ್ಕ ಚಿಂತನೆ ನಿಮಗೆ ಇದೆಯೇ? ಅದು ವರ್ಗಾವರ್ಗಿ ಎಂದರೆ ಜನತಾದಳ ಸರ್ಕಾರಕ್ಕೆ ಬೇಕಾದವರನ್ನು, ಬೇಕಾದ ಕಡೆಗೆ ಹಾಕಿಕೊಳ್ಳಬಹುದು, ಇವರ ಇಚ್ಛೆಯ ಎಸ್.ಐ. ಸರ್ಕಲ್ ಇನ್ಸ್‌ಪೆಕ್ಟರ್, ಸಬ್-ರಿಜಿಸ್ಟ್ರಾರ್, ತಹಶೀಲ್ದಾರ್ ಮತ್ತು ಡಿ.ಜಿ.ಎಸ್‌ಪಿ ಎಲ್ಲಾ ಇವರ ಪಕ್ಷದವರೇ ಇರಬೇಕು. ಅಂದರೆ ವಿರೋಧ ಪಕ್ಷದವರ ಗತಿ ಏನು? ಅವರ ಮಾತಿಗೆ ನಿಮ್ಮ ಸರ್ಕಾರದಲ್ಲಿ ಬೆಲೆ ಇಲ್ಲವಾ? ಇಷ್ಟೆಲ್ಲಾ ಮಾಡಿ ನೀವು ಉಳಿಸಿದ್ದಾದರೂ ಏನು? ಇನ್ನು ಈ ಆಶ್ರಮ ಸಮಿತಿಗಳನ್ನು ಮಾಡಿ ಅದರಲ್ಲಿ ವಿರೋಧ ಪಕ್ಷದ ಒಬ್ಬ ಶಾಸಕರಾದವರೂ ಇರಬೇಕೆಂದು ಸ್ಪಷ್ಟಮಾಡಿದ್ದಿರಿ. ಆದರೆ ಇವತ್ತಿನತನಕ ನಮ್ಮ ತಾಲ್ಲೂಕಿನಲ್ಲಿ ಒಬ್ಬ ವಿರೋಧಪಕ್ಷದ ಸದಸ್ಯರಿಲ್ಲ. ಕೆಲವು ಕಡೆ ವಿರೋಧ ಪಕ್ಷದ ಶಾಸಕರಿಗೆ ಅಧ್ಯಕ್ಷ ಸ್ಥಾನವೂ ಇಲ್ಲ. ಈ ರೀತಿಯ ತಾರತಮ್ಯ ಮಾಡುವುದು ಒಳ್ಳೆಯದಲ್ಲ. ಅದಕ್ಕಾಗಿ ಸರ್ಕಾರವೂ ಜವಾಬ್ದಾರಿಯುತವಾಗಿ ಈ ವರ್ಗಾವರ್ಗಿ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ಇನ್ನು ಮುಂದಾದರೂ ಮಾಡಬೇಕು. ಏನೋ ಇದು ಒಂದು ವರ್ಷಕ್ಕೆ ಬರುತ್ತದೆ, ಜಾತ್ರೆ ಇದ್ದ ಹಾಗೆ ಏನೋ ಮಾಡೋಣ ಎಂದು ಮಾಡಬೇಡಿ. ಇದರಿಂದ ನಿಮಗೂ, ನಮಗೂ ಇಬ್ಬರಿಗೂ ಅವಮಾನ. ನಮಗೂ ಮಾನಮರ್ಯಾದೆ ಇರುತ್ತದೆ.

ನಮ್ಮ ದೇಶದಲ್ಲಿ ಒಬ್ಬನನ್ನು ವರ್ಗಾ ಮಾಡಸಲಿಕ್ಕೆ ಆಗಲಿಲ್ಲ ಎಂದರೆ, ನಮ್ಮ ಕ್ಷೇತ್ರದ ಜನ ಏನು ಹೇಳುತ್ತಾರೆ, ಎಷ್ಟು ವರ್ಷಗಳಿಂದ ಎಂ.ಎಲ್.ಎ ಆಗಿದ್ದಾನೆ, ಒಂದು ವರ್ಗ ಮಾಡಿಸಲಿಕ್ಕೆ ಅವನಿಗೆ ಆಗಲಿಲ್ಲ. ಮಾಜಿ ಸದಸ್ಯರು ಹೋಗಿ ಮಾಡಿಸಿಕೊಂಡು ಬಂದರು ಎಂದು ಹೇಳುತ್ತಾರೆ. ಮಾಜಿ ಎಂದರೆ ನಮ್ಮಿಂದ ಸೋತಿರುವವರು ಹೋಗಿ ಮಾಡಿಸಿಕೊಂಡು ಬಂದರು ಎನ್ನುವ ಹಾಗೆ ಆಗುತ್ತದೆ. ಹೀಗಾದರೆ ಗತಿ ಏನು? ಇದು ಆಗಬಾರದು, ಆದುದರಿಂದ ನೀವು ಚುನಾಯಿತ ಪ್ರತಿನಿಧಿಗಳಿಗೆ ಬೆಲೆ ಕೊಡುವುದಾದರೆ ನೇರವಾಗಿ ಕೊಡಿ. ಇಲ್ಲ ಎಂದರೆ ನಿಮ್ಮ ಸರ್ಕಾರದ ಯಂತ್ರದ ವ್ಯವಸ್ಥೆಯನ್ನು ಮಾಡಿ, ಅದರಲ್ಲಿ ವರ್ಗಾವರ್ಗಿ ಮಾಡತಕ್ಕಂಥದ್ದನ್ನು ಮಾಡಿ. ಐ.ಎ.ಎಸ್, ಐ.ಪಿ.ಎಸ್ ಅಧಿಕಾರಿಗಳನ್ನು ಬಿಟ್ಟುಬಿಡಿ, ಅವರೇನು ಅವಕಾಶದಿಂದ ಇಳಿದುಬಂದಿಲ್ಲ ಅಥವಾ ಬ್ರಹ್ಮನ ವರಪ್ರಸಾದವನ್ನು ಪಡೆದುಕೊಂಡು ಹುಟ್ಟಿದವರೂ ಅಲ್ಲ. ನಮ್ಮ ರಾಜ್ಯಕ್ಕೆ ಅಪಾಯ ತರತಕ್ಕ ಯಾವುದೇ ವ್ಯಕ್ತಿ, ಯಾವುದೇ ಸರ್ಕಾರ ಆಗಲಿ ಈ ಐ.ಎ.ಎಸ್ ಮತ್ತು ಐ.ಪಿ.ಎಸ್. ಈಗ ನಮ್ಮಲ್ಲಿ ಮೂರು ವರ್ಗ ಅದರಲ್ಲಿ ಒಂದು ನಿಮ್ಮನ್ನು ಉಳಿಸಬೇಕು ಎಂದರೆ ಮತ್ತೊಂದು ನಿಮ್ಮನ್ನು, ನಿಮ್ಮ ಸರ್ಕಾರವನ್ನು ತೆಗೆಯಬೇಕು ಎಂದು, ಮತ್ತೊಂದು ತಟಸ್ಥ. ಮತ್ತೊಂದು ಜಾತಿವಾದಿಗಳು, ಇದು ಬಹಳ ಅಪಾಯ. ಇತ್ತೀಚಿನ ದಿನಗಳಲ್ಲಿ ಈ ಅಧಿಕಾರಿಗಳಲ್ಲಿ ಬೆಳೆಯುತ್ತಿರುವ ಜಾತಿಯ ಮನೋಭಾವನೆ, ಇದರಿಂದ ನಾವು ಯಾರು ಉಳಿಯಲಿಕ್ಕೆ ಸಾಧ್ಯ ಇಲ್ಲ. ಅವರವರ ಜಾತಿಯ ಶಾಸಕರನ್ನು ಹಿಡಿದುಕೊಂಡು ಗುಂಪುಗಳು, ಅವರ ಜಾತಿ ಅಧಿಕಾರಿಗಳ ಸಭೆಗಳು, ಆ ಸಭೆಗಳಿಗೆ ಅವರ ಜಾತಿಯವರನ್ನೇ ಕರೆಯುವುದು, ಹೀಗಾದರೆ ಸರ್ಕಾರದ ಆಡಳಿತಕ್ಕೂ, ಪ್ರಜಾತಂತ್ರ ವ್ಯವಸ್ಥೆಗೂ ಅದು ಬಹಳ ಅಪಾಯಕಾರಿ

ಬೆಳವಣಿಗೆ. ಇದಕ್ಕೆ ಯಾವುದೇ ಪಕ್ಷದ ರಾಜಕಾರಣಿಗಳಾದರೂ ಬೆಂಬಲವನ್ನೂ ಕೊಡಬಾರದು. ಅಧ್ಯಕ್ಷರೆ, ಈಗ ಯಾವನೊಬ್ಬ ಜಾತಿಯ ಅಧಿಕಾರಿ ಭ್ರಷ್ಟಾಚಾರ ಮಾಡಿದರೆ, ಅವನನ್ನು ಉಳಿಸಲಿಕ್ಕೆ ನಾವೆಲ್ಲಾ ಹೋಗಿ, ಏನೋ ಮಾಡಿಬಿಟ್ಟ ನಮ್ಮವನು ಉಳಿಸಿ ಎಂದು ಹೇಳುವುದು, ಇದು ಆಗಬಾರದು. ಯಾವ ಜಾತಿ ಅಧಿಕಾರಿಯಾದರೂ ಆತನು ಅಧಿಕಾರಿಯೋ,ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಇದನ್ನು ಪ್ರಾಮಾಣಿಕವಾಗಿ ಜಾರಿಗೆ ತರಲಿಲ್ಲ ಎಂದರೆ, ಇದು ಅಪಾಯಕಾರಿ ಬೆಳವಣಿಗೆಯಾಗುತ್ತದೆ. ಅದಕ್ಕೆ ಮೊದಲು, ಜಾತಿಯ ಸಭೆಗಳನ್ನು ಅಧಿಕಾರಿಗಳು ಕಡ್ಡಾಯವಾಗಿ ನಿಲ್ಲಿಸತಕ್ಕಂಥ ಒಂದು ಸ್ಪಷ್ಟ ಆದೇಶವನ್ನು ಸರ್ಕಾರ ಹೊರಡಿಸಬೇಕು. ತೆರೆಯಲ್ಲಾಗಲೀ, ಮರೆಯಲ್ಲಾಗಲೀ, ಅಥವಾ ಬಹಿರಂಗವಾಗಲಿ ನಡೆಯಬಾರದು, ನಡೆದರೆ, ನಾವು ಉಳಿಯಲಿಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಸೋಮಶೇಖರ:- ತಾವು ಬಹಳ ವಾಸ್ತವಾಂಶಗಳ ಬಗ್ಗೆ ಮಾತನಾಡುತ್ತಿದ್ದೀರಿ. ಅಧಿಕಾರಿಗಳು ಆ ರೀತಿ ಮಾಡಬೇಕಾದರೆ ಅದಕ್ಕೆ ದಾರಿ ತೋರಿಸುತ್ತಿರುವವರು ಯಾರು? ಅದಕ್ಕೆ ನಾವೇ ಕಾರಣರು. ಈಗ ಚುನಾವಣೆ ನಡೆದಿದೆ, ಅದು ಪಕ್ಷದ ಆಧಾರದ ಮೇಲೆ ನಡೆದಿದೆಯೇ? ಯಾವ ಕ್ಷೇತ್ರಕ್ಕೂ ಹೋದರೂ ಒಂದೊಂದು ಜಾತಿ, ಆಯಾ ಜಾತಿಯವರಿಗೆ ಓಟು ಹಾಕುತ್ತಾರೆ. ನಾವುಗಳು ನಮ್ಮ ನಮ್ಮ ಜಾತಿಯ ಶಾಸಕರನ್ನು ಸೇರಿಸಿಕೊಳ್ಳುತ್ತೇವೆ, ಅವರನ್ನು ನಾಯಕರನ್ನಾಗಿ ಮಾಡುತ್ತೇವೆ. ನಾವು ತೋರಿಸಿ ಕೊಡುತ್ತೇವೆ, ಅದನ್ನೇ ಅಧಿಕಾರಿಗಳು ಮಾಡುತ್ತಾರೆ. ಆದುದರಿಂದ ಇದು ಮೊದಲಿಗೆ ರಾಜಕೀಯ ಮುಖಂಡರಿಂದ ಪ್ರಾರಂಭವಾಗಬೇಕು.

ಶ್ರೀ ವಾಟಾಳ್ ನಾಗರಾಜ್:- ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇದು ನಿಲ್ಲಲಿಲ್ಲ ಎಂದರೆ, ಅಥವಾ ಇದು ಹೀಗೇ ಬೆಳೆದರೆ, ನಾವು ಎಲ್ಲಿಗೆ ತಲುಪುತ್ತೇವೆ ಎಂದರೆ ನಾವು ಇಲ್ಲಿ ಹೀಗೆ ಕುಳಿತುಕೊಳ್ಳಬೇಕಾಗುತ್ತದೆ. ಒಂದು ಜಾತಿಯವರು ಆ ಕಡೆ, ಒಂದು ಜಾತಿಯವರು ಈ ಕಡೆ, ಹೀಗೆ ಈ ಪ್ರಜಾತಂತ್ರ ವ್ಯವಸ್ಥೆ, ಈ ಸಭೆಯಲ್ಲಿ ಜಾತಿಯಾಗಿ ನಿರ್ಮಾಣವಾಗುತ್ತದೆ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದು ಎಷ್ಟು ಕೆಟ್ಟದಾಗಿ, ವಿಷವಾಗಿ ಬೆಳೆಯುತ್ತಿದೆ ಎಂದರೆ ಸಾಮಾನ್ಯ ಜನರು, ಮುಗ್ಧ ಜನರು ತಮ್ಮ ಮನಸ್ಸಿನ ಉದ್ವೇಗಕ್ಕೆ ಒಳಗಾಗಿ, ಹಳ್ಳಿ ಹಳ್ಳಿಗಳಲ್ಲಿ, ಪಟ್ಟಣ ಪಟ್ಟಣಗಳಲ್ಲಿ ಹಬ್ಬಿ ಇಡೀ ರಾಜ್ಯಕ್ಕೆ ಜ್ವಾಲೆಯಾಗಿ ನಿರ್ಮಾಣವಾಗುವ ಪರಿಸ್ಥಿತಿ ಆಗುತ್ತದೆ. ಆದಕ್ಕೆ ರಾಜಕಾರಣಿಗಳು ಬೆಲೆಯನ್ನು ತೆರಬೇಕಾಗುತ್ತದೆ ಎಂಬ ವಾದ ಏನು ಇದೆ, ಅದನ್ನು ನಾನು ಒಪ್ಪುತ್ತೇನೆ. ಅದರ ಬಗ್ಗೆ ಎರಡನೇ ಮಾತಿಲ್ಲ.

ಇನ್ನು ಮಾನ್ಯ ಮುಖ್ಯಮಂತ್ರಿಗಳು ಲೋಕಸಭೆಯಲ್ಲಿ ಪ್ರಪ್ರಥಮವಾಗಿ ಕನ್ನಡದಲ್ಲಿ ಹಾಗೆ ಮಾತನಾಡಿದಂಥವರು. ಆದರೆ ರಾಜ್ಯಪಾಲರ ಭಾಷಣದಲ್ಲಿ ಒಂದು ಅಕ್ಷರ ಸಹ ಕನ್ನಡದ ಬಗ್ಗೆ ಇಲ್ಲ. ನಾನು ಭಾಷೆಯ ಬಗ್ಗೆ ಏನು ಮಾಡುತ್ತೇನೆ, ನಾನು ಅಕಾಡೆಮಿಯ ಬಗ್ಗೆ ಏನು ಮಾಡುತ್ತೇನೆ ಭಾಷೆಯ ಚಿಂತನೆ ಏನು, ಕನ್ನಡದ ಬೆಳವಣಿಗೆ ಏನು? ರಂಗಭೂಮಿಯ ಬಗ್ಗೆ ಏನು? ಚಲನ ಚಿತ್ರದ ಬಗ್ಗೆ ಏನು? ನಮ್ಮ ಸರ್ಕಾರದ ನೀತಿ ಏನು? ಎಂದು ಒಂದು ಅಕ್ಷರ ಸಹ ಕನ್ನಡದ ಬಗ್ಗೆ ಹೇಳಲಿಲ್ಲ. ಸರ್ಕಾರದ ಆದೇಶಗಳು ಇನ್ನೂ ಕೂಡ ನೂರಕ್ಕೆ ನೂರರಷ್ಟು

ಆಂಗ್ಲ ಭಾಷೆಯಲ್ಲಿಯೇ ಬರುತ್ತದೆ. ನಾನು ಇಲ್ಲಿ ಸಮಗ್ರವಾಗಿ ಕನ್ನಡದ ಬಗ್ಗೆ ಚರ್ಚೆ ಮಾಡಿದರೆ, ಪದೇ ಪದೇ ಕನ್ನಡದ ಬಗ್ಗೆ ಮಾತನಾಡಿದರೆ ಏನಪ್ಪ ಇವನು ಬರೀ ಕನ್ನಡದ ಬಗ್ಗೆ ಮಾತನಾಡುತ್ತಾನೆ ಎಂದು ಹೇಳುತ್ತಾರೆ ಎಂದು ನನಗೆ ನೋವಾಗಿದೆ. ಬಹಳ ಜನ ಇಲ್ಲಿ ಇಂಗ್ಲೀಷ್ ಪರಮ ಸರ್ವೋಚ್ಚ ಎನ್ನತಕ್ಕಂಥ ದೃಷ್ಟಿಯಿಂದ ಮಾತನಾಡತಕ್ಕಂಥದ್ದು ನೋಡಿದಾಗ ಸರ್ಕಾರ ತನ್ನ ನಿಲುವು ಏನು? ಭಾಷೆಗಾಗಿ ತನ್ನ ಕೊಡುಗೆ ಏನು? ಇದರ ಬಗ್ಗೆ ಏನು ಮಾಡುತ್ತೇನೆ ಎಂದು ರಾಜ್ಯಪಾಲರ ಬಾಯಿಯಿಂದ ಹೇಳಿಸಬೇಕಾಗಿತ್ತು. ಆದರೆ ಒಂದು ಅಕ್ಷರ ಕೂಡ ಕನ್ನಡದ ಬಗ್ಗೆ ಹೇಳಿಸಲಿಲ್ಲ.

ಇನ್ನು ಕೈಗಾರಿಕಾ ನೀತಿ. ಕರ್ನಾಟಕದ ಕೈಗಾರಿಕಾ ನೀತಿಗಿಂತ ಹೊಲಸು ಕೈಗಾರಿಕಾ ನೀತಿ ಎಲ್ಲೂ ಇಲ್ಲ. ಎಷ್ಟು ಕೈಗಾರಿಕೆಗಳನ್ನು ಇವತ್ತು ಕರ್ನಾಟಕದಲ್ಲಿ ಮುಚ್ಚುತ್ತಿದ್ದಾರೆ? ವಿಶ್ವೇಶ್ವರಯ್ಯನವರ ಕಾಲದಲ್ಲಿ ಇದ್ದಂಥ ಕೈಗಾರಿಕೆಗಳು, ಕೆ.ಸಿ. ರೆಡ್ಡಿಯವರ ಕಾಲದಲ್ಲಿ ಇದ್ದಂಥ ಕೈಗಾರಿಕೆಗಳನ್ನು ಇವತ್ತು ಮುಚ್ಚುತ್ತಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್:- ಕನ್ನಡದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಇದೆ.

ಶ್ರೀ ವಾಟಾಳ್ ನಾಗರಾಜ್:- ಇದರಲ್ಲಿ ಸ್ವಲ್ಪ ಇದೆ. ಕನ್ನಡೇತರರಿಗೆ ದೂರದರ್ಶನದಲ್ಲಿ....

ಶ್ರೀ ಎಸ್.ಎಸ್. ಪಾಟೀಲ್:- ನನಗೊಂದು ಸರ್ವಜ್ಞನ ವಚನ ನೆನಪಿಗೆ ಬರುತ್ತದೆ. ಅದೇನೆಂದರೆ ಹೇಳದೆ ಮಾಡುವವನು ಉತ್ತಮ, ನಾವು ಕೂಡ ಹಾಗೆ, ಹೇಳದೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಹೌದು, ಹೌದು ಹಾಗೆ ಇದ್ದರೆ ಆ ಮಾತೇ ಬೇರೆ ಇರುತ್ತಿತ್ತು. ಇದನ್ನು ನಮ್ಮ ಕರ್ನಾಟಕದಲ್ಲಿಯ ಕೈಗಾರಿಕಾ ನೀತಿ ಏನು ಇದೆ. ಅದು ಬಹಳ ಅಪಾಯಕಾರಿ ನೀತಿ ಇದೆ. ಈ ಸರ್ಕಾರಕ್ಕೆ ಕೈಗಾರಿಕಾ ನೀತಿ ಎನ್ನುವುದೇ ಇಲ್ಲ. ಹಿಂದೆ ಮಾನ್ಯ ಕೆ.ಸಿ. ರೆಡ್ಡಿಯವರು ಮುಖ್ಯಮಂತ್ರಿಗಳಾಗಿದ್ದಾಗ, ನಮ್ಮ ರಾಜ್ಯಕ್ಕೆ ಹೆಚ್ಚಿನ ಕೈಗಾರಿಕೆಗಳು ಕೇಂದ್ರದಿಂದ ಬಂದಿವೆ. ಆದರೆ ಇವರ ಕಾಲದಲ್ಲಿ ಅವೆಲ್ಲಾ ಮುಚ್ಚಿ ಹೋಗುತ್ತಿವೆ. ಎನ್.ಜಿ.ಎಫ್. ಸರ್ಕಾರಿ ನೂತನ ಕೈಗಾರಿಕಾ ಕಾರ್ಖಾನೆ ಎಷ್ಟು ಸುಂದರವಾಗಿದೆ. ಆದರೆ ಅದನ್ನು ಮುಚ್ಚಿ ನೆಲಸಮ ಮಾಡುವುದಕ್ಕೆ ಹೊರಟಿದ್ದಾರೆ. ಇದು ಎಷ್ಟು ಅಪಾಯಕಾರಿ ಬೆಳವಣಿಗೆ ಎಂದರೆ ಸುಮಾರು 200-203 ಎಕರೆ ಜಾಗ ಇದೆ ಆ ಜಾಗವನ್ನು ಕಬಳಿಸುವುದಕ್ಕೆ ಖಾಸಗಿ ರಣಹದ್ದುಗಳು ಕಾಯುತ್ತಿವೆ ಅದಕ್ಕೆ ವ್ಯವಸ್ಥೆ ನಡೆಯುತ್ತಿದೆ. ಅದನ್ನು ಮುಚ್ಚತಕ್ಕಂಥ ವ್ಯವಸ್ಥೆಯಾಗಿದೆ. ಇನ್ನು ಮೈಸೂರ್ ಲ್ಯಾಂಪ್ಸ್ ಕಾರ್ಖಾನೆ. ಈ ಪ್ರದೇಶದಲ್ಲಿ ಸರ್ಕಾರಿ ಒಡೆತನದ ಪ್ರಪ್ರಥಮ ಕಾರ್ಖಾನೆ ಎಂದರೆ ಮೈಸೂರ್ ಲ್ಯಾಂಪ್ಸ್ ಕಾರ್ಖಾನೆ. ಈ ಕಾರ್ಖಾನೆಯ ವ್ಯವಸ್ಥೆಗೆ ಒಬ್ಬ ಸಮರ್ಥ ಅಧಿಕಾರಿಯನ್ನು ಹಾಕಿದರೆ ಸಾಕು. ಅದಕ್ಕೆ ಬೇರೆ ಏನೂ ಮಾಯ, ಮಂತ್ರ ಮಾಡಬೇಕಾಗಿಲ್ಲ ಅದಕ್ಕೆ ಒಬ್ಬ ಸಮರ್ಥ ಅಧಿಕಾರಿಯನ್ನು ಹಾಕಿದರೆ, ಮೈಸೂರ್ ಲ್ಯಾಪ್ಸ್ ಕಾರ್ಖಾನೆ ಉಳಿಯುತ್ತದೆ. ಇದು 1936 ರಲ್ಲಿ ಖಾಸಗಿ ಒಡೆತನದಲ್ಲಿ ಆರಂಭ ಆಗಿದ್ದು, 1985ರಿಂದ ಇದಕ್ಕೆ ಐ.ಎ.ಎಸ್. ಅಧಿಕಾರಿಗಳ ಕಾರುಬಾರು ಪ್ರಾರಂಭವಾಯಿತು. ಅದಕ್ಕೆ ಅಲ್ಲಿಂದ ಕಾಟ ಪ್ರಾರಂಭವಾಯಿತು. ನಾನು ಮೊನ್ನೆ ಹೋದಾಗ ನೋಡಿದೆ. ಅಲ್ಲಿ ಎಂಥೆಂಥ ಮಿಷನರೀಸ್ ಇದೆ ಎಂದರೆ ಆರು

ಕೋಟಿ ರೂಪಾಯಿಯ ಒಂದು ಮಿಷನ್ ಇದೆ. ಐದಾರು ವರ್ಷಗಳಿಂದ ಅದರ ಉಪಯೋಗ ಆಗಿಲ್ಲ. ಆ ಆರು ಕೋಟಿ ರೂಪಾಯಿಗಳಿಗೆ ಬಡ್ಡಿ ಎಷ್ಟು? ಆರು ಕೋಟಿ ರೂಪಾಯಿಗಳ ಮೊತ್ತದ ಒಂದು ವಸ್ತು, ಅಲ್ಲಿ ಮೂಲೆಯಲ್ಲಿ ಬಿದ್ದಿದೆ. ಈ ಪರಿಸ್ಥಿತಿಯಲ್ಲಿ ಅಲ್ಲಿ ಎರಡು ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅದು ಟ್ಯೂಬ್‌ಲೈಟ್ ಮಾಡುವಂಥದ್ದರಲ್ಲಿ ಒಳ್ಳೆಯ ಹೆಸರು, ಉನ್ನತಮಟ್ಟದ ಹೆಸರನ್ನು ಪಡೆದಿರುವಂಥದ್ದು, ಬೇರೆ ಬೇರೆ ರಾಜ್ಯಗಳಲ್ಲಿ ಅದರ ಬೇಡಿಕೆ ಇದೆ. ಅಂತಹ ಕಾರ್ಖಾನೆಯನ್ನು ಇಂದು ನೀವು ರೂಗಗ್ರಸ್ತ ಸ್ಥಿತಿಗೆ ತರುತ್ತಿದ್ದೀರಿ. ಹಾಗೆಯೇ ಮೈಸೂರು ಸಾಬೂನು ಕಾರ್ಖಾನೆ ಎಷ್ಟು ಸುಂದರವಾದಂಥ ಕಾರ್ಖಾನೆ, ಎಷ್ಟು ಇತಿಹಾಸ ಪ್ರಸಿದ್ಧವಾದಂಥ ಕಾರ್ಖಾನೆ, ಅದನ್ನು ನೀವು ಮೂಲೆಗೆ ತಳ್ಳುತ್ತಿದ್ದೀರಿ. ಇನ್ನು ವಿಕ್ರಾಂತ್ ಟೈರ್ಸ್, ಈ ದೇಶದಲ್ಲಿ ಒಂದು ಒಳ್ಳೆಯ ಉತ್ತಮವಾದ ವಿಕ್ರಾಂತ್ ಟೈರ್ಸ್ ಕಂಪನಿ ಪ್ರಾರಂಭವಾಯಿತು. ಅದಕ್ಕೆ ಒಬ್ಬ ಐ.ಎ.ಎಸ್. ಅಧಿಕಾರಿಗಳು ಹೋದರು, ಅವರು ಅಲ್ಲಿ ಮಜಾ ಮಾಡಿ, ಅದನ್ನು ನಾಶ ಮಾಡಿ, ವಿದೇಶದಲ್ಲಿ ತಿರುಗಿ ಅದನ್ನೆಲ್ಲ ನೆಲಸಮ ಮಾಡಿದರು. ಈಗ ಅದು ಖಾಸಗಿಯವರಿಗೆ ಹೋಗುತ್ತಿದೆ. ಈ ರೀತಿ ನಿಮ್ಮ ಕಾರ್ಖಾನೆ ನೀತಿ ಅತ್ಯಂತ ಅಪಾಯಕಾರಿ ನೀತಿಯಾಗಿದೆ. ಈ ಅಪಾಯಕಾರಿ ನೀತಿ ಒಳ್ಳೆಯದಲ್ಲ. ಅದಕ್ಕಾಗಿ ಸರ್ಕಾರ ಯಾವುದೇ ರೋಗಗ್ರಸ್ಥ ಕಾರ್ಖಾನೆಗಳನ್ನು ಯಾವ ಕಾರಣಕ್ಕೂ ಮಾರಬಾರದು, ಅದನ್ನು ಖಾಸಗಿಯವರಿಗೆ ಕೊಡಬಾರದು. ಅವುಗಳನ್ನು ಉಳಿಸತಕ್ಕಂಥ ಒಂದು ಯೋಜನೆಯನ್ನು ಮಾಡಲೇಬೇಕು. ನಮ್ಮಲ್ಲಿ ಕೆಲವು ಒಳ್ಳೆಯ ಅಧಿಕಾರಿಗಳೂ ಕೂಡ ಇದ್ದಾರೆ 1972ರಲ್ಲಿ ಶ್ರೀ ಸುಧೀರ್ ಹರಿಸಿಂಗ್ ಎಂಬುವರಿದ್ದರು, ಅವರು ಕಾರ್ಖಾನೆಯನ್ನು ಬೆಳೆಸುವುದಕ್ಕೆ ಬಹಳ ಶ್ರಮಿಸಿದ್ದಾರೆ. ಎನ್.ಜಿ.ಇ.ಎಫ್.ನಲ್ಲಿ ದಾಸ್ ಎಂದು ಇದ್ದರು. ಅವರು ಕಾರ್ಖಾನೆಯನ್ನು ಎಷ್ಟು ಚೆನ್ನಾಗಿ ಬೆಳೆಸಿದರು. ನಾನು ಏತಕ್ಕೆ ಇದನ್ನೆಲ್ಲಾ ಹೇಳುತ್ತಿದ್ದೇನೆ ಎಂದರೆ ನಮ್ಮ ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಖಾಸಗಿಯವರಿಗೆ ಮಾರತಕ್ಕಂಥ ವ್ಯವಸ್ಥೆ ಆಗಬಾರದು. ಆ ಕಾರಣಕ್ಕಾಗಿ ಇದನ್ನೆಲ್ಲಾ ಹೇಳುತ್ತಿದ್ದೇನೆ.

ಇನ್ನು ಶೌಚಾಲಯದ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ. ಸಮುದಾಯ ಶೌಚಾಲಯವನ್ನು ಒದಗಿಸಿ, ಒಂದು ನವೀನ ಯೋಜನೆಯನ್ನು ಮೈಸೂರು, ಹುಬ್ಬಳ್ಳಿ, ಧಾರವಾಡ, ಬೆಳಗಾಂ, ಮತ್ತು ಗುಲ್ಬರ್ಗಾ ನಗರಗಳಲ್ಲಿ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಅಲ್ಲಿಯವರೆಗೆ ನಾವು ಯಾರೂ ಮೂತ್ರ ವಿಸರ್ಜನೆ ಮಾಡುವ ಹಾಗಿಲ್ಲ. ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಆ ಶೌಚಾಲಯಕ್ಕೆ ಕೂಡ ದುಡ್ಡು ಕೊಟ್ಟು ಹೋಗುವುದು. ನೀವು ಹಣ ಇಲ್ಲದೆ ಹೋಗುವ ಹಾಗಿಲ್ಲ. ನಿಮ್ಮ ಹತ್ತಿರ ದುಡ್ಡು ಇಲ್ಲದಿದ್ದರೆ ನಿಮ್ಮನ್ನು ದೇವರೇ ಕಾಪಾಡಬೇಕು. ಇದು ನಮ್ಮ ಶೌಚಾಲಯದ ನೀತಿ. ಇನ್ನು ನಮ್ಮ ಗ್ರಾಮೀಣ ಪ್ರದೇಶದ ಕುಟುಂಬಗಳಿಗೆ ಶೌಚಾಗೃಹ ಕಟ್ಟಿಸಿಕೊಡುವುದಕ್ಕೆ ನಿರ್ಮಲ ಗ್ರಾಮ ಯೋಜನೆ. ಅಬ್ಬಬ್ಬ ಇದರ ಹೆಸರು ಎಷ್ಟೊಂದು ಸುಂದರವಾಗಿದೆ. ಆದರೆ ಅದರ ಹತ್ತಿರ ಹೋದಾಗ ಕೆಟ್ಟ ವಾಸನೆ. ಅದರ ಹೆಸರು ಎಷ್ಟು ಸೊಗಸಾಗಿದೆಯೋ ಅಷ್ಟೇ ಅದರ ಕೆಟ್ಟ ವಾಸನೆ ಇದೆ. ಅದನ್ನು ಮಾಡುವುದಕ್ಕೆ ಒಂದು ವ್ಯವಸ್ಥೆ ಬೇಡವೇ? ನೀರಿನ ವ್ಯವಸ್ಥೆ ಇಲ್ಲದೆ ನೀವು ಶೌಚಾಲಯವನ್ನು ಕಟ್ಟಿಸಕೊಡುತ್ತೀರಿ ಎಂದರೇನು?

ಅದು ಸಾಧ್ಯವಿಲ್ಲ. ಒಂದು ಮಾತನ್ನು ತಮಗೆ ಹೇಳುತ್ತಿದ್ದೇನೆ. ಈ ರಾಜ್ಯದಲ್ಲಿ ದೇಶದಲ್ಲಿ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದರೂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ವಾಟಾಳ್ ನಾಗರಾಜ್‌ರವರು ಇಲ್ಲಿಯವರೆಗೆ ಸರ್ಕಾರವನ್ನು ಹೊಗಳಿದ್ದೇ ಹೊಗಳಿದ್ದು. ಆದರೆ ಈಗ ಶೌಚಾಲಯದ ಬಗ್ಗೆ ಮಾತ್ರ ಅವರು ಟೀಕೆ ಮಾಡುತ್ತಿದ್ದಾರೆ. ಈ ಐವತ್ತು ವರ್ಷದಲ್ಲಿ ದೀಮಂತ ನಾಯಕರು ಯಾರೂ ಆಗಿದ್ದಿಲ್ಲ. ನಮ್ಮ ಚಾಮರಾಜನಗರವನ್ನು ಜಿಲ್ಲೆಯನ್ನಾಗಿ ಮಾಡಿಕೊಟ್ಟಿದ್ದಾರೆ ಎಂದು ಹೊಗಳಿದ್ದೇ ಹೊಗಳಿದ್ದು.

ಉಪಾಧ್ಯಕ್ಷರು:- ನೀವು ಚಾಮರಾಜನಗರವನ್ನು ಜಿಲ್ಲೆಯನ್ನಾಗಿ ಮಾಡಿಸಿಕೊಂಡಿದ್ದೀರಿ. ಆದರೆ ಅವರ ಯಾದಗೀರನ್ನು ಜಿಲ್ಲೆಯನ್ನಾಗಿ ಮಾಡಿಸಿಕೊಡಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅವರಂಥ ಧೈರ್ಯ ಇದ್ದರೆ ಇವೊತ್ತು ಯಾದಗೀರ್ ಜಿಲ್ಲೆ ಆಗದೇ ಉಳಿಯುತ್ತಿತ್ತಾ?

ಶ್ರೀ ವಾಟಾಳ್ ನಾಗರಾಜ್:- ಯಾದಗೀರ್ ಕೂಡ ಜಿಲ್ಲೆಯಾಗಬೇಕೆಂದು ನಾನು ಕೂಡ ನೂರಕ್ಕೆ ನೂರಪಟ್ಟು ಮುಂದೆ ಇದ್ದೇನೆ. ಅದು ಅವರಿಗೆ ಗೊತ್ತಿದೆ. ಅವರು ಸತ್ಯ ಹೇಳುತ್ತಿಲ್ಲ. ಅವರ ಜೊತೆ ನಾನು ಕೂಡ ಹೋಗಿದ್ದೇನೆ. ಯಾದಗೀರ್ ಜಿಲ್ಲೆಯಾಗಬೇಕೆಂದು ಹೇಳಿದ್ದೇನೆ. ಈಗಲೂ ನಾನು ಅದನ್ನೇ ಹೇಳುತ್ತಿದ್ದೇನೆ. ಸಮಿತಿಯವರ ವರದಿ ಏನು ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಹಾಗಾದರೆ ಅದು ಒಂದೇ ಜಿಲ್ಲೆಯಾಗದೇ ಉಳಿದಿರುವುದಕ್ಕೆ ಕಾರಣ ಏನು?

ಶ್ರೀ ವಾಟಾಳ್ ನಾಗರಾಜ್:- ಅದೇ ನನಗೆ ಅರ್ಥವಾಗುತ್ತಿಲ್ಲ. ಅದು ತಮಗೆ ಗೊತ್ತಿರಬೇಕು. ನನಗೆ ಮಾತ್ರ ಅರ್ಥವಾಗುತ್ತಿಲ್ಲ.

ಉಪಾಧ್ಯಕ್ಷರು:- ಹೌದು ಅವರು ಒಂದು ಓಟ್ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಈಗ ಮಾನ್ಯ ಖರ್ಗೆಯವರು ಹಾಗೂ ಮಾನ್ಯ ಯಡಿಯೂರಪ್ಪನವರು ಒಟ್ಟಿಗೆ ಬಂದರು. ಇಬ್ಬರು ಒಟ್ಟಿಗೆ ಸೇರಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಇವೊತ್ತು ರಾಜಕಾರಣ ಏನಾಗುತ್ತದೆಂದು ಯಾರೂ ಹೇಳುವ ಹಾಗಿಲ್ಲ. ಮಾನ್ಯ ದೇಶಪಾಂಡೆಯವರು ಪಟೇಲರ ಹತ್ತಿರ ಪುನಃ ಬರುತ್ತಿದ್ದಾರೆಂದು ನಾನು ತಮಗೆ ಆಗಲೇ ಹೇಳಿದೆ ಯಾವ ಘಳಿಗೆಯಲ್ಲಿ ಯಾರು ಒಂದಾಗುತ್ತಾರೆ, ಯಾರು ಸೇರುತ್ತಾರೆ ಎಂದು ನನಗಂತೂ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರ ತತ್ವಕ್ಕೆ ಬೇರೆ, ನಮ್ಮ ತತ್ವವೇ ಬೇರೆ. ನಾವಿಬ್ಬರೂ ತಾತ್ವಿಕವಾಗಿ ಒಂದು ಕಡೆ ಸೇರುವುದು ಕಷ್ಟ.

ಶ್ರೀ ವಾಟಾಳ್ ನಾಗರಾಜ್:- ಇವತ್ತು ಪರಿಸ್ಥಿತಿ ಏನಾಗುತ್ತದೆ ಎಂದು ಯಾರೂ ಹೇಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಮಾನ್ಯ ಖರ್ಗೆಯವರು ಹಾಗೂ ಮಾನ್ಯ ಯಡಿಯೂರಪ್ಪನವರು ಸೇರುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಯಾವ ಘಳಿಗೆಯಲ್ಲಿ ಏನಾಗುತ್ತದೋ ಯಾವ ಘಳಿಗೆಯಲ್ಲಿ ಸಿಡಿಯುತ್ತದೋ, ಅದನ್ನು

ಹೇಳುವುದಕ್ಕಾಗುವುದಿಲ್ಲ. ಈಗ ತಕ್ಷಣಕ್ಕೆ ಹೇಳುತ್ತಾರೆ, ಮತ್ತೆ ಅವರು ಬಂದಾಗ ಹೇಗೆ ಹೇಳುವುದಕ್ಕಾಗುತ್ತದೆ? ನಾನಂತೂ ಸ್ಪಷ್ಟವಾಗಿದ್ದೇನೆ. ಯಾದಗಿರಿ ಜಿಲ್ಲೆಯನ್ನಾಗಿ ಮಾಡಲೇಬೇಕು ಸರ್ಕಾರ ಒಂದು ನೀತಿ ಮಾಡಬೇಕು ಜಿಲ್ಲೆ ಮಾಡುವುದಕ್ಕೆ ಒಂದು ಸಮಿತಿ. ಆ ಸಮಿತಿಯಲ್ಲಿ ಮೂರು ಜನ ಸೇರಿ ವರದಿ ಕೊಟ್ಟಿದ್ದಾರೆ. ಆ ಮೂರು ವರದಿಯಲ್ಲೂ ಯಾದಗಿರಿ ಮಾಡಬೇಕೆನ್ನುವುದು ಸಿದ್ಧಾಂತ. ಅದಕ್ಕೆ ಎರಡನೇ ಯ ಅಭಿಪ್ರಾಯವಿಲ್ಲ. ಯಾದಗಿರಿಯನ್ನ ಜಿಲ್ಲೆಯನ್ನಾಗಿ ಮಾಡುವ ಮೂಲಕ ತಮ್ಮ ಮೇಲೆ ಇರತಕ್ಕಂಥ ಅನುಮಾನಗಳು, ಕಳಂಕಗಳನ್ನು ಮಾನ್ಯ ಮುಖ್ಯಮಂತ್ರಿಗಳು ಹೋಗಲಾಡಿಸಿಕೊಳ್ಳಬೇಕೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇನ್ನು ಪೋಲೀಸರ ಬಗ್ಗೆ ನಾವು ಈ ರಾಜ್ಯದಲ್ಲಿ ಅನೇಕ ಸಂದರ್ಭದಲ್ಲಿ ಒತ್ತಡವನ್ನು ಮಾಡಿದ್ದೇವೆ. ಕೆಲವು ವಿಚಾರ ತಮ್ಮ ಗಮನಕ್ಕೆ ತರುತ್ತಿದ್ದೇನೆ ಪೋಲಿಸರು ಸ್ಟ್ರೈಕ್ ಮಾಡುವ ಹಾಗೆ ಇಲ್ಲ. ಮತ್ತು ಅವರು ಯಾರು ಹೆದರಿಸುವ, ಬೆದರಿಸುವ ಹಾಗೆ ಇಲ್ಲ. ಎಂದರೆ ಸರ್ಕಾರದ ಬಗ್ಗೆ ನೇರವಾಗಿ ಮಾತನಾಡುವ ಹಾಗೆ ಇಲ್ಲ. ಅವರು ಬೇರೆ ಕಾರ್ಮಿಕರ ರೀತಿಯಲ್ಲಿ ಬೆಳಿಗ್ಗೆ 10 ಗಂಟೆಗೆ ಬಂದು ಸಂಜೆ 5 ಗಂಟೆಗೆ ಹೋಗುವ ಹಾಗೆ ಇಲ್ಲ ರಜೆ ಇರಲಿ, ಇಲ್ಲದೆ ಇರಲಿ, ಮನೆಯಲ್ಲಿ ಹೆಂಡತಿ ಸತ್ತಿರಲಿ, ಮಕ್ಕಳು ಸತ್ತಿರಲಿ, ಅಪ್ಪ ಸತ್ತಿರಲಿ, ಯಾರೇ ಬಿದ್ದಿರಲಿ, ಅವರು ಕೆಲಸಕ್ಕೆ ಮಾತ್ರ ಬರಬೇಕು. 24 ಗಂಟೆ ನಿರಂತರವಾಗಿ ಕೆಲಸ ಮಾಡಬೇಕಾದ್ದು ಪೋಲೀಸರ ಕರ್ತವ್ಯ. ಆದರೆ ಅವರಿಗೆ ಕೆಲವು ಉದ್ದೇಶದಿಂದ ಹಿಂದೆ 10 ಕೆ.ಜಿ ಅಕ್ಕಿ, 5 ಕೆ.ಜಿ ಗೋಧಿ, 3 ಕೆ.ಜಿ ಸಕ್ಕರೆ ಕೊಡುತ್ತಿದ್ದರು. ಈಗ ಅದನ್ನು 10 ಕೆ.ಜಿ. ಅಕ್ಕಿ 3 ಕೆ.ಜಿ. ಗೋಧಿ, 2 ಕೆ.ಜಿ ಸಕ್ಕರೆಗೆ ಇಳಿಸಿದ್ದಾರೆ. ಇದು ಸರಿಯಲ್ಲ. ಮೊದಲು ಎಷ್ಟು ಕೊಡುತ್ತಿದ್ದರೋ, ಅದನ್ನು ಕೊಡಬೇಕು. ಮತ್ತು ಅವರಿಗೆ ಸರಾಸರಿ 10, 5, 3, ಕೆ.ಜಿಯಂತೆ ಉಚಿತ ಪಡಿತರ ಹಿಂದೆ ಇದ್ದಂತೆ ಒಂದು ತಿಂಗಳ ಭತ್ಯೆಯನ್ನು ಕೊಡುತ್ತಿದ್ದರು. ಈಗ ಇದೆಲ್ಲಾವನ್ನು ನಿಲ್ಲಿಸಿದ್ದಾರೆ. ಇದೇನು ಪರಿಸ್ಥಿತಿ? ಅವರನ್ನು ಯಾರೂ ಕೇಳುವವರು ಇಲ್ಲ. ನಾನು ಹೇಳುತ್ತಿದ್ದೇನೆ, ಅವರಲ್ಲೂ ಅಸಮಧಾನ ಬೆಳೆಯುತ್ತಿದೆ. ಆ ವರ್ಗದ ಜನರಲ್ಲೂ ಅಸಮಧಾನ ಬೆಳೆಯುತ್ತಿದೆ. ಅವರೂ ಸಹ ಕಾರ್ಮಿಕ ರೀತಿಯಲ್ಲಿ ಸಂಘಟನೆ ಮಾಡಿ ನೌಕರರ ರೀತಿಯಲ್ಲಿ ಸಂಘಟನೆ ಮಾಡಿ ಸತ್ಯಾಗ್ರಹ, ಧರಣಿ ಹೋರಾಟ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಆ ನಿರ್ಮಾಣಕ್ಕೆ ಅವಕಾಶ ಮಾಡಿಕೊಬೇಡಿ. ಪೋಲೀಸರ ಮನಸ್ಸು ಕಲುಷಿತವಾಗಿದೆ ಪೋಲೀಸರಿಗೆ ಈ ಸರ್ಕಾರಕ್ಕೆ ನಮ್ಮ ಬಗ್ಗೆ ಕುರುಣೆ ಇಲ್ಲ, ನಮ್ಮನ್ನೆಲ್ಲಾ ತುಳಿಯುತ್ತಿದ್ದಾರೆ ಎನ್ನುವ ಮಟ್ಟಕ್ಕೆ ಹೋಗಿದ್ದಾರೆ. ಇಡೀ ರಾಜ್ಯದಲ್ಲಿ ಪೋಲೀಸರೂ ಸಹ ಸರ್ಕಾರಿ ನೌಕರರಂತೆ ಸರ್ಕಾರಿ ಕಾರ್ಮಿಕರಂತೆ ಸತ್ಯಾಗ್ರಹ, ಚಳುವಳಿಗೆ ಹೋಗತಕ್ಕಂಥ ತೀರ್ಮಾನಕ್ಕೆ ಬಂದರೆ, ಅದು ಅಪಾಯಕಾರಿ ಬೆಳವಣಿಗೆ. ಹಾಗೆ ಬರುವುದಕ್ಕೆ ನಾವು ಅವಕಾಶ ಕೊಡಬಾರದು ಎನ್ನುವುದನ್ನು ನಾನು ಘಂಟಾಘೋಷವಾಗಿ ಹೇಳುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ವಾಟಾಳ್ ನಾಗರಾಜ್‌ರವರು ಪೋಲೀಸ್‌ನವರಿಗೆ ಬೈದಷ್ಟು ಯಾರೂ ಬೈಯ್ದಿಲ್ಲ. ಮತ್ತು ಅವರು ಪೋಲೀಸ್ ಸ್ಟೇಷನ್‌ನಲ್ಲಿ ಎಷ್ಟು ಸಮಯ ಕಳೆದಿದ್ದಾರೆ, ಅದೆಲ್ಲಾ ನೋಡಿದ ಮೇಲೆ ಪೋಲೀಸರ ಮೇಲೆ ಇತ್ತೀಚೆಗೆ ಹೆಚ್ಚಿಗೆ ಅನುಕಂಪ ಬರುತ್ತಿದೆ. ಅದು ಚಾಮರಾಜ ನಗರಕ್ಕೆ ಹೋದಮೇಲೆ, ಆದರೆ ಬೆಂಗಳೂರಿನಲ್ಲಿ ಇದ್ದಾಗ ಮಾತ್ರ ಅದು ಇರುವುದಿಲ್ಲ. ಅಲ್ಲಿ ಹೋದಮೇಲೆ ಪೋಲೀಸ್ ಅಭಿಮಾನ ಜಾಸ್ತಿಯಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಇಲ್ಲ, ನನ್ನ ಬಗ್ಗೆ ಯಾವಾಗಲೂ ಅವರು ಪ್ರೀತಿ ವಿಶ್ವಾಸ ಇಟ್ಟುಕೊಂಡು ಹಾಸ್ಯ ಮಾಡತ್ತಿರುತ್ತಾರೆ. ಪೋಲೀಸ್‌ನವರಿಗೆ ಈ ರಾಜ್ಯದಲ್ಲಿ ನಾನು ಕೊಟ್ಟಿರತಕ್ಕಂಥ ಬೆಂಬಲ ಯಾವ ರಾಜಕಾರಣಿಯೂ ಕೊಟ್ಟಿಲ್ಲ. ತಮಗೆ ಹೇಳುತ್ತೇನೆ, ಹಿಂದೆ ಪೋಲೀಸ್‌ನವರಿಗೆ ಚಡ್ಡಿ ಇದ್ದದ್ದನ್ನು ಬದಲಾವಣೆ ಮಾಡಿಸಿ ಪ್ಯಾಂಟ್ ಕೊಡಿಸುವುದಕ್ಕೆ ನನ್ನದೇ ಹೋರಾಟ. ಇದನ್ನು ನಾನು ಬಹಳ ಪ್ರಾಮಾಣಿಕವಾಗಿ ಮಾಡಿದ್ದೇನೆ. ನಾನು ಏಕೆ ಈ ಮಾತು ಹೇಳುತ್ತಿದ್ದೇನೆಂದರೆ, ಪರಿಸ್ಥಿತಿ ಮೀರುವುದಕ್ಕೆ ಮುಂಚೆ, ಪರಿಸ್ಥಿತಿ ಅಪಾಯಕಾರಿ ಆಗುವುದಕ್ಕೆ ಮುಂಚೆ ಅವರು ಎಲ್ಲೋ ಒಂದು ಕಡೆ ಸೇರಿ ಸಮ್ಮೇಳನ, ಸಭೆ ಮಾಡಿದರು, ಸಂಘಟನೆ ಕಟ್ಟಿಕೊಂಡರೆ, ಏನು ಪರಿಸ್ಥಿತಿ ನಾಳೆ? ಆಗ ಅನಾಯಕತ್ವ ಪ್ರಾರಂಭವಾಗುತ್ತದೆ. ಅನಾಯಕತ್ವದ ದಿಕ್ಕಿಗೆ ನಾವು ಅವಕಾಶ ಕೊಡಬಾರದು. ಆದುದರಿಂದ ಅವರ ಸಮಸ್ಯೆಗಳನ್ನು ಬಗೆಹರಿಸಬೇಕು. ಅವರಿಗೆ ಬಡ್ತಿಯಲ್ಲಿ ಅನಾನುಕೂಲವಾಗಿದೆ. ವರ್ಗಾವರ್ಗಿಯಲ್ಲಿ ಅನಾನುಕೂಲವಾಗಿದೆ. ಕೆಲವರು ಆಗಲಿಲ್ಲ ಎಂದರೆ ಅವರನ್ನು ಸಿ.ಓ.ಡಿಗೆ ಹಾಕು, ಟ್ರಾಫಿಕ್‌ಗೆ ಹಾಕು ಈ ರೀತಿ ಕೆಲವು ಧೋರಣೆ ಇದೆ. ಕಾರಣವೇನು? ಅವರೇನೂ ಚಳುವಳಿ ಮಾಡುವುದಿಲ್ಲ, ಹೋರಾಟ ಮಾಡುವುದಿಲ್ಲವೆಂದು ಭಾವನೆ ಬಂದಿದೆ. ಆದುದರಿಂದ ಹೋರಾಟ, ಚಳುವಳಿಗೆ ಇಳಿಯತಕ್ಕಂಥ ಸಂಘಟನೆ ಮಾಡತಕ್ಕಂಥ ಪರಿಸ್ಥಿತಿಗೆ ಅವಕಾಶ ಮಾಡಿಕೊಡಬೇಡಿ ಎಂದು ಎಚ್ಚರಿಕೆ ಕೊಟ್ಟು ಹೇಳುತ್ತಿದ್ದೇನೆ. ಇವತ್ತು ಅತ್ಯಂತ ಪ್ರಾಮಾಣಿಕವಾಗಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕು. ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಸರ್ಕಾರದ ಗಮನಕ್ಕೆ ಬಂದಿರತಕ್ಕಂಥಾದ್ದು. ವಿಮಾನ ನಿಲ್ದಾಣದಿಂದ, ಬೆಂಗಳೂರಿನ ಹೊರಗೆ ಕಟ್ಟಿರುವ ಕಟ್ಟಡಗಳು ಇದೆಯಲ್ಲಾ, ಎಲ್ಲಾ ಹೊರಗಿನವರು ಅದಕ್ಕೆ ನೀತಿ ಇಲ್ಲ, ಯಾವುದೇ ನಿಯಮ ಇಲ್ಲ. ಯಾವುದೇ ಯೋಜನೆ ಇಲ್ಲ. ಅವುಗಳು ಎಂತೆಂತಹ ಕಟ್ಟಡಗಳು. ಒಂದೊಂದು ಕಟ್ಟಡವೂ 50-100 ಕೋಟಿ ರೂಪಾಯಿಗಳು ಆಗುತ್ತವೆ. ಅದಕ್ಕೆ ಯಾವ ಪ್ಲಾನ್ ಸ್ಯಾಂಕ್ಷನ್ ಆಗಿಲ್ಲ, ನಗರ ಪಾಲಿಕೆಯವರು, ಕೊನೆಗೆ ಅದರ ಮುಂದೆ ಕಟ್ಟಡ ಕಟ್ಟಿದೆ. ಆ ಜಾಗ ಯಾರದು? ಅದರ ಪರಿಸ್ಥಿತಿ, ವ್ಯವಸ್ಥೆ ಏನು? ಹೆಚ್ಚುಕಡಿಮೆ ನನ್ನ ಪ್ರಕಾರ 50 ಕೋಟಿ ರೂಪಾಯಿ ಆ ಜಾಗ ಬೆಲೆ ಬಾಳುತ್ತದೆ. ಇದನ್ನು ಕೇಳುವವರು ಯಾರು ಇಲ್ಲವೇ? ಸರ್ಕಾರ ಸತ್ತು ಹೋಗಿದೆಯಾ? ಅವರಿಗೆ ರಕ್ಷಣೆ ಕೊಡುವುದಕ್ಕೆ ನಮ್ಮ ಮಂತ್ರಿಗಳು ಬೆಂಬಲ ಆಗಬಹುದು. ಇದಿ ಯಾರಿಗೂ ಒಳ್ಳೆಯದಾಗುವುದಿಲ್ಲ. ಆ ನಕಾಶೆಯನ್ನು ನೋಡಿದರೆ, ತಾಕತ್ತು ಇದ್ದರೆ, ನಾಳೆ ಬೆಳಿಗ್ಗೆ ಅದನ್ನು ಒಡೆದುಹಾಕಿ. ನೀವು ಬಡವರದು ಒಡೆಯುವುದಕ್ಕೆ ಹೋಗುತ್ತೀರಿ. ವಿಮಾನ ನಿಲ್ದಾಣದ ಮುಂದೆ ಕಟ್ಟಿರತಕ್ಕಂಥ ಭಾರಿಭಾರಿ ಕಟ್ಟಡಗಳು. ಮತ್ತು ಈ ಊರಿನಲ್ಲಿ ಸಹ ಕಟ್ಟಿದ್ದಾರೆ. ಗಗನಚುಂಬಿ ಕಟ್ಟಡಗಳು, ಅದಕ್ಕೆ ಯಾವರೀತಿಯ ನೀತಿಯನಿಯಮಗಳು ಇಲ್ಲ. ನಿಲ್ಲುವುದಕ್ಕೆ ಸ್ಥಳವಿಲ್ಲ. ನೀರಿನ ವ್ಯವಸ್ಥೆಯಿಲ್ಲ. ಕಾರಿನ ಪಾರ್ಕಿಂಗ್ ವ್ಯವಸ್ಥೆ ಇಲ್ಲ. ಉಸಿರಾಡುವುದಕ್ಕೆ ಒಳ್ಳೆಯ ವ್ಯವಸ್ಥೆ ಇಲ್ಲ. ಆ ಕಟ್ಟಡಗಳನ್ನು ಹೊಡೆಯುವುದಿಲ್ಲ. ಗುಜರಾತದಿಂದ ಬರುತ್ತಾರೆ, ರಾಜಸ್ತಾನದಿಂದ ಬರುತ್ತಾರೆ, ಬೇರೆ ರಾಜ್ಯದಿಂದ ಬರುತ್ತಾರೆ, ಬಹಳ ಸುಂದರವಾಗಿ ಮಾತನಾಡುತ್ತಾರೆ ಪಂಚತಾರಾ ಹೋಟೇಲ್‌ನಲ್ಲಿ ಕುಳಿತುಕೊಳ್ಳುತ್ತಾರೆ, ನಮ್ಮವರು ಹೋಗುತ್ತಾರೆ, ಮಾತುಕತೆ ಆಡುತ್ತಾರೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ, ಇದರ ಬಗ್ಗೆ ಸರ್ಕಾರ ಕೂಡಲೇ ಒಂದು ಸದನ ಸಮಿತಿ ರಚನೆ ಮಾಡಿ. ಮೊದಲು ಹೆಚ್‌ಎಎಲ್. ವಿಮಾನ ನಿಲ್ದಾಣದಿಂದ, ಬೆಂಗಳೂರಿನಲ್ಲಿ

ಬರತಕ್ಕಂಥ ಎಲ್ಲಾ ಕಟ್ಟಡಗಳು ಪರಿಶೀಲನೆಯನ್ನು ಅಧಿಕಾರಿಗಳ ಜೊತೆ ನಡೆಸಲಿ. ಒಂದು ಕಟ್ಟಡ ಸರಿಯಿದೆಯೆಂದರೆ, ಈ ಸದನದ ಮುಂದೆ ನಾನು ಮುಂದೆ ನಾನು ಕ್ಷಮಾಪಣೆ ಕೇಳುತ್ತೇನೆ. ಈ ಪರಿಸ್ಥಿತಿಯಾಗಿದೆ. ಮತ್ತು ಗೋಕುಲದಲ್ಲಿ ಕಟ್ಟಡಗಳು ಬರುತ್ತವೆ. ಅಲ್ಲಿ ಯಾರು ಹೇಳುವವರು ಕೇಳುವವರು ಇಲ್ಲ. ಒಂದು ನೂರು ಎಕರೆ ಕಟ್ಟಡ ಇದೆ. ಆ ಗೋಡೆ ಯಾರು ಕಟ್ಟುವುದು? ಕಲ್ಲು ಯಾರು ತರುವುದು? ಯೋಜನೆ ಯಾರದು? ಯಾವ ಇಂಜಿನಿಯರ್? ಯಾವ ಕಮಿಷನರ್? ಎಲ್ಲಾ ಸತ್ತುಹೋಗಿದಾದರೆ ಒಂದು ಭೂತ ಬಂಗಲೆ ಇದ್ದಹಾಗೆ ಇದೆ. ಅದರ ಹತ್ತಿರ ಯಾರೂ ಹೋಗುವ ಹಾಗಿಲ್ಲ. ನಗರಪಾಲಿಕೆಯವರು ಹೋಗುವ ಹಾಗೆ ಇಲ್ಲ. ವಿದ್ಯುಚ್ಛಕ್ತಿ ಮಂಡಲಿಯವರು ಹೋಗುವ ಹಾಗೆ ಇಲ್ಲ. ಒಳಚರಂಡಿ ಮಂಡಲಿಯವರು ಮತ್ತು ಪೋಲೀಸ್‌ನವರು ಹೋಗುವ ಹಾಗೆ ಇಲ್ಲ. ಸರ್ಕಾರವೇ ಅವರ ಕೈಯಲ್ಲಿ ಅವೆನ್ಯೂ ರೋಡ್‌ನಲ್ಲಿ ಹೋಗಿ ನೋಡಿ. ನಿಮ್ಮ ಅಧಿಕಾರವಧಿಯಲ್ಲಿ ಇದರ ಬಗ್ಗೆ ಪ್ರಾಮಾಣಿಕವಾಗಿ ಚಿಂತನೆ ಮಾಡಿ. ಇಲ್ಲಿ ನಮ್ಮ ಏಷ್ಯನ್ ಏಜ್ ಪತ್ರಿಕೆ ಮಾಲೀಕರು ನಮ್ಮನ್ನೆಲ್ಲಾ ರೌಡಿ ಎಂದಿದ್ದರಲ್ಲಾ ಯು.ಬಿ. ಅವರದೇ ಆಗಿದೆ. ಅದರ ಪಕ್ಕದಲ್ಲಿ ಕಾರ್ಪೋರೇಷನ್ ಜಾಗ ಇದೆ. ಆ ಜಾಗದ ಬೆಲೆ ಕನಿಷ್ಟ 10 ಕೋಟಿ ರೂಪಾಯಿಯಗಳಾಗುತ್ತದೆ. ಇದೇನೂ ಕಡಿಮೆ ಬೆಲೆ ಅಲ್ಲ. ಕಾರ್ಪೋರೇಷನ್‌ನವರ ತಲೆಕೆಟ್ಟು ಹೋಗಿದೆಯಾ? ಸರ್ಕಾರ, ಇದೆಯೋ, ಇಲ್ಲವೋ? ಸರ್ಕಾರದವರು ಆ ಜಾಗವನ್ನು ವಶಪಡಿಸಿಕೊಳ್ಳಲಿ. ಟಿ. ಸಿದ್ಧಲಿಂಗಯ್ಯ ಸರ್ಕಲ್‌ನ ಮೂಲೆಯಲ್ಲಿನ ಜಾಗದ ಬೆಲೆ 10 ಕೋಟಿ ರೂಪಾಯಿಗಳು. ಈಗ ಅವರು ಅಲ್ಲಿ ಡಿಸ್ಟಲರಿಯನ್ನು ತೆರೆದಿದ್ದರೆ. ಈಗ, ಸದರಿ ಜಾಗದಲ್ಲಿ ಪಂಚತಾರ ಹೋಟೇಲ್‌ನ್ನು ತೆಗೆಯುತ್ತಿದ್ದಾರೆ. ಆ ಜಾಗವನ್ನು ಪಡೆದುಕೊಳ್ಳುವುದಕ್ಕೆ ಏನು ಮಾಡಿದ್ದಾರೆಂದರೆ, ಈ ಜಾಗದ ಸ್ವತ್ತನ್ನು, ಸ್ವಚ್ಛತೆಯಿಂದ ಇಟ್ಟುಕೊಳ್ಳುವುದಕ್ಕೆ ಏನು 10 ಕೋಟಿ ರೂಪಾಯಿ ಜಾಗವನ್ನು ಬಳುವಳಿಯಾಗಿ ಕೊಟ್ಟಿದ್ದಾರೆ. ತಾವು ಹೋಗಿ ನೋಡಬೇಕು ಸಾರ್, ಟಿ. ಸಿದ್ದಲಿಂಗಯ್ಯನವರ ಸರ್ಕಲ್‌ನಲ್ಲಿ 10 ಕೋಟಿ ರೂಗಳ ಜಾಗ. ಅಲ್ಲಿ ಯು.ಬಿ. ಗ್ರೂಪ್ ಎಂದು ಬೋರ್ಡ್ ಹಾಕಿಬಿಟ್ಟಿದ್ದಾರೆ. ಅವರು ಧರ್ಮ ಕಾರ್ಯವನ್ನು ಮಾಡಿದ್ದಾರೆಂದು ಹೇಳಿ. ಆ ರಸ್ತೆಗೆ ಅವರ ಹೆಸರನ್ನು ಇಟ್ಟಿದ್ದಾರೆ. ಇದು ಧರ್ಮಕಾರ್ಯ ತಾನೇ? ಪಕ್ಕದಲ್ಲಿ ಹೆಂಡ ತಯಾರು ಮಾಡುವುದು, ಈ ಕಡೆ ಜಾಗ ಇಟ್ಟುಕೊಳ್ಳುವುದು, ಆ ಕಡೆ ಆಸ್ಪತ್ರೆ, ಅಲ್ಲಿ ಚೆನ್ನಾಗಿ ಕುಡಿದುಬಿಟ್ಟು ಅವನು ಆಸ್ಪತ್ರೆಗೆ ಹೋಗುವುದು. ಅದಕ್ಕಾಗಿ ಅವನ ಹೆಸರು ಅಲ್ಲಿ ಇದೆ. "ಮಲ್ಯ ರಸ್ತೆ" ಎಂದು ಬಹಳ ಚೆನ್ನಾಗಿದೆ ನಮ್ಮನ್ನು ರೌಡಿಗಳು ಅಂತಾರೆ, ನಾವು ಶಾಸಕರು ರಾಜ್ಯಪಾಲರ ಭಾಷಣದಲ್ಲಿ ತಮಟೆ ಹೊಡೆದರೆ ನಾವು ರೌಡಿಗಳು. ಈಗ ನಮ್ಮ ಹಣೆಬರಹ ಏನಾಗಬೇಕು? ಈಗ ಯಾರು ರೌಡಿಗಳು, ನಾನಾ ಅಥವಾ ಅವರಾ? ಸಮಾಜದಲ್ಲಿ ಇದು ತೀರ್ಮಾನವಾಗಬೇಕಲ್ಲ. ಇದೇನು ಹಣೆಬರಹ? ಮಾನ್ಯ ಉಪಾಧ್ಯಕ್ಷರೆ, ಮಲ್ಯ ಆಸ್ಪತ್ರೆ, ಬಗ್ಗೆ ನಾನು ಈ ಸದನದಲ್ಲಿ ಹೇಳಿದ್ದೆ. ಆ ಜಾಗ 25 ಕೋಟಿ ರೂಪಾಯಿಗಳ ಜಾಗ. ಆ ಜಾಗವೇನೂ ಕಡಿಮೆಯಿಲ್ಲ. ಈ ಜಾಗವನ್ನು ಕೊಡಬೇಡಿ. ಅದು ಪಂಚತಾರಾ ಆಸ್ಪತ್ರೆಯಾಗಿದೆ. ಅದು ಸಾಮಾನ್ಯ ಜನರಿಗಲ್ಲ. ಬಟ್ಟೆ ಹರಿದವರಿಗೆ, ತಲೆಯಲ್ಲಿ ಎಣ್ಣೆಯಿಲ್ಲದವರಿಗೆ, ಹೊಟ್ಟೆಗಿಲ್ಲದವರಿಗಲ್ಲ ಅದು. ಬಹಳ ಟಿಪ್‌ಟಾಫಾಗಿ ಹೋಗತಕ್ಕಂತವರಿಗೆ ಬೆಂಜ್ ಕಾರಿನಿಂದಿಳಿದು ಆಸ್ಪತ್ರೆಯೊಳಗೆ ಸೇರತಕ್ಕಂತವರಿಗೆ ಆ ಆಸ್ಪತ್ರೆ ಒಂದೊಂದು ಕೊಠಡಿಗಳಿಗೆ ಏನಿಲ್ಲ ಅಂದರೆ 3 ಸಾವಿರ ರೂಪಾಯಿಗಳು ಚಾರ್ಜ್

ಮಾಡುತ್ತಾರೆ. ಅಲ್ಲಿ ಹೃದಯಘಾತ ರಿಪೇರಿಗೆ ಹೋಗತಕ್ಕಂತವರಿಗೆ 30 ಸಾವಿರ ರೂಪಾಯಿಗಳ ಖರ್ಚು ಆಗುತ್ತದೆಂದು ಕೇಳಿದರೆ ಸಾಕು ಅಲ್ಲೇ ಅವರು ಹೋಗಿಬಿಡುತ್ತಾರೆ. ಅವನು ಉಳಿಯುವ ಹಾಗಿಲ್ಲ. ಮುಂದೆ ಅವನು ಆ ಆಸ್ಪತ್ರೆಗೆ ಬರುವ ಸಾಧ್ಯತೆ ಇಲ್ಲ. ಆ ತರಹದ ಆಸ್ಪತ್ರೆಯದು. ಅಲ್ಲಿ ಚಿಲ್ಲರೆ ವ್ಯವಹಾರವೇ ಇಲ್ಲ, ಬರೀ ಚೆಕ್ಕು, ಡ್ರಾಫ್ಟ್‌ನ ವ್ಯರಹಾರವೇ ಜಾಸ್ತಿ. ನಮ್ಮ ಗೌರಿಪಾಳ್ಯದ ಆಸ್ಪತ್ರೆ ತರಹ ಅಲ್ಲಿ ಅಲ್ಲ. ನಮಗೆ ಕೆಂಪು ನೀರು ಕೊಟ್ಟು ಕುಡಿಸುತ್ತಾರಲ್ಲ ಇದನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಈ ಸದನದಲ್ಲಿ ಈ ಬಗ್ಗೆ ನಾವು ಪ್ರಾಮಾಣಿಕವಾಗಿ ಚರ್ಚಿಸಿದೆವು. ಆ ಜಾಗವನ್ನು ಕಾರ್ ಪಾರ್ಕಿಂಗ್‌ಗೆ ಕೊಡಬೇಡಿ ಎಂದು ಹೇಳಿದ್ದೇವು. ಆಸ್ಪತ್ರೆಯ ಕಟ್ಟಡದ ಕೆಳಗೆ ಕಲ್ಯಾಣಮಂಟಪವನ್ನು ಕಟ್ಟಿಕೊಂಡಿದ್ದಾರೆ. ತಾವು ಅಲ್ಲಿ ಹೋಗಿ ನೋಡಬೇಕು. ಆಸ್ಪತ್ರೆಯ ಕೆಳಗೆ ಕಲ್ಯಾಣ ಮಂಟಪ, ಮೇಲೆ ರೋಗಿಗಳು, ಅಲ್ಲಿ ಮದುವೆಗಳು ಆಗುತ್ತವೆ. ಈ ಮಲ್ಯ ಆಸ್ಪತ್ರೆಯ ಮದುವೆ. ಸದರಿ ಮಲ್ಯ ಆಸ್ಪತ್ರೆ ಸಾರಾಯಿ ದೊರೆ ಶ್ರೀ ಅದಿಕೇಶವಲು ಅವರಿಗೆ ಸೇರಿದ್ದು ಸದರಿ ಜಾಗದ ಬೆಲೆ ಕನಿಷ್ಠ 25 ಕೋಟಿ ರೂಪಾಯಿಗಳು. ನಾವೆಲ್ಲಾ ಗದ್ದಲ ಮಾಡಿದಾಗ ಆ ಜಾಗವನ್ನು ಅವರಿಗೆ ಕೊಡುವುದಿಲ್ಲ ಎಂದು ಹೇಳಿದ್ದೀರಿ. ಈಗ ಸಲೀಸಾಗಿ ಅಲ್ಲಿ "ಇದು ಅಧಿಕಾರಿಗಳ ಕಾರು ನಿಲ್ಲಿಸುವ ಜಾಗ" ಎಂದು ನಾಮಫಲಕ ಅಲ್ಲಿ ಹಾಕಿದ್ದಾರೆ. ಅಲ್ಲಿ ಬರುವ ವಾಹನಗಳಿಗೆ ಒಂದು ಕಾರಿಗೆ ಇಷ್ಟು ಹಣವೆಂದು ಬೋರ್ಡ್ ಹಾಕಿದ್ದಾರೆ. ಸರ್ಕಾರಕ್ಕೆ ಇದರ ಬಗ್ಗೆ ಗಮನವಿಲ್ಲವೇ? ಈ ವಿಷಯ ನಿಮ್ಮ ಗಮನಕ್ಕೆ ಬಂದಿಲ್ಲವೆ? ನಿಮ್ಮ ಗಮನಕ್ಕೆ ಬಂದಿಲ್ಲ ಅಂದರೆ ಗತಿ ಏನು? ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು ಏನು ಮಾಡುತ್ತಿದ್ದೀರಿ? ಶ್ರೀ ಅನಂತನಾಗ್‌ರವರು ಏನು ಸಿನಿಮಾ ತೆಗೆದುಬಿಟ್ಟ ಹಾಗೆ ಎಂದು ತಿಳಿದುಕೊಂಡು ಬಿಟ್ಟರೆ ಏನು ಹುಡುಕಾಟವೇ? ಎರಡೂ ಸೇರಿ ನನ್ನ ಕಣ್ಣಿಗೆ ಕಂಡಂತೆ ಇಷ್ಟು ಕೋಟಿ ಅವ್ಯವಹಾರ ಆಗಿದೆ. ಕಾಣದೆರತಕ್ಕಂಥದ್ದು ಬೇರೆಯೇ ಇದೆ. ನಾನು ನೇರವಾಗಿ ಮುಖ್ಯಮಂತ್ರಿಗಳ ಮೇಲೆ ಆರೋಪ ಮಾಡುತ್ತೇನೆ. ಏನು ನಡೆಯುತ್ತದೆಂದು ಅವರಿಗೆ ಗೊತ್ತಾಗುವುದಿಲ್ಲ, ಈ ಮ್ಯಾಜಿಕ್ ಅವರಿಗೆ ಗೊತ್ತಾಗುವುದಿಲ್ಲ. ಅದರಲ್ಲಿ ಅನುಮಾನವೇ ಇಲ್ಲ. ನೀವು ನನ್ನನ್ನು ದಾರಿ ತಪ್ಪಿಸುವುದಕ್ಕೆ ಹೋಗಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು):- ಮುಖ್ಯಮಂತ್ರಿಗಳಿಗೆ ಅದು ಗೊತ್ತಾಗುವುದಿಲ್ಲವೇ? ಪಾಪ, ಅವರು ಇನ್ನೋಸೆನ್ಸ್, ಅವರಿಗೆ ಇದರ ಬಗ್ಗೆ ಮಾಹಿತಿಯೇ ಇಲ್ಲ ಅನ್ನುತ್ತೀರಾ? ಇನ್ನೊಬ್ಬ ಮಂತ್ರಿಗಳಿಗೆ ಬೈದರೆ, ಆ ಮಂತ್ರಿಗಳು ಇವರನ್ನು ಕೇಳದೆ ಮಾಡುತ್ತಾರೆಯೇ? ಯಾವ ಮಂತ್ರಿಗೆ, ಮುಖ್ಯಮಂತ್ರಿಗಳಿಗೆ ಎದುರಾಡುವ ಧೈರ್ಯವಿರುತ್ತದೆ. ಮತ್ತೆ ಅವರ ಗತಿ ಏನು?

ವಾಟಾಳ್ ನಾಗರಾಜ್:- ಇಲ್ಲ, ದೇವೇಗೌಡರು ಮುಖ್ಯಮಂತ್ರಿಯಾಗಿದ್ದರೆ ಆ ಪರಿಸ್ಥಿತಿ ಇತ್ತು. ಇವರು ಇರುವುದರಿಂದ ಅದು ಇಲ್ಲ ಅನಿಸುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅದಕ್ಕೆ ನಾನು ಹೇಳಿದ್ದೆ ಅಧ್ಯಕ್ಷರೆ, ಒಳಗುಟ್ಟು ಏನಿದ್ದರೂ ವಾಟಾಳ್‌ನಾಗರಾಜ್‌ರವರಿಗೆ ಗೊತ್ತಾಗುತ್ತದೆ.

ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೆ, ನನಗಿಂತ ಗುಟ್ಟು ಅವರಿಗೆ ಗೊತ್ತಿದೆ. ಸುಮ್ಮನೆ ಅವರು ಮತ್ತು ಯಡಿಯೂರಪ್ಪನವರು ವಿಸರ್ಜನೆ ಎಂದು ಹೇಳುತ್ತಾ

ಇರುತ್ತಾರೆ, ನಿಮಗೆ ಗೊತ್ತಿಲ್ಲ ಅವರೆಲ್ಲಾ ಯಾವಾಗಲೂ ಒಂದೇ. ಯಾವಾಗಲೂ ಸರ್ಕಾರ ವಿಸರ್ಜನೆಯಾಗಬೇಕು, ಶಾಸಕರು ವಿಸರ್ಜನೆಯಾಗಬೇಕು ಎಂದು ಹೇಳುತ್ತಾರೆ. ಈ ಬೆಂಗಳೂರಿನ ಬಗ್ಗೆ ತಮಗೆ ಏನು ಹೇಳುತ್ತಿದ್ದೇನೆಂದರೆ, ಬೆಂಗಳೂರಿನಲ್ಲಿ 3 ಜನ ಮಂತ್ರಿಗಳಿದ್ದಾರಲ್ಲ, ಮಂತ್ರಿಗಳಿಗೆ ರಸ್ತೆಗಳ ಬಗ್ಗೆ ಗೊತ್ತಾಗಲಿಲ್ಲವೇ? ಈ ತರಹ ಅನ್ಯಾಯವಾಗುತ್ತಿದೆ ಎಂದು ಮುಖ್ಯಮಂತ್ರಿಗಳಿಗೆ ಅವರು ಹೇಳುವುದಿಲ್ಲವೇ? ಈ ಪರಿಸ್ಥಿತಿಯಲ್ಲಿ ನೀವು ಏನು ಮಾಡಿದ್ದೀರಿ? ಇದುವರೆಗೂ ಈ ಬಗ್ಗೆ ಕೇಳಿದ್ದೀರಾ? ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ವಿ. ಸೋಮಣ್ಣ (ಬಂಧಿಖಾನೆ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷರೆ, ಕಿಡ್ಸ್‌ಕೆಂಪ್ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದರು. ಈಗಾಗಲೇ ಅದರ ಬಗ್ಗೆ ಕ್ರಮ ತೆಗೆದುಕೊಂಡು ಮತ್ತೆ ಆ ರೆಕಾರ್ಡ್‌ಗಳನ್ನು ತರಿಸಿ ಪರಿಶೀಲನೆ ಮಾಡಿದ್ದಾರೆ. ಪ್ರಾಯಶಃ ಅದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ. ಅದೊಂದೇ ಅಲ್ಲ, ಬೆಂಗಳೂರು ನಗರದಲ್ಲಿ 450 ಕ್ಕೂ ಮೇಲ್ಪಟ್ಟು ಈ ರೀತಿ ಇರತಕ್ಕಂತಹ ಕಟ್ಟಡಗಳಿಗೆ ಯಾವ ಕ್ರಮ ತೆಗೆದುಕೊಳ್ಳಬೇಕು, ಯಾವ ರೀತಿಯ ಡಿವಿಯೇಷನ್ಸ್ ಆಗಿದೆ, ಗಗನಚುಂಬಿ ಕಟ್ಟಡಗಳನ್ನು ಯಾವ ರೀತಿ ಕಟ್ಟಿದರು, ಇವುಗಳೆಲ್ಲವನ್ನು ಅಧ್ಯಯನ ಮಾಡಿ ಪ್ರಾಯಶಃ ಒಂದು ತಿಂಗಳಲ್ಲಿ ಇದರ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಆದೇಶ ಮಾಡಿದ್ದಾರೆ. ಮತ್ತೆ ಮಲ್ಯ ಆಸ್ಪತ್ರೆಯ ಎದುರುಗಡೆ ಇರುವ ಜಾಗದ ಬಗ್ಗೆ ಏನಾಗಿದೆ ಎಂದರೆ, ನಾನು ಕೂಡ ಮೊನ್ನೆ ಆಸ್ಪತ್ರೆಗೆ ಹೋಗಿದ್ದಾಗ, ಅದು ಎಂಬುದು ನನ್ನ ಭಾವನೆ. ಮತ್ತೆ ಸನ್ಮಾನ್ಯ ಸದಸ್ಯರು, ನಾವು ಬೆಂಗಳೂರು ನಗರವನ್ನು ನೋಡಿಲ್ಲ ಎಂದು ಹೇಳುತ್ತಾರೆ. ಎಂ.ಎಸ್. ರಾಮಯ್ಯನವರು, ಕಟ್ಟಿಸಿರುವ 50 ವರ್ಷದಿಂದ ಗೋಕುಲ ಕಟ್ಟಡವಿದ್ದು ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿದರು ಅಲ್ಲಿ ಯಾರು 50 ವರ್ಷದಿಂದ ಹೋಗಿ ಮುಟ್ಟಿರಲಿಲ್ಲ ಇವತ್ತು ಬೆಂಗಳೂರು ನಗರಪಾಲಿಕೆಯವರು ಅಲ್ಲಿಗೆ ಹೋಗಿ ಅಲ್ಪಸ್ವಲ್ಪ ಟ್ಯಾಕ್ಸ್‌ನ್ನು ಫಿಕ್ಸ್ ಮಾಡಿ ಬಂದಿದ್ದಾರೆ. ಅಲ್ಲಿರತಕ್ಕಂತಹ ಬಹುತೇಕ ಕಟ್ಟಡಗಳನ್ನು ಯಾವ ರೀತಿ ಕಾನೂನಿನ ಚೌಕಟ್ಟಿನೊಳಗೆ ತರಬಂದಿಗೆ ತರಬೇಕೆಂಬುದಕ್ಕೆ ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ. ನನಗಿಂತಲೂ ಹಿರಿಯರಾದ ಶ್ರೀ ವಾಟಾಳ್‌ನಾಗರಾಜ್‌ರವರು ಇಲ್ಲಿ ಕಾರ್ಪೊರೇಟರ್ ಆಗಿದ್ದರು. ಶಾಸಕರಾಗಿದ್ದಂತಹವರು, ಹೋರಾಟ ಮಾಡಿದಂತಹವರು, ಅವರ ಚಿಂತನೆಯಲ್ಲಿ ನಾವು ಕೂಡ ಭಾಗಿಗಳಾಗಿದ್ದೇವೆ. ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೋಸ್ಕರವಾಗಿ 25 ಕೋಟಿ ರೂಗಳ ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಂಡಿದ್ದೇವೆ. ಮೊದಲನೆಯ ಬಾರಿ ಸನ್ಮಾನ್ಯ ಜೆ.ಹೆಚ್. ಪಟೇಲರು, ದೇವೇಗೌಡರು ಮುಖ್ಯಮಂತ್ರಿಗಳಾದಾಗ 30 ವರ್ಷದಿಂದ ಏನು ಫ್ಲೈ ಓವರ್ ಮಾಡಬೇಕು ಎಂದು ಇದ್ದರು. ಆ ಕೆಲಸವನ್ನು ನಮ್ಮ ಸರ್ಕಾರವೇ ಪ್ರಾರಂಭ ಮಾಡಿರುವುದು. ಹತ್ತು ಹಲವಾರು ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಂಡಿದ್ದೇವೆ. ಇವೆಲ್ಲವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸ್ವಲ್ಪ ವೇಳೆಯಾಗುವುದರಿಂದ ಇನ್ನು ಒಂದೊವರೆ, ಎರಡು ತಿಂಗಳಲ್ಲಿ ಈ ರೀತಿಯ ಕಟ್ಟಡಗಳಿಗೆ, ಯಾವ ರೀತಿ ಮುಕ್ತಿಯನ್ನು ಕೊಡಬೇಕೆಂಬ ಬಗ್ಗೆ ನಾವೆಲ್ಲಾ ಒಟ್ಟಿಗೆ ಸೇರಿಸಿಕೊಂಡು ವಾಟಾಳ್‌ನಾಗರಾಜ್‌ರವರು ನೀಡಿದಂತಹ ಅನೇಕ ಉಪಯುಕ್ತವಾದಂತಹ ಸಲಹೆಗಳನ್ನು ಪರಿಶೀಲಿಸಿ ಬೆಂಗಳೂರು ನಗರಕ್ಕೆ ನಮ್ಮ ಕೈಲಾದ

ಆಳಿಲು ಸೇವೆಯನ್ನು ಮಾಡುತ್ತೇವೆ.

ವಾಟಾಳ್ ನಾಗರಾಜ್:- ನಾನು ನೀವು ಏನು ಮಾಡುತ್ತೀರೆಂದು ಹೇಳಲೇ, ತಾವು ಏನೂ ಮಾಡುವುದಕ್ಕೆ ಹೋಗುವುದಿಲ್ಲ. ಅವರಿಗೆ ಖಾಯಂ ಮಾಡುತ್ತೀರಿ. ಯಾರ್‍ಯಾರು, ಎಲ್ಲೆಲ್ಲಿ ಕಟ್ಟಿದ್ದಾರೆ, ಏನೇನು ಮಾಡಿದ್ದಾರೋ ಅವರಿಗೆ ಈ ಶತಮಾನ ಕಳೆದರೂ ತಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಆ ಕಟ್ಟಡಗಳನ್ನು ಕಟ್ಟಿರುವುದು ಸರಿ ಎಂದು ಹೇಳಿ ಸಂಪೂರ್ಣವಾಗಿ ಅನುಮತಿ ಕೊಟ್ಟು ಬಾರಾ ಖೂನ್ ಮಾಫ್ ಎಂದು ಮಾಡುತ್ತೀರಿ. ಇನ್ನು ಮುಂದೆ ಹೀಗೆ ಮಾಡಬೇಡಿ, ಕಾಪೌಂಡ್ ಕಟ್ಟಬೇಡಿ, ಈ ರೀತಿ ಹೇಳಿದರೆ ಇದು ನಿರ್ಧಾರವಾಗುತ್ತದೆಯೇ? ಇದು ಖಂಡಿತಾ ಆಗುವುದಿಲ್ಲ. ನಿಮಗೆ ಶಕ್ತಿ, ಪ್ರಾಮಾಣಿಕತೆ ಇದ್ದರೆ ಅದರ ಬಗ್ಗೆ ಹೇಳಿ. ನೀವು ಅದಕ್ಕೆ ಕೈಹಾಕಿದರೆ ನಿಮ್ಮ ಸರ್ಕಾರ ಉರುಳಿಸುವುದಕ್ಕೆ ಅವರು ಅದರ ಬಗ್ಗೆ ಹೇಳಿ. ನೀವು ಅದಕ್ಕೆ ಕೈಹಾಕಿದರೆ ನಿಮ್ಮ ಸರ್ಕಾರ ಉರುಳಿಸುವುದಕ್ಕೆ ಅವರು ಹೋಗುತ್ತಾರೆ. ನಿಮ್ಮ ಸರ್ಕಾರವನ್ನು ನಡುಗಿಸುತ್ತಾರೆ, ನಿಮ್ಮ ಸರ್ಕಾರದ ಮೇಲೆ ರಣಹದ್ದುಗಳಂತೆ ಎರಗುತ್ತಾರೆ, ಅವರೇನೂ ಸಾಮಾನ್ಯರೆಂದು ತಿಳಿದುಕೊಳ್ಳಬೇಡಿ. ಈ ರಣಹದ್ದುಗಳನ್ನು ಹೊಡೆದು ಹಾಕುವುದಕ್ಕೆ ಹೋದರೆ ಅಪಾಯಕ್ಕೆ ಸಿಕ್ಕುತ್ತೀರಿ. ಅದರ ಬಗ್ಗೆ ಎರಡು ತಿಂಗಳಲ್ಲಿ ನೋಡೋಣ ಎಂದು ಹೇಳಿದ್ದೀರಲ್ಲಾ, ನನಗೆ ಗೊತ್ತಿದೆ ಅದು ಏನೂ ಆಗುವುದಿಲ್ಲ. ಗೋಕುಲದ ವಿಷಯಕ್ಕೆ ಕೈ ಹಾಕುತ್ತೀರಾ? ಗೋಕುಲಕ್ಕೆ ಹೋಗುತ್ತೀರೀ? ನಿಮಗೆ ತಾಕತ್ತು ಇದೆಯೇ? ಸುಮ್ಮನೆ ಮಾತನಾಡಬೇಡಿ.

ಶ್ರೀ ವಿ. ಸೋಮಣ್ಣ:- ಇಲ್ಲಿ ನಾನು ತಾಕತ್ತಿನ ಪ್ರಶ್ನೆ ಹಾಕಿಲ್ಲ. ಎಂ.ಎಸ್. ರಾಮಯ್ಯನವರ ವ್ಯಾಪ್ತಿಯಲ್ಲಿರುವ, ಯಾರು ಹೋಗದಂತಹ ಗೋಕುಲಕ್ಕೆ ಮೊದಲು ಬಿಸಿಸಿ ಅಧಿಕಾರಿಗಳು ಹೋಗಿ ಕಾನೂನಿನ ಚೌಕಟ್ಟಿನಲ್ಲಿ ಯಾವ ರೀತಿ ತೆರಿಗೆ ಹಾಕಬೇಕು. ಅವರ ಪ್ರಾಪರ್ಟಿ ಎಷ್ಟಿದೆ ಎನ್ನುವ ಅಂಕಿಅಂಶಗಳನ್ನು ತೆಗೆದುಕೊಂಡಿದ್ದಾರೆ. ಈ ರೀತಿ ಮಾಡಿದವರಲ್ಲಿ ನಮ್ಮ ಸರ್ಕಾರವೇ ಮೊದಲನೆಯದು. ಪ್ರಾಯಶಃ ತಾವು ಕೂಡ ಇಲ್ಲಿ ಇದ್ದವರು. ಸಿದ್ದಲಿಂಗಯ್ಯನವರ ವೃತ್ತದ ಹತ್ತಿರದ ಜಾಗ ಏನಾಗಿದೆ, ಅದರ ಬಗ್ಗೆ ಈಗ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಎಲ್ಲವನ್ನೂ ನಮ್ಮ ಮೇಲೇ ಹಾಕಿದರೆ, ನಾವೇನೂ ಮಾಡುವುದಕ್ಕಾಗುತ್ತದೆ?

ವಾಟಾಳ್ ನಾಗರಾಜ್:- ತೆರಿಗೆ ಹಾಕಬೇಕು ಅಂದರೆ ಆ ಕಟ್ಟಡವನ್ನು ಖಾಯಂ ಮಾಡುತ್ತೇವೆಂದು ಅರ್ಥ. ಅವರಿಗೆ ಇನ್ನೂ ಅನುಕೂಲ ಮಾಡಿಕೊಡುತ್ತೇವೆಂದು ಅರ್ಥ. ಅದರಲ್ಲಿ ಬೇರೆ ಮಾತಿಲ್ಲ. ಆದ್ದರಿಂದ ನೀವು ಯೋಚನೆ ಮಾಡಿ ನಾವಂತೂ ಇಲ್ಲಿ ಕೂಗುವುದು, ಆಡುವುದು ಅನಿವಾರ್ಯ, ಈ ಕರ್ಮ ನಮಗೆ, ಅದರ ಬಗ್ಗೆ ನೀವು ತಲೆಕೆಡಿಸುವ ಅಗತ್ಯವಿಲ್ಲ. ನಾವು ಅಡುತ್ತಿರುತ್ತೇವೆ. ನೀವು ಕೇಳಿದರೆ ಕೇಳಬಹುದು ಬಿಟ್ಟರೆ ಬಿಡಬಹುದು. ಅದು ನಿಮಗೆ ಸೇರಿದ್ದು, ಹೇಳುವುದನ್ನೆಲ್ಲಾ ಹೇಳಿದ್ದೇವೆ. ಬೆಂಗಳೂರು ನಾಶವಾಗುತ್ತಿದೆ. ನಾನು ಅತ್ಯಂತ ಬಹಳ ನೋವಿನಿಂದ ಹೇಳುತ್ತಿದ್ದೇನೆ. ನಾನು ಬೆಂಗಳೂರು ಅಭಿವೃದ್ಧಿಯಾಗಬೇಕೆಂದು ನಿರಂತರವಾಗಿ ಹೋರಾಟ ಮಾಡುತ್ತಿರುವವನು. ಏಳು ವರ್ಷಗಳ ಕಾಲ ನಾನು ನಗರಸಭೆಯಲ್ಲಿದ್ದೆ. ಹಗಲುರಾತ್ರಿ ಈ ಊರಿನ ಕಲ್ಯಾಣಕ್ಕಾಗಿ ನಿರಂತರ ಹೋರಾಟ ಮಾಡುತ್ತಿದ್ದೆ ಈ ಊರಿನಲ್ಲಿ ಮಂತ್ರಿಮಂಡಲ ಇದೆ. ಮುಖ್ಯಮಂತ್ರಿಗಳು ಶಾಸಕರು, ಅಧಿಕಾರಿಗಳ ಮನೆಗಳಿವೆ. ಆದರೆ ಈ ಊರಿನ ಬಗ್ಗೆ

ಯಾರಿಗೂ ಗಮನವಿಲ್ಲ ಈ ಊರು ಕುಲಗೆಟ್ಟು ಕಲುಷಿತವಾಗಿದೆ ಎಂಬುದು ಆಶ್ಚರ್ಯಕರವಾದ ವಿಚಾರ. ಒಂದು ಆಶ್ಚರ್ಯಕರವಾದ ವಿಚಾರವನ್ನು ತಮಗೆ ಹೇಳುತ್ತೇನೆ. ಗುಬ್ಬಚ್ಚಿ ಎನ್ನುವ ಒಂದು ಪಕ್ಷಿ ಇತ್ತಲ್ಲ, ಅದು ಇವೊತ್ತಿನದಿವಸ ಈ ಊರಿನಲ್ಲಿ ಇಲ್ಲವೇ ಇಲ್ಲ. ಅದಕ್ಕೆ ಕಾರಣ ಏನು? ಈ ಕಲುಷಿತವಾದ ವಾತಾವರಣದಲ್ಲಿ ಆ ಪಕ್ಷಿ ಈ ಊರಿನ ಸುತ್ತ ಎಲ್ಲೂ ಇಲ್ಲ. ಅಂದಮೇಲೆ ಪಕ್ಷಿಗಳು ಈ ಊರನ್ನು ಬಿಟ್ಟುಹೋಗುತ್ತಿವೆ. ಮಾನವ ಕುಲಕ್ಕೆ ಅಪಾಯ ಒದಗುತ್ತೆ. ಕಲುಷಿತ ವಾತಾವರಣದಿಂದ ಈ ಪರಿಸರ ಹದಗೆಟ್ಟಿದೆ. ಇನ್ನು ಐದು ವರ್ಷಗಳಲ್ಲಿ ಪರಿಣಾಮಕಾರಿಯಾದ ವಾಹನ ಸಂಚಾರ ವ್ಯವಸ್ಥೆಯನ್ನು ಮಾಡಲು, ಮೇಲು ಸೇತುವೆಗಳನ್ನು ಮಾಡಿ, ವರ್ತುಲ ರೈಲುಗಳನ್ನು ಓಡಿಸುವುದಕ್ಕೆ ಹೊಸ ವಿಚಾರವನ್ನು ಮಾಡಿ, ಸಂಚಾರ ವ್ಯವಸ್ಥೆಯನ್ನು ಸರಿ ಪಡಿಸಿಲಿಲ್ಲ ಎಂದರೆ ಇಲ್ಲಿ ರಸ್ತೆ ರಸ್ತೆಗಳಲ್ಲಿ ವಾಹನಗಳ ಹೊಗೆಯ ಕಲುಷಿತ ವಿಷದ ಗಾಳಿಯನ್ನು ಕುಡಿದು ಜನ ಸಾಯತಕ್ಕಂಥ ಪರಿಸ್ಥಿತಿ ಇವತ್ತು ನಿರ್ಮಾಣವಾಗುತ್ತೆ. ಇದನ್ನು ನೀವು ಬರೆದಿಟ್ಟು ಕೊಳ್ಳಿ. ನಿಮಗೆ ಈ ರಾಜ್ಯದ ಬಗ್ಗೆ ಚಿಂತನೆ ಬೇಕು. ನಿಜವಾಗಿಯೂ ಈ ರಾಜ್ಯ ಹೀಗೆ ಇರಬೇಕು ಎಂಬ ಒಂದು ಚಿಂತನೆ ಇದ್ದದ್ದು ಹನುಮಂತಯ್ಯನವರಿಗೆ ಮಾತ್ರ ಆ ಒಂದು ಚಿಂತನೆಯನ್ನು ನೀವು ಇಷ್ಟಪಟ್ಟರೆ ನನಗೆ ನಿಜವಾಗಿಯೂ ಅತ್ಯಂತ ಸಂತೋಷವಾಗುತ್ತದೆ. ಕೊನೆಯದಾಗಿ, ಈ ಸರ್ಕಾರಿ ಆಸ್ಪತ್ರೆಗಳು. ನಾನೇನು ತೀರಾ ಆಸ್ಪತ್ರೆಯ ಒಳಹೊಕ್ಕು ಮಾತನಾಡುವುದಕ್ಕೆ ಹೋಗುವುದಿಲ್ಲ. ಆಸ್ಪತ್ರೆಯ ಮೇಲ್ನೋಟವನ್ನು ನಿಮಗೆ ಹೇಳುತ್ತೇನೆ. ಬೆಂಗಳೂರು ಸೇರಿದಂತೆ ಹಲವಾರು ಸರ್ಕಾರಿ ಆಸ್ಪತ್ರೆಗಳಿವೆ. ಆ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಕೊಡುವಂಥ ಬ್ರೆಡ್ನು ಏನಿದೆ ಅದರಲ್ಲಿ ಜಿರಲೆ, ಇದರಲ್ಲಿ ಏನೂ ಅನುಮಾನ ಪಡುವುದಕ್ಕೆ ಹೋಗಬೇಡಿ. ಬೌರಿಂಗ್ ಆಸ್ಪತ್ರೆ, ಕೆ.ಆರ್. ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ಇಂತಹ ಯಾವುದೇ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಕೊಡತಕ್ಕಂಥ ಬ್ರೆಡ್ಡಿನಲ್ಲಿ ಜಿರಲಿ ಇದೆ ಎಂದರೆ, ಆಸ್ಪತ್ರೆ ಎಷ್ಟು ಕೆಟ್ಟಿರಬಹುದು? ಮತ್ತೆ ಹಾಲಿನಲ್ಲಿ ನೊಣ, ಹಾಸಿಗೆಯಲ್ಲಿ ತಿಗಣೆ. ಹೊರ ರೋಗಿಗಳಿಗೆ ನರಕ ಒಳರೋಗಿಗಳಿಗೆ ಯಮಲೋಕ. ಇದು ನಮ್ಮ ಸರ್ಕಾರಿ ಆಸ್ಪತ್ರೆಯ ಚಿತ್ರ. ಈ ಚಿತ್ರದ ಮೇಲೆ ನಾವು ವಿಶ್ಲೇಷಣೆ ಮಾಡುತ್ತಾ ಹೋದರೆ, ಅದರ ಹಣೇಬರಹ ಎಷ್ಟು ಕುಲಗೆಟ್ಟಿದೆ? ನಾವು ಯಾರು ಈ ದೇಶದಲ್ಲಿ ತ್ಯಾಗ ಮಾಡುತ್ತೇವೆ, ಸೇವೆ ಮಾಡುತ್ತೇವೆ ಎಂದು ಹೇಳಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ಆಸ್ಪತ್ರೆಗಳನ್ನು ನೋಡಿದಾಗ ನಮಗೆ ನಾಚಿಕೆಯಾಗುತ್ತದೆ. ಈ ಆಸ್ಪತ್ರೆಗಳ ಹಣೇಬರಹ ಆ ರೀತಿಯಾಗಿದೆ. ನರ್ಸಿಂಗ್ ಹೋಂಗಳು ಹೇಗೆ ಎಂದರೆ ಯಮರಾಜ ಇದ್ದಂತೆ. ಬೇರೆ ಮಾತೇ ಇಲ್ಲ. ಹಣವನ್ನು ಹೊರಗಡೆ ಕೊಡಬೇಕಾದರೆ ಅವರ ದುಡ್ಡನ್ನು ಸಂಪೂರ್ಣವಾಗಿ ಕೊಡದೆ ಹೊರಗಡೆ ಕೊಡದಂಥ ಪರಿಸ್ಥಿತಿ ಆಗಿದೆ. ಇವೆಲ್ಲವನ್ನು ಸರಿಪಡಿಸುವುದಕ್ಕೆ ಸರ್ಕಾರದ ಒಂದು ಯಂತ್ರ ಎಲ್ಲೋ ಒಂದುಕಡೆ ಮುದುರಿಕೊಂಡಿದೆ. ಆ ಯಂತ್ರವನ್ನು ಸರಿಪಡಿಸತಕ್ಕಂಥ ವ್ಯವಸ್ಥೆ ಆಗಬೇಕು. ನೀವು ರಾಜ್ಯಪಾಲರ ಭಾಷಣದಲ್ಲಿ ಈ ರೀತಿ ವರ್ಷಕ್ಕೊಂದುಸಾರಿ ವರ್ತನೆ ತರಹ ಭಾಷಣ ಮಾಡಿಸಿಬಿಟ್ಟು ನಾಲ್ಕು ಮಾತುಗಳನ್ನು ನಿಮ್ಮ ಸಚಿವಸಂಪುಟದಲ್ಲಿ ತಯಾರು ಮಾಡಿಕೊಟ್ಟರೆ ಇದು ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಿ, ನಿಮ್ಮ ಸರ್ಕಾರ ನಾನು ಮೊದಲು ಹೇಳಿದಂತೆ ಈ ಒಂದು ಆಡಳಿತ ಚುರುಕಿಗೆ, ಆಡಳಿತವನ್ನು ಸುಭದ್ರವಾಗಿ ನಡೆಸತಕ್ಕಂಥ ಒಂದು ವ್ಯವಸ್ಥೆಗೆ ತಾವು ಮಾರ್ಗದರ್ಶನವನ್ನು ಕೊಡಬೇಕು ಎನ್ನತಕ್ಕಂಥ ಮಾತನ್ನು ಹೇಳಿ ನಾನು ರಾಜ್ಯಪಾಲರ ಭಾಷಣವನ್ನು ವಿರೋಧಿಸಿ

ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ ಸದನವನ್ನು ಮುಂದೂಡಿತ್ತಿದ್ದೇನೆ ಸದನವು ಮತ್ತೆ ಸೇರುವುದು.

ಸದನವು 3 ಗಂಟೆ 04 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಸಂಜೆ 4 ಗಂಟೆಗೆ ಸೇರಲು ನಿಶ್ಚಯಿಸಿತು.

ಸದನವು ಮತ್ತೆ 4 ಗಂಟೆ 1 ನಿಮಿಷಕ್ಕೆ ಸಮಾವೇಶಗೊಂಡಿತು.

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ) ರವರು ಪೀಠದಲ್ಲಿ ಉಪಸ್ಥಿತರಿದ್ದರು)

+ಶ್ರೀ ಟಿ.ಬಿ. ಜಯಚಂದ್ರ:- (ಕಳ್ಳಂಬೆಳ್ಳ):-ಸನ್ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯಪಾಲರ ಭಾಷಣದ ವಂದನಾನಿರ್ಣಯದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಪ್ರಥಮವಾಗಿ ತಮಗೆ ವಂದಿಸುತ್ತಾ ರಾಜ್ಯಪಾಲರ ಭಾಷಣವನ್ನು ನಾನು ವಿರೋಧಿಸಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಮೊನ್ನೆ ಚರ್ಚೆ ನಡೆಯುವಂಥ ಸಂದರ್ಭದಲ್ಲಿ, ಅನೇಕ ಸದಸ್ಯರು ಮೊನ್ನೆ ನಡೆದ ಚುನಾವಣೆ ಬಗ್ಗೆ ಪ್ರಸ್ತಾಪವನ್ನು ಮಾಡುತ್ತಾ ಈ ಚುನಾವಣೆಗೆ ಕಾರಣಕರ್ತರು ಯಾರು, ಚುನಾವಣೆ ಏತಕ್ಕೆ ಬಂತು, ಪರೋಕ್ಷವಾಗಿ ಚುನಾವಣೆ ಒಂದು ರೀತಿಯಲ್ಲಿ ಕಾಂಗ್ರೆಸ್ಸಿನವರ ಉದ್ಧಟತನದಿಂದ ಬಂತು ಎಂಬ ಅಭಿಪ್ರಾಯವನ್ನು ಕೊಟ್ಟು, ಕೆಲವರು ಮಾತನಾಡಿದರು. ಅದು ಕಡತದಲ್ಲಿ ಹೋಗಿರುವುದರಿಂದ ಕಾಂಗ್ರೆಸ್ ಪಕ್ಷಕ್ಕೆ ಸೇರಿದವನಾಗಿ ನಾನು ಆ ಮಾತಿಗೆ ಉತ್ತರವನ್ನು ಕೊಡಲೇಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ಅವರು ಮಾತನಾಡುವುದಕ್ಕೆ ಏನೂ ಬೇಜಾರಿಲ್ಲ. ಮಾತನಾಡಲಿ. ಆದರೆ ಮೊದಲನೇ ಸಾಲಿನಲ್ಲಿ ಒಬ್ಬ ಮಂತ್ರಿಯೂ ಇಲ್ಲ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುವಾಗ ಮುಖ್ಯಮಂತ್ರಿಗಳಿಗೆ ಕೆಲಸ ಇದ್ದರೆ, ಉಳಿದ ಮಂತ್ರಿಗಳು ಸದನದಲ್ಲಿ ಇರಬೇಕು. ಏಕೆಂದರೆ, ಅದು ಯಾವುದೇ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಇರುವುದಿಲ್ಲ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವಾಗ ಅದರಲ್ಲಿ ಎಲ್ಲಾ ವಿಷಯಗಳೂ ಬರುತ್ತವೆ ಮಂತ್ರಿಗಳಿಗೆ ಏನು ಪುರಸೊತ್ತಿಲ್ಲವಾ? ಏನು ಕೆಲಸ ಮಾಡುತ್ತಾರೆ? ನಿದ್ರೆ ಮಾಡುತ್ತಾರಾ? ಸೆಕ್ಷನ್ ಇದ್ದಾಗಲೂ ಕೂಡ ಬರುವುದಿಲ್ಲ. ಇಲ್ಲದಿದ್ದರೆ ಬೇರೆಯವರಿಗೆ ಯಾರಿಗಾದರೂ ಮಂತ್ರಿಗಳನ್ನಾಗಿ ಮಾಡಿ ಇಲ್ಲಿ ಕೂರಿಸಿ. ನೀವು ಛೀಮಾರಿ ಹಾಕಬೇಕು ಅಂಥವರಿಗೆ. ಎಷ್ಟು ಸಾರಿ ಹಾಕುತ್ತೀರಿ? ನಮಗಲ್ಲ, ಯಾರಾದರೂ ನೋಡಿದರೆ ಸದನಕ್ಕೆ ಒಂದು ಗೌರವ ಬರಬೇಕಲ್ಲಾ ಏನು ಕೆಲಸ ಇದೆ ನಿಮಗೆ? ಅಟಲೀಸ್ಟ್ ಬರೆದುಕೊಂಡು ಉತ್ತರ ಹೇಳುವುದಕ್ಕೆ ಬೇಡವೆ? ಏನು ಒಬ್ಬರನ್ನು ಕೂರಿಸುತ್ತೀರಾ? ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಎಲ್ಲರೂ ಇರಬೇಕಾಗುತ್ತದೆ.

ಉಪಾಧ್ಯಕ್ಷರು:- ಹೇಳಿಕಳುಹಿಸಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಎಷ್ಟು ಸಾರಿ ಹೇಳುವುದು? ಮುಖ್ಯಮಂತ್ರಿಗಳಿಲ್ಲ ಎಂದು ಪ್ರೊಜೆಕ್ಟ್ ಮಾಡುವುದು, ಮಂತ್ರಿಗಳಿಲ್ಲ ಎಂದು ಮಾಡುವುದು. ಮುಖ್ಯ ಮಂತ್ರಿಗಳು ಬೇರೆ ಕೆಲಸಕ್ಕೆ ಹೋಗಿರಬಹುದು. ಉಳಿದವರಾದರೂ ಬರಬೇಕಲ್ಲಾ. ಅವರಿಗಂತೂ ಪುರಸೊತ್ತಿರುವುದಿಲ್ಲ. ಆ ಮಾತು ಬೇರೆ. ಪುರಸೊತ್ತು ಇದ್ದವರಾದರೂ ಬರಬೇಕಲ್ಲಾ.

ಶ್ರೀ ಟಿ.ಬಿ. ಜಯಚಂದ್ರ:- ಅಧ್ಯಕ್ಷರೆ, ಈ ದೇಶದ 50 ವರ್ಷದ ಇತಿಹಾಸದಲ್ಲಿ ಮೊನ್ನೆ 1996ರಲ್ಲಿ ನಡೆದಂಥ ಚುನಾವಣೆ ಬಗ್ಗೆ ಮಾತನಾಡುವುದಾದರೆ, ಆಗ ಬಹಳ ಪ್ರಮುಖವಾಗಿ ಮೂರು ಪಕ್ಷಗಳು ಒಂದು ಕಡೆ ಕಾಂಗ್ರೆಸ್, ಇನ್ನೊಂದು ಕಡೆ ಭಾರತೀಯ ಜನತಾ ಪಕ್ಷ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಯುನೈಟೆಡ್ ಫ್ರಂಟ್ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ, ಆಗ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಬಹುಮತ ಬರದೇ ಇದ್ದ ಕಾರಣ ನಾವು ಒಂದು ನೀತಿಗೆ, ನಿಲುವಿಗೆ ಕಟ್ಟುಬಿದ್ದಂಥ ಪಕ್ಷವಾಗಿ ಒಂದು ಸೆಕ್ಯೂಲರ್ ಫೋರ್ಸ್‌ಸ್ ಅನ್ನು ಬೆಳಸಬೇಕು ಎಂಬ ಒಂದು ಏಕೈಕ ಉದ್ದೇಶದಿಂದ, ನಮಗೆ ಜನರ ಆದೇಶ ಇಲ್ಲ ಎನ್ನುವ ಒಂದು ಕಾರಣದಿಂದ, ಯಾರೇ ಬೇಕಾದರೂ ಸರ್ಕಾರವನ್ನು ರಚನೆ ಮಾಡಲಿ ಆದರೆ ಜಾತಿ ಶಕ್ತಿಗಳನ್ನು ಹೊರಗಿಟ್ಟು ಮಾಡುವುದಾದರೆ ನಾವು ಅನ್‌ಕಂಡೀಷನಲ್ ಆಗಿ ಸಪೋರ್ಟ್ ಕೊಡುತ್ತೇವೆ ಎಂಬ ಒಂದು ತೀರ್ಮಾನವನ್ನು ತೆಗೆದುಕೊಂಡು ಬಹುಮತ ಇದ್ದರೂ ಕೂಡ ಸರ್ಕಾರ ರಚಿಸುವುದಕ್ಕೆ ಮುಂದಾಗಲಿಲ್ಲ. ಅದರ ಲಾಭವನ್ನು ಪಡೆದಂಥ ಯುನೈಟೆಡ್ ಫ್ರಂಟ್‌ನವರು ನಮ್ಮ ಸಹಾಯದಿಂದ ಅಧಿಕಾರದ ಗದ್ದುಗೆ ಏರಿದರು. ಏರಿದಾದ ಮೇಲೆ ಚುನಾವಣೆ ಏತಕ್ಕೆ ಬಂತು ಎಂಬ ಪ್ರಶ್ನೆ. ನಮ್ಮ ಸಹಾಯದಿಂದ ಅಧಿಕಾರಕ್ಕೆ ಬಂದಂಥ ಯಾರೇ ನಾಯಕರಿರಲಿ ಯುನೈಟೆಡ್ ಫ್ರಂಟ್‌ನಿಂದ ಬಂದಂಥ ನಾಯಕರುಗಳು ಕೊನೇಪಕ್ಷ, ಕಾಂಗ್ರೆಸ್ ಪಕ್ಷದವರು ಯಾವುದೇ ರೀತಿಯಾದಂಥ ಹಸ್ತಕ್ಷೇಪವನ್ನು ಕೂಡ ಆಡಳಿತದಲ್ಲಿ ಮಾಡಿರಲಿಲ್ಲ ಅಷ್ಟೊಂದು ಅನ್‌ಕಂಡೀಷನಲ್ ಸಪೋರ್ಟ್ ಕೊಟ್ಟಿದ್ದರೂ ಕೂಡ, ಎಲ್ಲೂ ಕೂಡ ಕಾಂಗ್ರೆಸ್ ಬಗ್ಗೆ ಒಂದೇ ಒಂದು ಒಳ್ಳೆಯ ಮಾತನ್ನು ಯಾವ ನಾಯಕರೂ ಆಡಿದ್ದು ನಾನು ಕೇಳಲಿಲ್ಲ. ಕಾಂಗ್ರೆಸ್ಸನ್ನು ಟೀಕೆ ಮಾಡುವುದರ ಜೊತೆಗೆ ಕಾಂಗ್ರೆಸ್ಸನ್ನು ಒಡೆಯತಕ್ಕ ಪಿತೂರಿ ಕೆಲಸವನ್ನು ಮಾಡಿದ ಪರಿಣಾಮವಾಗಿ ಪ್ರಧಾನಮಂತ್ರಿಗಳು ಬದಲಾಗಬೇಕಾಗಿ ಬಂತು. ಸರ್ಕಾರಗಳು ಬದಲಾಗುವ ಪರಿಸ್ಥಿತಿ ಬಂತು. ಮುಖ್ಯವಾಗಿ ಚುನಾವಣೆ ಏತಕ್ಕೆ ಬಂತು ಎಂದರೆ ಇವತ್ತು ನಮ್ಮ ಪಕ್ಷಕ್ಕೆ ಒಂದು ನಾಯಕತ್ವ ಇದೆ. ಅದರಲ್ಲೂ ವಿಶೇಷವಾಗಿ ಶ್ರೀಮತಿ ಇಂದಿರಾಗಾಂಧಿಯವರಾಗಲಿ ಜವಾಹರಲಾಲ್ ನೆಹರೂ ಅವರಾಗಲಿ, ಅವರ ಫ್ಯಾಮಿಲಿಗೂ ನಮ್ಮ ಕಾಂಗ್ರೆಸ್ ಪಕ್ಷಕ್ಕೂ ಒಂದು ಭಾವನಾತ್ಮಕವಾದಂಥ ಸಂಬಂಧ ಇರುವಾಗ, ಈ ದೇಶದ ಪ್ರಧಾನಮಂತ್ರಿ ಯಾಗಿದ್ದವರು ಕಾಂಗ್ರೆಸ್ ನಾಯಕರಾಗಿದ್ದಂಥ ಅಖಿಲಬಾರತ ಕಾಂಗ್ರೆಸ್ ಅಧ್ಯಕ್ಷರಾಗಿದ್ದಂಥ ರಾಜೀವ್‌ಗಾಂಧಿಯವರ ಹತ್ಯೆಯ ವಿಚಾರಣೆಯನ್ನು ನಡೆಸಿದ ಜೈನ್ ಕಮಿಷನ್, ಪ್ರಾಥಮಿಕ ವರದಿಯಲ್ಲಿ ಯುನೈಟೆಡ್ ಫ್ರಂಟ್‌ನಲ್ಲಿ ಇದ್ದಂಥ ಕೆಲವು ಮಂತ್ರಿಗಳ ಹೆಸರು ಪ್ರಸ್ತಾಪವಾದಾಗ, ಅವರನ್ನು ಕೆಲವು ಕಾಲ ಹೊರಗಡೆ ಇಡತಕ್ಕ ಕೆಲಸವನ್ನು ಮಾಡಿ ಎಂದು ಹೇಳಿದರೂ ಕೂಡ ಟಿ.ಎಂ.ಸಿ. ಮತ್ತು ಡಿ.ಎಂ.ಕೆ. ಪಕ್ಷಕ್ಕೆ ಸೇರಿದಂಥ ಮಂತ್ರಿಗಳನ್ನು ಹೊರಗಿಡಬೇಕು ಎಂದು ಹೇಳಿದಂಥ ಸಂದರ್ಭದಲ್ಲಿ ಇಡುವುದಕ್ಕೆ ಒಪ್ಪಲಿಲ್ಲ.

ಶ್ರೀ ಎನ್. ರಾಜಣ್ಣ:- ಒಂದೇ ಒಂದು ನಿಮಿಷ.

ಶ್ರೀ ಟಿ.ಬಿ. ಜಯಚಂದ್ರ:- ಬೇಡ. ಕೊಟ್ಟಿರುವ ಕಾಲವೇ ಕಡಿಮೆ.

SRI N. RAJANNA:- There is no material evidence to keep these Ministers out of the Cabinet.

ಶ್ರೀ ಟಿ.ಬಿ. ಜಯಚಂದ್ರ:- ಅವರನ್ನು ಕೆಲವು ಕಾಲ ಹೊರಗಿಡಿ ಎಂದು ಹೇಳಿದಾಗ ಕೂಡ ಅವರನ್ನು ಹೊರಗಿಡಲಿಲ್ಲ. ನಾವು ಒಂದು ತತ್ವಕ್ಕೆ, ಒಂದು ಸಿದ್ಧಾಂತಕ್ಕೆ ಕಟ್ಟುಬಿದ್ದ ಸೆಕ್ಯುಲರ್ ಫೋರ್ಸಸ್ ಬೆಳಸಬೇಕು ಎಂಬ ದೃಷ್ಟಿಯಿಂದ ಅನ್‌ಕಂಡೀಷನಲ್ ಸಪೋರ್ಟ್ ಕೊಟ್ಟರೂ ಕೂಡ ಕೆಲವು ಮಂತ್ರಿಗಳನ್ನು ದೂರ ಇಡುವುದಕ್ಕೆ ಒಪ್ಪದೇ ಇದ್ದಾಗ ಯುನೈಟೆಡ್ ಫ್ರಂಟ್ ನಾಯಕರ ಉದ್ಧಟತನ ಮತ್ತು ಅವರ ಬಿಗಿ ನಿಲುವಿನಿಂದ ಅನಿವಾರ್ಯವಾಗಿ ಬೆಂಬಲ ವಿತ್‌ಡ್ರಾ ಮಾಡತಕ್ಕ ಪ್ರಶ್ನೆ ಬಂತು. ಚುನಾವಣೆಗೆ ಹೋಗತಕ್ಕ ಪರಿಸ್ಥಿತಿ ಬಂತು. ಚುನಾವಣೆಗೆ ಹೋದಂಥ ಸಂದರ್ಭದಲ್ಲಿ ಏನಾಯಿತು? ಚುನಾವಣಾ ಪೂರ್ವದಲ್ಲಿ ಯಾವ ಶಕ್ತಿಗಳು ಚುನಾವಣಾ ಕಣದಲ್ಲಿ ಅವತ್ತು ಇದ್ದವೋ, ಅದೇ ಶಕ್ತಿಗಳು ಇವತ್ತು ಚುನಾವಣಾ ಕಣದಲ್ಲಿ ಬಂದವು. ಒಂದು ಕಡೆ ಕಾಂಗ್ರೆಸ್ ಪಕ್ಷ, ಇನ್ನೊಂದು ಕಡೆ ಭಾರತೀಯ ಜನತಾ ಪಕ್ಷ ಮತ್ತು ಯುನೈಟೆಡ್ ಫ್ರಂಟ್. ಚುನಾವಣೆ ನಡೆದಂತ ಸಂದರ್ಭದಲ್ಲಿ ಕೂಡ ಮತ್ತು ಚುನಾವಣೆಯ ಫಲಿತಾಂಶದ ಬಗ್ಗೆ ನಾನು ಹೇಳಬೇಕಾಗಿಲ್ಲ. ಬಂದಂತಹ ತೀರ್ಪಾದರೂ ಏನು? ಕಾಂಗ್ರೆಸ್ ಪಕ್ಷ ತನ್ನದೇ ಆದಂತಹ ಅಸ್ತಿತ್ವವನ್ನು ಉಳಿಸಿಕೊಂಡು ಇವತ್ತು ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿ ಬರುವುದಕ್ಕೆ ವಾತಾವರಣ ನಿರ್ಮಾಣವಾಯಿತು. ಅದೇರೀತಿಯಲ್ಲಿ ಇನ್ನೊಂದು ಪಕ್ಷ ಕೂಡ ಬೆಳೆಯುವುದಕ್ಕೆ ಅನುಕೂಲವಾಯಿತು. ಮುಖ್ಯವಾಗಿ 190 ಸದಸ್ಯರನ್ನು ಒಳಗೊಂಡಂತಹ ಸಂಯುಕ್ತರಂಗ ಇವತ್ತು ಕೇವಲ 99 ಇಳಿಯತಕ್ಕ ಒಂದು ಪರಿಸ್ಥಿತಿ ಬಂತು. ನೀವು ಮಾಡಿದಂತಹ ಕೃತ್ಯ ಏನಿದೆ, ಈ ರಾಷ್ಟ್ರದ ಜನ ಅರ್ಥಮಾಡಿಕೊಂಡು ನಿಮ್ಮ ಸಂಖ್ಯೆ 99ಕ್ಕೆ ನಿಲ್ಲುವಂತಹ ಕೆಲಸ ಮಾಡಿದ್ದಾರೆ. ನಾನೊಂದು ಮಾತನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಕೂಡ ಸರ್ಕಾರ ಅಧಿಕಾರಕ್ಕೆ ಅಂಟಿಕೊಂಡು ಈ ಒಂದು ಆಡಳಿತವನ್ನು ಮಾಡತಕ್ಕ ಸಂದರ್ಭದಲ್ಲಿ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. 10 ಸೀಟಿಗಿಂತ ಕಡಿಮೆ ಬಂದರೆ ನಾನು ನೈತಿಕ ಹೊಣೆ ಹೋರುತ್ತೇನೆ ಎನ್ನುವ ಮಾತನ್ನು ಹೇಳಿದರು. ಬಹುಶಃ ವಿರೋಧಪಕ್ಷದ ನಾಯಕರು ಚುನಾವಣೆಯ ಪೂರ್ವದಲ್ಲಿ ಈ ಕಡೆ ಕುಳಿತಿರತಕ್ಕವರು ಯಾರೂ ಕೂಡ ನಿಮಗೆ ಬಹುಮತ ಬರುವುದಿಲ್ಲ, ನೀವು ರಾಜೀನಾಮೆಯನ್ನು ಕೊಡಿಯೆಂದು ನಾವು ಯಾರೂ ಹೇಳದಿದ್ದರೂ ಕೂಡ, ಸ್ವಇಚ್ಛೆಯಿಂದ ಅವೊತ್ತು ಈ ಮಾತು ಹೇಳಿದರು. ಅವರು ಈಗ ಯಾವರೀತಿಯಾದ ಹೊಣೆಯನ್ನು ಹೊರುತ್ತಾರೆನ್ನುವ ವಿಚಾರ ಅವರಿಗೆ ಬಿಟ್ಟಿರತಕ್ಕ ಪ್ರಶ್ನೆಯ ಚುನಾವಣೆಯ ಫಲಿತಾಂಶ ಬಂದಮೇಲೆ ಹೇಳಿಕೆ ಕೊಡಿಸುವುದು, ಬೇರೆಯವರ ಕಡೆಯಿಂದ ರಾಜಿನಾಮೆ ಕೊಡುವುದರಲ್ಲಿ ಅರ್ಥವಿಲ್ಲವೆನ್ನುವ ಮಾತನ್ನು ಹೇಳುವುದಾದರೆ, ನಾನು ಒಂದು ಮಾತು ಹೇಳಬೇಕಾಗುತ್ತದೆ, ನಿಜ ಇವತ್ತು ನಾವು ವಾದವನ್ನು ಮಾಡಬೇಕಾದರೆ ಈ ಚುನಾವಣೆ ರಾಷ್ಟ್ರಮಟ್ಟಕ್ಕೆ ನಡೆದಿರತಕ್ಕದ್ದು; ಕೆಲವು ಇಷ್ಯೂಸ್ ಮೇಲೆ ಚುನಾವಣೆ ನಡೆದಿದೆ, ರಾಜ್ಯದ

ಆಡಳಿತದ ಮೇಲೆ ಯಾವರೀತಿಯಾದ ಪರಿಣಾಮ ಬೀರಿಲ್ಲವೆಂದು ಎಷ್ಟೇ ಹೇಳಿದರೂ ಕೂಡ, ಎಷ್ಟೋ ರಾಜ್ಯಗಳಲ್ಲಿ ಆಡಳಿತ ಮಾಡತಕ್ಕ ಪಕ್ಷಗಳಿವೆ. ಅವರ ಪರವಾಗಿರತಕ್ಕ ಅಭ್ಯರ್ಥಿಗಳು ಹೆಚ್ಚು ಗೆದ್ದಿರಬೇಕಾದರೆ, ನಮ್ಮ ರಾಜ್ಯದಲ್ಲಿ 16 ರಿಂದ 3 ಕ್ಕೆ ಇಳಿಯಬೇಕಾದರೆ, ನಿಮ್ಮ ಆಡಳಿತದ ಪ್ರಭಾವ ಜನಗಳ ಮೇಲೆ ಸಾಕಷ್ಟು ಬೀರಿಲ್ಲ ಎನ್ನುವುದಕ್ಕೆ ಇದಕ್ಕಿಂತ ದೊಡ್ಡ ನಿದರ್ಶನ ಬೇಕಾಗಿಲ್ಲ. 16 ರಿಂದ 3 ಕ್ಕೆ ಬರಬೇಕಾದರೆ ನೀವು ಮಾಡಿರತಕ್ಕ ಆಡಳಿತದ ವೈಫಲ್ಯವನ್ನು ಇದು ಪ್ರತಿಭಿಂಭಿಸುತ್ತದೆಯೇ ಬೇರೇನೂ ಇರುವುದಿಲ್ಲ. ಈ ರೀತಿಯಾದ ವ್ಯವಸ್ಥೆಯಿಂದ, ರಾಷ್ಟ್ರದಲ್ಲಿ ಸಂಯುಕ್ತ ರಂಗದವರ ಉದ್ಧಟತನದಿಂದ, ಹಠಮಾರಿತನದಿಂದ ಯಾವ ಒಂದು ಶಕ್ತಿಯನ್ನು ಬೆಳೆಯಲಿಕ್ಕೆ ಬಿಡಬಾರದೆಂದು ಕಾಂಗ್ರೆಸ್‌ನವರು ಮತ್ತು ಸಂಯುಕ್ತ ರಂಗದವರು ಜೊತೆಗೂಡಿ ಕೆಲಸ ಮಾಡಿದ್ದರೋ ಅದನ್ನು ಬದಿಗಿಟ್ಟು, ಆ ಶಕ್ತಿಗಳು ಬೆಳೆಯಲಿಕ್ಕೆ ಅವಕಾಶ ಮಾಡಿಕೊಟ್ಟರು. ಇನ್ನೊಂದು ಮಾತು ಹೇಳುತ್ತೇನೆ, ಇವತ್ತು ರಾಜಕೀಯ ಪಕ್ಷಗಳು ಅವರವರ ಚುನಾವಣೆಯ ಪ್ರಣಾಳಿಕೆಯ ಪ್ರಣಾಳಿಕೆಯಲ್ಲಿ ಬಹಳ ಪ್ರಸ್ತಾಪ ಮಾಡಲಿಕ್ಕೆ ಹೋಗುತ್ತಾರೆ. ಬಹಳ ಪ್ರಮುಖವಾದ ಚುನಾವಣೆಯ ಘೋಷಣೆ ಅಂದರೆ ಮೊದಲನೆಯದಾಗಿ ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಿಸುತ್ತೇವೆ ಎನ್ನುವ ಅಂಶವನ್ನು ಇಟ್ಟುಕೊಂಡು ಚುನಾವಣೆ ಕಣದಲ್ಲಿ ಬಂದಿದ್ದಾರೆ. ಜನ ರಾಷ್ಟ್ರದಲ್ಲಿ ಅವರಿಗೆ ಅತ್ಯಂತ ಬಹುಮತವನ್ನು ಕೊಡದಿದ್ದರೂ ಕೂಡ ವರ ಕಡೆ ತೀರ್ಪನ್ನು ಕೊಟ್ಟಿದ್ದಾರೆ. ಈಗಾಗಲೇ ಸರ್ಕಾರವನ್ನು ರಚನೆ ಮಾಡುವುದಕ್ಕೆ ಕೂಡ ರಾಷ್ಟ್ರಪತಿಗಳು ಅಂಕಿತ ಕೊಟ್ಟಿರುವ ಸಂದರ್ಭದಲ್ಲಿ ನಾನು ಆತಂಕಪಡತಕ್ಕದ್ದು ಇಷ್ಟೆ. 50 ವರ್ಷಗಳ ಹಿಂದೆ ಸ್ವಾತಂತ್ರ್ಯ ಬಂದನಂತರ ಬಾಬಾಸಾಹೇಬ್ ಅಂಬೇಡ್ಕರ್‌ರವರು ಸಂವಿಧಾನವನ್ನು ರಚಿಸುವ ಸಂದರ್ಭದಲ್ಲಿ ನಮ್ಮ ರಾಷ್ಟ್ರಕ್ಕೆ ರಾಜ್ಯಾಂಗವನ್ನು ಸಮರ್ಪಿಸುವಾಗ ಒಂದು ಮಾತನ್ನು ಹೇಳಿದ್ದುಂಟು. ಅದು ಈ ರೀತಿ ಇದೆ 'ಭಾರತದ ಪ್ರಜೆಗಳು ನಾವು ಸಾರ್ವಭೌಮ ಸಮಭಾವದ ಗಣರಾಜ್ಯ ವ್ಯವಸ್ಥೆಗೊಳಿಸುವುದಕ್ಕೋಸ್ಕರ, ಸಮಸ್ತ ನಾಗರೀಕರ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ನ್ಯಾಯ ಸಮಗ್ರತೆ ವಾಕ್‌ಚರಣೆ ವಿಶ್ವಾಶ ಮತ್ತು ಧರ್ಮಶ್ರದ್ಧೆ ಆರಾಧನೆ, ಸ್ವಾತಂತ್ರ್ಯ ರಕ್ಷಣೆ ಮಾಡುವುದಕಕ್ಕೋಸ್ಕರ ನಾವು ಇದನ್ನು ಸಮರ್ಪಿಸಿಕೊಳ್ಳುತ್ತೇವೆ' ಎಂದು ಹೇಳಿದ್ದಾರೆ. ಇಂತಹ ಇಷ್ಯೂಸ್ ಇಟ್ಟುಕೊಂಡು ನಮ್ಮ ಮೂಲ ಸಂವಿಧಾನದ ಉದ್ದೇಶ ಏನಿತ್ತು, ಆ ಉದ್ದೇಶಕ್ಕೆ ಧಕ್ಕೆ ಬರುತ್ತದೆನ್ನುವ ವಾತಾವರಣ ಎಲ್ಲರ ಮನಸ್ಸಿನಲ್ಲಿ ಬಂದಿದೆ. ಎಲ್ಲಾ, ಆ ಉದ್ದೇಶಕ್ಕೆ ಧಕ್ಕೆ ಬರುತ್ತದೆನ್ನುವ ವಾತಾವರಣ ಎಲ್ಲರ ಮನಸ್ಸಿನಲ್ಲಿ ಬಂದಿದೆ. ಎಲ್ಲಾ ರಾಷ್ಟ್ರದಲ್ಲಿ, ಎಲ್ಲಾ ಪಕ್ಷಗಳು ಆಡಳಿತ ಮಾಡಬೇಕಾದರೆ ಅದೇ ರೀತಿ ಇಲ್ಲಿ ಜನರು ಇವರಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ನಾಳೆ ನಾಡಿದ್ದರಲ್ಲಿ ಪ್ರಧಾನಮಂತ್ರಿಗಳ ಘೋಷಣೆ ಆದಮೇಲೆ ಸರ್ಕಾರ ರಚಿಸಬೇಕಾದರೆ ನೋಡೋಣ. ಎಲ್ಲಿಯವರೆಗೆ ಈ ದೇಶವನ್ನು ಯಾವ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುತ್ತಾರೆಂದು ನೋಡಬೇಕು. ಮತ್ತೆ ಚುನಾವಣೆಯ ಪ್ರಣಾಳಿಕೆಯಲ್ಲಿರತಕ್ಕ ಒಂದೊಂದು ಅಂಶಗಳನ್ನು ಕೂಡ ಜಾರಿಗೊಳಿಸತಕ್ಕ ಕೆಲಸ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಆಗತಕ್ಕ ಜನರ ಭಾವನೆಯೇನು, ಪ್ರತಿಕ್ರಿಯೆ ಏನು ಎನ್ನುವುದನ್ನು ನೋಡಿ ತೀರ್ಮಾನ ಮಾಡಬೇಕಾಗುತ್ತದೆ. ಅದನ್ನು ನೋಡೋಣ ಎಲ್ಲಿಗೆ ಹೋಗುತ್ತದೆ? ನನ್ನ ಆತಂಕ ಇಷ್ಟು. ನಿಜವಾಗಲೂ ಕೂಡ ಇದರಲ್ಲಿ ವಿಶೇಷವಾಗಿ 50 ವರ್ಷಗಳ ಅವಧಿಯಲ್ಲಿ ಮಾಡಿರತಕ್ಕ ಸಂವಿಧಾನವನ್ನು ಪುನರ್

ವಿಮರ್ಶೆ ಮಾಡುವುದಕ್ಕೆ ಹೋರಟಿರಬೇಕಾದರೆ, ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ, ರಾಷ್ಟ್ರದ ಜನತೆಗೆ ಬಹುಶಃ ಸಂವಿಧಾನದಲ್ಲಿ ಅಡಕವಾಗಿರತಕ್ಕ ಅನೇಕ ಅಂಶಗಳನ್ನು ಸಹಿಸಲಾರದ ರೀತಿಯಲ್ಲಿ ಅಥವಾ ಯಾವುದೋ ಒಂದು ಧರ್ಮದ ಪ್ರತಿಪಾದನೆ ಮಾಡುವುದಕ್ಕೆ ಆ ಭಾವನೆ ಬರುವ ದೃಷ್ಟಿಯಲ್ಲಿ ವಿಷಯಗಳನ್ನು ಪ್ರಸ್ತಾಪ ಮಾಡಿರುವ ಸಂದರ್ಭದಲ್ಲಿ, ಮುಂದೆ ಈ ವಿಷಯದಲ್ಲಿ ಯಾವರೀತಿಯಾದ ಆಡಳಿತವನ್ನು ಕೊಡುತ್ತಾರೆನ್ನುವುದನ್ನು ನೋಡ ಬೇಕಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಮತ್ತೊಂದು ವಿಚಾರ ಬಹಳ ಮುಖ್ಯವಾದುದು. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಸಾಧನೆ ಮತ್ತು ಗುರಿಯನ್ನು ಗುರತಿಟ್ಟುಕೊಂಡು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿಸಿರತಕ್ಕದ್ದು ಇದೆ. ನನಗನಿಸುತ್ತದೆ ಬಹುಶಃ ರಾಜ್ಯಪಾಲರ ಭಾಷಣವನ್ನು ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡಿದಲ್ಲಿ ಹಿಂದಿನ ಮೂರ್ನಾಲ್ಕು ವರ್ಷಗಳ ರಾಜ್ಯಪಾಲರ ಭಾಷಣವನ್ನು ನೋಡಿದ ಸಂದರ್ಭದಲ್ಲಿ, ಅವುಗಳನ್ನು ಹೋಲಿಕೆ ಮಾಡಿ ನೋಡಿದಾಗ, ಇದರಲ್ಲಿ ಹೊಸ ತರಹವಾದ ವಿಚಾರಗಳು ಅಡಕವಾಗಿಲ್ಲ. ವಿಚಾರಗಳೂ ಕೂಡ ಪ್ರಸ್ತಾಪವಾಗಿಲ್ಲ. ಮಾಡಿರತಕ್ಕ ಸಾಧನೆ ಕೂಡ ನಿರೀಕ್ಷೆಯ ಮಟ್ಟಕ್ಕೆ ಹೋಗಿಲ್ಲ. ಇವತ್ತು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಬೇಕಾದರೆ, ಬಹಳ ಪ್ರಮುಖವಾದ ವಿಚಾರವನ್ನು ಅವರು ಒಪ್ಪಿಕೊಂಡಿದ್ದಾರೆ. "ಪ್ರಸಕ್ತ ಚುನಾವಣೆಯಲ್ಲಿ ಹಾಲಿ ಆಡಳಿತದಲ್ಲಿರುವ ಸರ್ಕಾರಗಳ ವಿರುದ್ಧ ಅಭಿಮತ ವ್ಯಕ್ತವಾಗಿರುವುದು ಭಾರತಾದ್ಯಂತ ಕಂಡು ಬಂದಿರುವ ಪ್ರಕ್ರಿಯೆಯಾಗಿದ್ದರೂ, ಜನತೆಯ ಆಶೋತ್ತರ ಮೇಲ್ಮಟ್ಟಕ್ಕೇರುತ್ತಿದ್ದು ಸರ್ಕಾರ ಇನ್ನೂ ಉತ್ತಮವಾಗಿ ಕಾರ್ಯ ನಿರ್ವಹಿಸಬೇಕು ಎಂದು ಜನ ನಿರ್ಣಯದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯವನ್ನು ನನ್ನ ಸರ್ಕಾರ ತುಂಬು ಗೌರವದಿಂದ ಸ್ವೀಕರಿಸಿದೆ" ಮತ್ತು ಅದಕ್ಕೆ ಸ್ಪಂದಿಸುತ್ತದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಕಾಲಾವಕಾಶ ಕಡಿಮೆಯಿರುವುದರಿಂದ ರಾಜ್ಯದ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಬಹಳ ಮುಖ್ಯವಾದುದು ಯಾವುದೇ ಪಕ್ಷ ಆಡಳಿತಕ್ಕೆ ಬಂದ ಸಂದರ್ಭದಲ್ಲಿ ರಾಜ್ಯದ ನೆಲ ಜಲ ರಕ್ಷಣೆ ಮಾಡುತ್ತದೆ ಎನ್ನುವ ಆಶ್ವಾಸನೆಯನ್ನು ಕೊಟ್ಟು ಪ್ರತಿಜ್ಞೆ ಮಾಡಿ ವಿಧಾನ ಸಭೆಯಲ್ಲಿ ಬರುತ್ತದೆ. ಬಂದವರು ಸರ್ಕಾರ ರಚಿಸುತ್ತಾರೆ. ಮಾನ ರಕ್ಷಣೆ ಮಾಡತಕ್ಕದ್ದು ನಮ್ಮ ಕರ್ತವ್ಯವಾಗಿರುತ್ತದೆ. ಅವರು ಹೇಳತಕ್ಕ ಮಾತು ಎಷ್ಟರಮಟ್ಟಿಗೆ ನೆಲ ಜಲ ರಕ್ಷಣೆ ಮಾಡಿದರು ಎನ್ನುವ ಬಗ್ಗೆ ವಿಶ್ಲೇಷಣೆ ಬಹಳ ಪ್ರಾಮುಖ್ಯವಾದುದು. ನನಗೆ ಒಂದು ಸಂತೋಷ ಮಾನ್ಯ ನಾಗೇಗೌಡರು ಈ ಸಭೆಯಲ್ಲಿ ಇಲ್ಲದಿದ್ದರೂ ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ಇದ್ದಾರೆ. ಕೃಷ್ಣಾನದಿ ನೀರಿನ ಹಂಚಿಕೆಯ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ತಾವು ಕೂಡ ಆ ಭಾಗದಿಂದ ಬಂದಿರತಕ್ಕವರು. 2000 ವರ್ಷದ ಕೊನೆಯ ಎರಡು ವರ್ಷಗಳ ಒಳಗೆ ನಮ್ಮ ಪಾಲಿನ ನೀರನ್ನು ಬಳಕೆ ಮಾಡತಕ್ಕ ಜವಾಬ್ದಾರಿ ನಮ್ಮ ಮೇಲಿದೆ. ನಮ್ಮ ನೀರಿನ ಹಕ್ಕು ಎಷ್ಟೆಂದರೆ ಬಚಾವತ್ ತೀರ್ಪಿನ ಪ್ರಕಾರ, ವಾಟರ್ ಟ್ರಿಬ್ಯುನಲ್ ಪ್ರಕಾರ ಕೃಷ್ಣಾ ಸ್ಕೀಮ್ 'ಎ' ನಲ್ಲಿ ಬರತಕ್ಕ 734 ಟಿಎಂಸಿ ನೀರು ನಾವು ಬಳಕೆ ಮಾಡಲೇಬೇಕು. ಅದರ ಜೊತೆಗೆ ಗೋದಾವರಿ ತಿರುವಿನಿಂದ ಬರತಕ್ಕ 23ಟಿಎಂಸಿ ನೀರನ್ನು ಬಳಕೆ ಮಾಡಬೇಕು ಅದನ್ನು ಮಾಡಲಿಕ್ಕೆ ನಮಗೆ ಹಕ್ಕು ಇದೆ. ಸ್ಕೀಮ್ 'ಬಿ' ನಲ್ಲಿರತಕ್ಕ 183 ಟಿಎಂಸಿ ನೀರು ಏನಿದೆ, ಅದನ್ನು ಬಳಕೆ ಮಾಡತಕ್ಕ ಎಲ್ಲಾ ರೀತಿಯ ಹಕ್ಕು ನಮಗೆ ಇದೆ. ಎಲ್ಲರೂ ಮಾತನಾಡತಕ್ಕ ಸಂದರ್ಭದಲ್ಲಿ

ನಮ್ಮ ಗುರಿ 734 ಟಿಎಂಸಿ ಎನ್ನುವ ಮಾತನ್ನು ಹೇಳಿದ್ದಾರೆ. ಅದು ತಪ್ಪಾಗುತ್ತದೆ. ನಮಗೆ ನೀರಿನ ಹಕ್ಕು ಇರತಕ್ಕದ್ದು 734 ಟಿಎಂಸಿ ಸ್ಕೀಮ 'ಎ' ಅಡಿಯಲ್ಲಿ ಬರತಕ್ಕದ್ದು. ಗೋದಾವರಿ ತಿರುವಿನಿಂದ 23ಟಿಎಂಸಿ ಸ್ಕೀಮ್ (ಬಿ) ನಲ್ಲಿ ಬರತಕ್ಕ 183ಟಿಎಂಸಿ ಒಟ್ಟು ಹೆಚ್ಚುಕಡಿಮೆ 956ಟಿಎಂಸಿಯಿಂದ 1000ಟಿಎಂಸಿಯವರೆಗೆ ನೀರಿನ ಬಳಕೆ ಮಾಡತಕ್ಕ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಬೇಕಾಗುತ್ತದೆ. ನಾವು ರಾಜ್ಯಪಾಲರ ಭಾಷಣದಲ್ಲಿ ಬಹಳ ಸೂಕ್ಷ್ಮವಾಗಿ ಹೇಳಿ ಕೈಬಿಡುತ್ತೀರಿ. 2000 ಇಸವಿಯ ಹೊತ್ತಿಗೆ ಕೃಷ್ಣಾ ನದಿಯ ನೀರಿನ ಪಾಲನ್ನು ಬಳಸಿಕೊಳ್ಳುವುದಕ್ಕೆ ಸರ್ಕಾರವೂ ಪೂರ್ಣ ಬದ್ಧವಾಗಿದ್ದು ಈ ದಿಶೆಯಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ಮೂಲಕ ಈವರೆಗೆ 1093.45 ಕೋಟಿ ರೂಪಾಯಿಗಳನ್ನು ನನ್ನ ಸರ್ಕಾರ ಸಂಗ್ರಹಣೆ ಮಾಡಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ 1,692.80 ಕೋಟಿ ರೂಪಾಯಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದೆ ಎಂದು ಬಹಳ ಹೆಮ್ಮೆಯಿಂದ ಈ ಮಾತನ್ನು ಹೇಳುತ್ತಿದ್ದಾರೆ. ಇದು ತಮಗೆ ಗೊತ್ತಿದೆ 2000ದ ಇಸವಿಯೊಳಗೆ ಸಂಪೂರ್ಣ ನೀರಿನ ಬಳಕೆ ಮಾಡಬೇಕಾದರೆ ನಮಗೆ ಬೇಕಾಗಿರತಕ್ಕ ಹಣಕಾಸು ಎಷ್ಟೆಂದರೆ, ಇವತ್ತು ಪ್ಲಾನಿಂಗ್ ಕಮಿಷನ್‌ವರು ಕೊಟ್ಟಿರುವ ವರದಿ ಪ್ರಕಾರ ನಮ್ಮ ಅಧಿಕಾರಿಗಳು ಕೊಟ್ಟಿರತಕ್ಕ ವರ್ತಮಾನದ ಪ್ರಕಾರ, ನಮ್ಮ ಯೋಜನೆಯ ಅಡಿಯಲ್ಲಿ ನಾವು ಕೈಗೊಂಡಿರತಕ್ಕ ಎಲ್ಲಾ ಕಾರ್ಯಕ್ರಮಗಳನ್ನು ಮುಗಿಸಬೇಕಾದರೆ 8 ರಿಂದ 10 ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆನ್ನುವ ಮಾತನ್ನು ಹೇಳಿದ್ದಾರೆ. ಆ ರೀತಿ ಈ ತೀರ್ಪು 1976ರಲ್ಲಿ ಬಂತು. ಈಗಾಗಲೇ 22 ವರ್ಷಗಳು ಕಳೆದ್ದೇವೆ. ತಾವು ಕೂಡ ರಾಜ್ಯದಲ್ಲಿ 10 ವರ್ಷಗಳಿಗಿಂತ ಹೆಚ್ಚಿನ ಕಾಲ ರಾಜ್ಯದ ಆಡಳಿತ ನಡೆಸಿದ್ದೀರಿ. ಇದರಿಂದ ನಾವು ಕೂಡ ಇದಕ್ಕೆ ಜವಾಬ್ದಾರಿಯಾಗುತ್ತೀರಿ. ನೀವು ಅಧಿಕಾರದಲ್ಲಿದ್ದೀರಿ. ಏನು ಮಾಡುತ್ತಿದ್ದೀರಿ ಎನ್ನುವುದಕ್ಕಿಂತ ಹೆಚ್ಚಾಗಿ ಆಡಳಿತವನ್ನು ಪ್ರಾಮಾಣಿಕವಾಗಿ ನಡೆಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ. ಇದಕ್ಕಿಂತ ಹೆಚ್ಚಾಗಿ ನಾವು ನಮ್ಮ ನೀರನ್ನು ಬಳಸಬೇಕಾಗುತ್ತದೆ. ಯಾವ ರೀತಿ ನೀರನ್ನು ಬಳಸುವುದಕ್ಕೆ ಸಾಧ್ಯ ಎನ್ನುವ ಮಾತನ್ನು ನಾನು ಇಲ್ಲಿ ಕೇಳಬಯಸುತ್ತೇನೆ. ಇವತ್ತು ಇದೇ ವೇಗದಲ್ಲಿ ಯೋಜನೆಗಳಿಗೆ ನೀವು ಹಣವನ್ನು ಒದಗಿಸುವುದಾದರೆ ಇನ್ನೂ 20 ವರ್ಷವಾದರೂ ಯಾವ ಯೋಜನೆಗಳು ಕೈಗೂಡುವುದಿಲ್ಲ. ತಾವು ಈ ಮಾತನ್ನು ಒಪ್ಪಲೇಬಾಕಾಗುತ್ತದೆ. ನನ್ನ ಪ್ರಶ್ನೆ ಏನೆಂದರೆ, ನಮಗೆ ಈಗ ಬಳಕೆಯಲ್ಲಿರುವ ನೀರಿನ ಪ್ರಮಾಣ ಸ್ಕೀಮ್ 'ಎ' ನಲ್ಲಿ ಬರುವ 734 ಟಿಎಂಸಿ ನೀರಿನಲ್ಲಿ 5 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಟ್ಟರೆ, ಉಳಿದಿರುವ ನೀರನ್ನು ನಾವು ಬಳಕೆ ಮಾಡುವ ಮಟ್ಟಕ್ಕೆ ಇಂದು ತಲುಪಿದ್ದರೆ. ಇನ್ನೂ 230 ಟಿಎಂಸಿ ನೀರನ್ನು ನಾವು ಬಳಕೆ ಮಾಡಬೇಕಾದರೆ ಹತ್ತು ಸಾವಿರ ಕೋಟಿ ರೂ.ಗಳನ್ನು ತರಬೇಕಾಗಿದೆ. ಸರ್ಕಾರಕ್ಕೆ ನನ್ನ ಮುಖ್ಯವಾದ ಪ್ರಶ್ನೆ ಏನೆಂದರೆ, ಯೋಜನೆಗಳಿಗೆ ಪ್ರಾಮಾಣಿಕವಾಗಿ ಹಣವನ್ನು ಬಳಸುವಲ್ಲಿ ಕಳಕಳಿಯನ್ನು ತಾವು ತೋರಿಸಬೇಕಾಗುತ್ತದೆ. ಈಗ ನೀವು ಬಳಸುವ ಪ್ರಮಾಣ 734 ಟಿಎಂಸಿ ಎಂದು ಮಾಡಿದ್ದೀರಿ. ಇದರ ಜೊತೆಗೆ ಬೇರೆ ಬೇರೆ ಯೋಜನೆಗಳಿಂದ ಹಾಗೂ ಕೇಂದ್ರ ಸರ್ಕಾರದಿಂದ ಮತ್ತು ಸೆಂಟ್ರಲ್ ವಾಟರ್ ಕಮಿಷನ್‌ನಿಂದ ನೀರನ್ನು ಉಳಿಸುವುದಕ್ಕೆ ಯೋಜನೆಗಳಿಗೆ ಕ್ಲಿಯರೆನ್ಸ್ ಪಡೆದುಕೊಳ್ಳಲು ತಾವು ಏನು ಪ್ರಯತ್ನ ಮಾಡಿದ್ದೀರಿ ಎನ್ನುವ ಮಾತನ್ನು ನಾನು ಇಲ್ಲಿ ಕೇಳಬೇಕಾಗುತ್ತದೆ. ಬಹಳ ವರ್ಷಗಳಿಂದ ನೆನಗುದಿಗೆ ಬಿದ್ದಿರುವ ಯೋಜನೆಗಳು ಇಂದು ಕೇಂದ್ರ ಸರ್ಕಾರದ ಮುಂದೆ ಇವೆ.

ಈ ರಾಜ್ಯದ ಒಬ್ಬರು ಪ್ರಧಾನ ಮಂತ್ರಿಯಾಗಿದ್ದಾಗಲೂ, ನಿಮ್ಮ ಪಕ್ಷದವರು ಅಲ್ಲಿ ಆಡಳಿತ ನಡೆಸುತ್ತಿದ್ದ ಕಾಲದಲ್ಲಿಯೂ ಕೂಡ ಕೇಂದ್ರ ಸರ್ಕಾರದಿಂದ ಮತ್ತು ಸೆಂಟ್ರಲ್ ವಾಟರ್ ಕಮೀಷನ್ ಮುಂದೆ ಇರತಕ್ಕಂಥ ಯಾವ ಯೋಜನೆಯೂ ಕ್ಲಿಯರ್ ಆಗಲಿಲ್ಲ ಎನ್ನುವುದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಒಂದು ಪಕ್ಷ ಅವರು ಈ ಯೋಜನೆಗಳನ್ನು ಕ್ಲಿಯರ್ ಮಾಡುವ ದಿಕ್ಕಿನಲ್ಲಿ ಪ್ರಯತ್ನ ಮಾಡಿದ್ದರೆ, ತಾವು ನಿಮ್ಮನ್ನು ಮೆಚ್ಚುತ್ತಿದ್ದೆವು. ರಾಜ್ಯ ಸರ್ಕಾರದವರು ಯಾವುದಾದರೂ ಒಂದು ಯೋಜನೆಯನ್ನು ಮಾಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದ್ದೀರಾ? ಇದೂ ಯಾವುದೂ ಮಾಡಿಲ್ಲ. ನಿಮ್ಮ ದೃಷ್ಠಿ ಕೇವಲ 729 ಟಿಎಂಸಿ. ಇದಕ್ಕಿಂತ ಮುಂದೆ ಹೋಗುತ್ತಿಲ್ಲ. ಗೋದಾವರಿ ತಿರುವಿನಲ್ಲಿ ರಾಜ್ಯಕ್ಕೆ ಬರುವ ನೀರಿನ ಹಕ್ಕನ್ನು ರಾಜ್ಯಕ್ಕೆ ಬಚಾವತ್ ತೀರ್ಪಿನಲ್ಲಿ ಈಗಾಗಲೇ ಕೊಟ್ಟಿದೆ.

ಶ್ರೀ ಜಿ..ವಿ. ಶ್ರೀರಾಮರೆಡ್ಡಿ:- ದೊಡ್ಡ ನೀರಾವರಿ ಬಗ್ಗೆ ತಾವು ಹೇಳುತ್ತಿದ್ದೀರಿ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳೇ ಇಲ್ಲಿ ಕುಳಿತಿಲ್ಲವಲ್ಲಾ ಏಕೆ.

ಶ್ರೀ ವಾಟಾಳ್ ನಾಗರಾಜ್:- ಅವರು ಸಣ್ಣ ನೀರಾವರಿ ಮಂತ್ರಿಗಳು, ಒಂದು ಸಣ್ಣ ಕೆರೆಗೆ ಆಗುವ ಹಣವನ್ನು ಅವರ ಕೈಯಲ್ಲಿ ಒದಗಿಸುವುದಕ್ಕೆ ಆಗಿಲ್ಲ. ನಮ್ಮ ಹಣೆಬರಹ ಹೀಗಾಗಿದೆ. ಅವರನ್ನು ಇನ್ನೇನು ಕೇಳುವುದು?

(ಗೊಂದಲ)

ಶ್ರೀ ತಿಪ್ಪೇಸ್ವಾಮಿ:- ಮಾನ್ಯ ಉಪನಾಯಕರು ಹೇಳಿರುವ ವಿಷಯವನ್ನು ಮಾನ್ಯ ನಾಗೇಗೌಡರ ಗಮನಕ್ಕೆ ತರುತ್ತೇವೆ.

(ಗೊಂದಲ)

ಶ್ರೀ ಜಿ . ವಿ. ಶ್ರೀರಾಮರೆಡ್ಡಿ:- ಬಹಳ ಗಂಭೀರವಾದ ವಿಷಯ ಅವರ ಗಮನಕ್ಕೆ ಏಕೆ ತರಬೇಕು, ಇಲ್ಲಿ ವರದಿಗಾರರು ಇದ್ದಾರಲ್ಲಾ. ಅವರು ಬರೆದಿರುವುದನ್ನು ನೋಡಿ ಬಿಟ್ಟರೆ ಸಾಕು.

ಉಪಾಧ್ಯಕ್ಷರು:- ಸಮಯ ಇಲ್ಲ, ಬಹಳ ಜನ ಮಾತನಾಡುವವರು ಇದ್ದಾರೆ. ಆದ್ದರಿಂದ ದಯಮಾಡಿ ಸಹಕರಿಸಿ, ತಾವು ಕುಳಿತುಕೊಳ್ಳಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:- ಹೊಸ ನೀರಾವರಿ ಯೋಜನೆಯ ಬಗ್ಗೆ ಮಾತನಾಡುವಾಗಲೂ ಮಂತ್ರಿಗಳು ಇಲ್ಲ ಎಂದರೆ ಹೇಗೆ?

ಉಪಾಧ್ಯಕ್ಷರು:- ಸಚೇತಕರು ಮಂತ್ರಿಗಳನ್ನು ಕರೆಯುವುದಕ್ಕೆ ಹೋಗಿದ್ದಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:- ಎಲ್ಲಾ ಮಂತ್ರಿಗಳು ಇರುವುದು ಬೇಡ, ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇಲ್ಲ ಎಂದರೆ ಹೇಗೆ? ಕೆಲವರಿಗೆ ಇಲ್ಲಿ ಎ.ಸಿ.ಯಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಲಿಲ್ಲವೆಂದು ಕಾಣುತ್ತದೆ. ಖಾಯಿಲೆ ಇದ್ದರೆ ಇರಬಹುದು. ನೋಡಿ ಅಲ್ಲಿ ಯಾರಾದರೂ ಇದ್ದಾರೆಯೇ?

ವಾಟಾಳ್ ನಾಗರಾಜ್:- ನೀವು ಮಂತ್ರಿಗಳನ್ನು ಕರೆಯುವುದಕ್ಕೆ ಯಾರನ್ನು ಕಳುಹಿಸಿದ್ದೀರಿ?

ಉಪಾಧ್ಯಕ್ಷರು:- ಸಚೇತಕರಿಗೆ ಹೇಳಿ ಕಳುಹಿಸಿದ್ದೇನೆ.

ವಾಟಾಳ್ ನಾಗರಾಜ್:- ಹಾಗಾದರೆ ಒಂದು ಹತ್ತು ಸಚೇತಕರನ್ನು ನೇಮಿಸಿ. ಏಕೆಂದರೆ 45 ಜನ ಸಚಿವರಲ್ಲಿ 35 ಜನ ಮೇಲೆ ಕುಳಿತಿರುತ್ತಾರೆ, ಇನ್ನುಳಿದವರು ಎಲ್ಲಿಯಾದರೂ ಹೋಗಿರುತ್ತಾರೆ. ಏನಿದು ನಮ್ಮ ಹಣೆಬರಹ? ಈ ಸಭೆಗೆ ಏನಾದರೂ ಗೌರವ ಕೊಡುತ್ತಾರೆಯೇ? 45 ಜನ ಸಚಿವರು ಇರುವುದರಿಂದ ಒಬ್ಬ ಸಚೇತಕರ ಕೈಯಲ್ಲಿ ಆಗುವುದಿಲ್ಲ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ:- ನಿಮ್ಮ ಮಾತಿಗೆ ಕೂಡ ಬೆಲೆ ಇಲ್ಲ. ಏಕೆಂದರೆ ನೀವು ಸಚೇತಕರನ್ನು ಕಳುಹಿಸಿ ಒಬ್ಬ ಮಂತ್ರಿಯವರನ್ನು ಕರೆದು ಇಲ್ಲಿ ಕೂಡಿಸಿದಿರಿ. ಅವರು ಎರಡು ನಿಮಿಷ ಇದ್ದು ನಂತರ ಎದ್ದು ಹೊರಗಡೆ ಹೋದರು. ಈ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರೂ ಕೂಡ ತಾವು ಗಮನಹರಿಸಿಲ್ಲ ಎಂದರೆ ಈ ಸಭೆಯನ್ನು ಏಕೆ ನಡೆಸುತ್ತೀರಿ? ಇದರಲ್ಲಿ ಏನಾದರೂ ಅರ್ಥ ಇದೆಯೇ?

ವಾಟಾಳ್ ನಾಗರಾಜ್:- ಸಾರ್, ಈ ಸಭೆಗೆ ಬಹಳ ಪ್ರಾಮುಖ್ಯತೆ ಇದೆ. ಘನತೆ, ಗಂಭೀರ ಇದೆ. ಅವರು ಈ ಗಾಂಭೀರ್ಯವನ್ನು ಹಾಳು ಮಾಡುತ್ತಿದ್ದಾರಲ್ಲಾ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ:- ಹೀಗಿದ್ದಾಗ ನಾವು ಏಕೆ ಮಾತನಾಡಬೇಕು? ಮಾತನಾಡುವುದನ್ನು ನಿಲ್ಲಿಸಿಬಿಡಿ, ಎಲ್ಲರೂ ಹೋಗೋಣ.

ಉಪಾಧ್ಯಕ್ಷರು:- ಸಣ್ಣ ನೀರಾವರಿ ಸಚಿವರು ಸದನದಲ್ಲಿ ಇದ್ದಾರಲ್ಲಾ.

ವಾಟಾಳ್ ನಾಗರಾಜ್:- ಅವರು ಇರುವುದಕ್ಕೆ ನನ್ನದೇನೂ ತಕರಾರು ಇಲ್ಲ. ಅವರು ಇಲ್ಲಿದ್ದರೆ, ಏನು ಪ್ರಯೋಜನ? ಅವರಿಗೆ ಒಂದು ಸಣ್ಣ ಕೆರೆಗೆ ಕೊಡುವಷ್ಟು ದುಡ್ಡು ಇಲ್ಲ ಅಂದರೆ, ಕೃಷ್ಣಾ ಬಗ್ಗೆ ಅವರೇನು ಮಾಡುತ್ತಾರೆ. ಕೃಷ್ಣ ಎಲ್ಲಿ? ಒಂದು ಕೆರೆ ಎಲ್ಲಿ? ಎಲ್ಲಿಂದ ಎಲ್ಲಿಗೆ ಸಂಬಂಧ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ:- ಸಣ್ಣ ಕೆರೆಗೆ ಆಗುವ ಹಣವನ್ನು ನಾವು ಅವರಿಗೆ ಗಲಾಟೆ ಮಾಡಿಸಿ ಇಲ್ಲಿ ಕೂಡಿಸಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಇದು ಅವರಿಗೆ ಗೊತ್ತಿದೆ. ಅವರ ಹಣೆಬರಹ ಆ ರೀತಿ ಇದೆ

ಶ್ರೀ ತಿಪ್ಪೇಸ್ವಾಮಿ:-ಮಾನ್ಯ ವಾಟಾಳ್ ನಾಗರಾಜ್‌ರವರೇ, ನಾನು ಸರ್ಕಾರದ ಪ್ರತಿನಿಧಿಯಾಗಿ ಭಾಗವಹಿಸುತ್ತೇನೆಯೇ ಹೊರತು ಇದರಲ್ಲಿ ಸಣ್ಣದು, ದೊಡ್ಡದು, ಬರುವುದಿಲ್ಲ. ಇಲ್ಲಿ ದುಡ್ಡಿನ ಪ್ರಮಾಣವನ್ನು ಅಳೆಯಬಾರದು.

ಉಪಾಧ್ಯಕ್ಷರು:- ಅವರೂ ಕೂಡ ಕ್ಯಾಬಿನೆಟ್ ಸಚಿವರು.

ಶ್ರೀ ವಾಟಾಳ್ ನಾಗರಾಜ್:- ಅವರು ಮಂತ್ರಿಯಾಗಿರುವುದರಿಂದ ನಾನು ಅವರಿಗೆ ಗೌರವ ಕೊಡುತ್ತಿದ್ದೇನೆ. ಆದರೆ ಅವರಿಗೆ ಒಂದು ಚಿಕ್ಕ ಕೆರೆಗೆ ದುಡ್ಡು ಕೊಡುವುದಕ್ಕೆ ಆಗುವುದಿಲ್ಲವಲ್ಲಾ. ನಾನು ಸುಮಾರು ಒಂದುವರೆ ವರ್ಷದಿಂದ ಕೇಳುತ್ತಿದ್ದರೂ ಅವರಿಗೆ ದುಡ್ಡು ಕೊಡುವುದಕ್ಕಾಗುತ್ತಿಲ್ಲ. ಅವರ ಬಗ್ಗೆ ನನಗೆ ಗೌರವ ಇದೆ. ಸುಮ್ಮನೆ ನೀವು ರಾಜೀನಾಮೆ ಕೊಟ್ಟು ಬಿಡಿ. ಏಕೆ ಬೇಕು ಈ ಸಣ್ಣ ನೀರಾವರಿ?

ಶ್ರೀ ತಿಪ್ಪೇಸ್ವಾಮಿ:- ಈ ಸಾರಿ ತಮಗೆ ಹಣವನ್ನು ಕೊಡಿಸುತ್ತೇವೆ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಜಯಚಂದ್ರರವರೇ, ತಾವು ಮುಂದುವರಿಸಿ. ಎಲ್ಲರೂ ಕೂಳಿತುಕೊಳ್ಳಿ, ಸಹಕರಿಸಿ. ನೀರಾವರಿ ಮಂತ್ರಿಗಳು ಕೌನಸಿಲ್ ನಲ್ಲಿ ಇದ್ದಾರಂತೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:- ಇದು ಬಹಳ ಮುಖ್ಯವಾದ ವಿಚಾರ. ಸಂಬಂಧಪಟ್ಟ ಮಂತ್ರಿಗಳು ಇರಬೇಕು, ಇಲ್ಲವೇ ಮುಖ್ಯಮಂತ್ರಿಗಳು ಇರಬೇಕು.

ಶ್ರೀ ವಾಟಾಳ್ ನಾಗರಾಜ್:- ಕೃಷ್ಣಾ, ಕಾವೇರಿ ಬಗ್ಗೆ ಅವರು ಗಮನಹರಿಸಿಲ್ಲ. ಈ ಸರ್ಕಾರದವರು ಕೃಷ್ಣಾ, ಕಾವೇರಿಯನ್ನು ತರ್ಪಣ ಎಂದು ಬಿಟ್ಟು ಬಿಟ್ಟಿದ್ದಾರೆ.

ಉಪಾಧ್ಯಕ್ಷರು:- ಮಂತ್ರಿಗಳು ಬರುತ್ತಾರೆ ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ಸಚೇತಕರು ಯಾವ ಕಷ್ಟದ ಸಂದರ್ಭದಲ್ಲಿ ಇದ್ದಾರೆಂದು ಹೇಳಿದರೆ ನನಗೆ ಬಹಳ ನೋವಾಗುತ್ತದೆ.

ಶ್ರೀ ವಸಂತ್ ಬಂಗೇರ್:- ನಾಗರಾಜ್‌ರವರೇ, ನಾವು ಅಲಾಟ್‌ಮೆಂಟ್ ಎಂದು ಮಾಡುತ್ತೇವೆ. ನಾಗೇಗೌಡರು ಕೌನ್ಸಿಲ್‌ನಲ್ಲಿ ಇದ್ದಾರೆ. ಇಲ್ಲಿ ನಿಂಗಯ್ಯನವರು ಬರಬೇಕು.

ಶ್ರೀ ವಾಟಾಳ್ ನಾಗರಾಜ್:- ಕೌನ್ಸಿಲ್‌ನಲ್ಲಿ ಇಲ್ಲ ಎಂದು ನಾನು ತೀರ್ಮಾನ ಮಾಡಿದ್ದೇನೆ.

ಶ್ರೀ ವಸಂತ್ ಬಂಗೇರ್:- ನನ್ನ ಜೊತೆಯಲ್ಲಿ ಬನ್ನಿ ನಾನು ತೋರಿಸುತ್ತೇನೆ ಕೌನ್ಸಿಲ್ ನಲ್ಲಿ ಇದ್ದಾರೆ ನಾನು ತೋರಿಸುತ್ತೇನೆ ನನ್ನ ಜೊತೆ ಬನ್ನಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಿಮ್ಮ ಎದುರಿಗೆ ಹೇಳಿದ್ದೇವೆ. ಈ ಮಂತ್ರಿಗಳು ಸಭೆಯಲ್ಲಿ ಕುಳಿತುಕೊಳ್ಳುವುದಿಲ್ಲ, ಅವರಿಗೆ ಬೇರೆ ವ್ಯವಹಾರ, ಬೇರೆ ಕೆಲಸಗಳು, ಬೇರೆ ರಾಜಕಾರಣ. ತಮಗೆ ಒಂದು ಸಲಹೆ ಮಾಡುತ್ತೇನೆ. ಇವರಿಗೆ ಬುದ್ಧಿ ಇರಬೇಕಾದರೆ ಸಭೆಯನ್ನು ಸ್ವಲ್ಪ ಹೊತ್ತು ಮುಂದಕ್ಕೆ ಹಾಕಿ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಇವರಿಗೆ ಜವಾಬ್ದಾರಿ ಇರುವುದಿಲ್ಲ. ತಾವು ಜಯಚಂದ್ರರವರ ಪರವಾಗಿ ವಕೀಲಿ ನಡೆಸುತ್ತಿಲ್ಲ. ಯಾರೇ ಸದಸ್ಯರು ಮಾತನಾಡುವಾಗ ಅದರಲ್ಲಿಯೂ ಕೃಷ್ಣಾ, ಕಾವೇರಿಯ ಬಗ್ಗೆ ಮಾತನಾಡುವಾಗ ಯಾರು ಇರಬೇಕು ಇಲ್ಲಿ ನೀವೇಹೇಳಿ? ಮುಂದೆ ಇರುವ ಸಂಪೂರ್ಣ ಕುರ್ಚಿಗಳು ಖಾಲಿ ಇವೆ. ಒಬ್ಬರಾದರೂ ಇದ್ದಾರೆಯೇ? ಹೋಗಲಿ ಸಂಬಂಧಪಟ್ಟ ಮಂತ್ರಿಗಳು ಇದ್ದಾರೆಯೇ?

ಉಪಾಧ್ಯಕ್ಷರು:- ಅವರು ಕೌನ್ಸಿಲ್ ನಲ್ಲಿ ಇದ್ದಾರಂತೆ.

ಶ್ರೀ ವಾಟಾಳ್ ನಾಗರಾಜ್:- ಹೋಗಲಿ ಮುಖ್ಯಮಂತ್ರಿ ಅವರನ್ನಾದರೂ ಕರೆಯಿಸಿ ಪ್ರತಿದಿನ ಈ ಪರಿಸ್ಥಿತಿ ತಾವು ಸದನವನ್ನು ನಡೆಸತಕ್ಕಂಥವರು ಈ ಸದನದ ಗೌರವವನ್ನು ಕಾಪಾಡುವ ಕಾಳಜಿ ಅವರಿಗೆ ಇರುವುದು ಬೇಡವೇ?

ಉಪಾಧ್ಯಕ್ಷರು:- ಎಲ್ಲರೂ ಸೇರಿ ಸಭೆಯ ಗೌರವವನ್ನು ಕಾಪಾಡಬೇಕು.

ಶ್ರೀ ಜಿ. ವಿ. ಶ್ರೀರಾಮ ರೆಡ್ಡಿಯವರು:- ನಮ್ಮನ್ನು ಮಾತ್ರ ಕುಳಿತುಕೊಳ್ಳಿ ಎಂದು ಹೇಳುತ್ತೀರಿ, ಮಂತ್ರಿಗಳನ್ನು ಕರೆಸುವ ಕೆಲಸ ಮಾಡಿಸಿ.

ಉಪಾಧ್ಯಕ್ಷರು:- ಸಣ್ಣ ನೀರಾವರಿ ಮಂತ್ರಿಗಳು ಇದ್ದಾರೆ. ಅವರು ನೀವು ಹೇಳುವುದನ್ನು ನೋಟ್ ಮಾಡಿಕೊಂಡು ಮಾನ್ಯ ನಾಗೇಗೌಡರವರಿಗೆ ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಬರೆದುಕೊಳ್ಳುವುದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ. ಬೇಕಾದರೆ ಸತ್ಯನಾರಾಯಣ್ ರವರಾಗಲಿ ಬರೆದುಕೊಳ್ಳುತ್ತಾರೆ. ಇವತ್ತು ಕಾಂಗ್ರೆಸ್ ಪಕ್ಷದ ಉಪನಾಯಕರು, ಕೃಷ್ಣಾ, ಕಾವೇರಿ ಬಗ್ಗೆ ಮಾತನಾಡುವಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲ ಎಂದರೆ ಹೇಗೆ? ಇದು ಒಳ್ಳೆಯ ಸಂಪ್ರದಾಯ ಅಲ್ಲ.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಮಂತ್ರಿ):- ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ನಾಗರಾಜ್ ಅವರು ಹೇಳುವ ಮಾತಿನಲ್ಲಿ ಸತ್ಯಾಂಶ ಇದೆ. ಅವರು ನಮ್ಮ ಒಳ್ಳೆಯದಕ್ಕೆ ಹೇಳುತ್ತಾರೆ. ಅವರ ಮಾತನ್ನು ಸ್ವಾಗತಿಸಿ ನಮ್ಮ ಮಂತ್ರಿಗಳನ್ನು ಆದಷ್ಟು ಜಾಗ್ರತೆ ಕರೆಸುತ್ತೇವೆ. ಸನ್ಮಾನ್ಯ ಉಪನಾಯಕರಲ್ಲಿ ನಮ್ಮ ಕಳಕಳಿಯ ಮನವಿ ಇಷ್ಟೇ. ತಾವು ದಯವಿಟ್ಟು ಮಾತನಾಡಿ. ತಾವು ಹೊಸ ಹೊಸ ವಿಚಾರಗಳನ್ನು ನಮ್ಮ ಗಮನಕ್ಕೆ ಸದನದ ಗಮನಕ್ಕೆ ತರುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಜಯಚಂದ್ರರವರೇ, ನಿಮ್ಮ ಹಣೆಬರಹ. ನಾವೇನೂ ಮಾಡುವುದಿಲ್ಲ.

ಉಪಾಧ್ಯಕ್ಷರು:- ತಾವು ಮುಂದುವರಿಸಿ.

ಶ್ರೀ ಟಿ.ಬಿ. ಜಯಚಂದ್ರ:- ಬಹಳ ಪ್ರಾಮುಖ್ಯವಾದಂಥ ವಿಷಯವನ್ನು ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ, ಹೊಸ ವಿಷಯಗಳನ್ನು ಅಳವಡಿಸಿ ಹೇಳುವಂಥ ಸಂದರ್ಭದಲ್ಲೂ ಕೂಡ ಮುಂದಿನ ಬೆಂಚ್‌ನಲ್ಲಿ ಯಾರೂ ಕೂಡ ಇಲ್ಲದೇ ಇರತಕ್ಕಂಥಾದ್ದು ನನ್ನ ಮನಸ್ಸಿಗೆ ನೋವನ್ನು ಉಂಟುಮಾಡಿದೆ. ಆದರೆ ಚರ್ಚೆಗೆ ನಾಳೆಯೇ ಉತ್ತರ ಕೊಡಬೇಕಾಗಿರುವುದರಿಂದ, ಕಾಲವನ್ನು ಗಮನದಲ್ಲಿಟ್ಟುಕೊಂಡು ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತೇನೆ. ನೀವು ಒಂದು ಮಾತನ್ನು ಹೇಳಿದಿರಿ. ಎರಡು ಸಾವಿರ ಇಸವಿಯೊಳಗೆ ಎಲ್ಲಾ ನೀರನ್ನೂ ಸಂಪೂರ್ಣವಾಗಿ ಬಳಸಿಕೊಳ್ಳುತ್ತೇವೆ ಎನ್ನತಕ್ಕಂಥ ಒಂದೇ ಒಂದು ಮಾತನ್ನು ಹೇಳಬೇಕಾದರೆ, ಆ ದಿಟ್ಟತನವನ್ನು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಆ ಮಾತಿನಲ್ಲಿ ಏನಾದರೂ ಅರ್ಥ ಇದೆಯೇ ಎನ್ನುವುದನ್ನು ಇವತ್ತು ನಾನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಅಧ್ಯಕ್ಷರೇ, ಇವತ್ತು ಗೋದಾವರಿ ನೀರು ಏನು

ಇದೆ, ಡೈವರ್ಷನ್‌ನಿಂದ ಬರತಕ್ಕಂಥ 23 ಟಿ.ಎಂ.ಸಿ. ನೀರು ಏನಿದೆ, ಬಚಾವತ್ ತೀರ್ಪು ಕೊಡಬೇಕಾದರೆ 23 ಟಿಎಂಸಿ ನೀರಿನ ಹಕ್ಕನ್ನು ಕೊಟ್ಟರು. ಹೀಗೆ ಕೊಟ್ಟಾಗ ಅದನ್ನು ಜಾರಿಗೊಳಿಸಬೇಕಾದರೆ, ಅದನ್ನು ಪಡೆಯಬೇಕಾದರೆ ಒಂದು ಸಭೆ ಆಗುತ್ತದೆ. ನಾನು ಅದರ ಬಗ್ಗೆ ಹೇಳುವುದಕ್ಕೆ ಇಚ್ಚಪಡುತ್ತೇನೆ. ಆವತ್ತು 4 ನೇ ಆಗಸ್ಟ್ 1978ನೇ ಇಸವಿಯಲ್ಲಿ ಕರ್ನಾಟಕದ ಪರವಾಗಿ ಮಾನ್ಯ ದೇವರಾಜ ಅರಸು ಅವರು ಮುಖ್ಯಮಂತ್ರಿಗಳು, ಮಾನ್ಯ ಚೆನ್ನಾರೆಡ್ಡಿಯವರು ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಒಂದು ಮೀಟಿಂಗ್ ಆಗುತ್ತದೆ. ಆ ಮೀಟಿಂಗ್ ಪ್ರೊಸಿಡಿಂಗ್ಸ್‌ನ್ನು, ನಾನು ಓದುವುದಕ್ಕೆ ಇಚ್ಛಿಪಡುತ್ತೇನೆ ಅದು ಸರ್ಕಾರಿ ದಾಖಲೆಯಾಗಿರುವಂಥಾದ್ದು, ಇವತ್ತು ಅದನ್ನು ನಾನು ಹೆಚ್ಚು ಪ್ರಸ್ತಾಪ ಮಾಡದೇ ಇದ್ದರೂ ಕೂಡ ಬೇಕಾಗಿರತಕ್ಕಂಥ ಒಂದೇ ವಿಷಯವನ್ನು ಅಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

"The State of Andhra Pradesh and Karnataka agree that the quantity of 80 TMC shall be shared in proportion of Andhra Pradesh- 45 TMC and Karnataka and Maharashtra together 35 TMC. Andhra Pradesh agrees to submit polavaram project report to the Central water Commission within three months of reaching an overall agreement on Godavari water, among the five-party States. The State of Andhra Pradesh arees to bear the cost of diverison fully. The Maharashtra and Karnataka are at liberty to utilise their share of 35 TMC mentioned in sub-para 7 (b) above from the date of its clearance of the polavaram project by Central water Commission with FRL/MWL of plus 150 ft., irrespective of actual diversion taking place."

ಇಬ್ಬರು ಮುಖ್ಯಮಂತ್ರಿಗಳು ಮತ್ತು ಸರ್ಕಾರದ ಮಟ್ಟದಲ್ಲಿ ಇರತಕ್ಕಂಥ ಎಲ್ಲಾ ಅಧಿಕಾರಿಗಳು ಇರುವಂಥ ಸಂದರ್ಭದಲ್ಲಿ ಈ ಒಂದು ಅಗ್ರಿಮೆಂಟ್ ಆಗುತ್ತದೆ. ಆ ಸಂದರ್ಭದಲ್ಲಿ ರಾಜ್ಯದ ಮುಖ್ಯಕಾರ್ಯದರ್ಶಿಗಳಾಗಿದ್ದಂಥ ನರಸಿಂಹರಾಯರು ಇದ್ದರು. ಲಿನ್ ಅವರು ಇದ್ದರು. ಲೋಕೋಪಯೋಗಿ ಇಲಾಖೆಯ ವಿಶೇಷ ಕಾರ್ಯದರ್ಶಿ ಅಗಡಿಯವರು ಇದ್ದರು. ಚೀಫ್‌ಇಂಜಿನಿಯರ್ ಶಾಸ್ತ್ರಿಯವರು ಇದ್ದರು. ಇದೇ ರೀತಿ ಇನ್ನೂ ಅನೇಕ ಮಂದಿ ಅಧಿಕಾರಿಗಳು ಇದ್ದಂಥ ಸಂದರ್ಭದಲ್ಲಿ ಈ ಅಗ್ರಿಮೆಂಟ್ ಉಗತ್ತದೆ. ನಾನು ನಿಮಗೆ ಕೇಳುತ್ತೇನೆ, ಒಂದು ಸೆಂಟ್ರಲ್ ವಾಟರ್ ಇಲ್ಲಿಯವರೆಗೂ ನಿಮ್ಮ ಪ್ರಾಜೆಕ್ಟ್‌ನ್ನು ಅಗ್ರಿಮೆಂಟ್ ಪ್ರಕಾರ ಕೇಂದ್ರಸರ್ಕಾರದ ಮುಂದೆ ಹಾಕಿದ್ದೀರಾ ಎನ್ನುವಂಥಾ ಮಾತನ್ನು ಇವತ್ತು ನಾನು ಖಾಸಗಿಯಾಗಿಯೂ ಕೂಡ ತಿಳಿದುಕೊಳ್ಳುವಂಥ ಪ್ರಯತ್ನವನ್ನು ಮಾಡಿದ್ದೇನೆ ಇವತ್ತಿನವರೆಗೂ ಆಂಧ್ರಪ್ರದೇಶದವರು ಸೆಂಟ್ರಲ್ ವಾಟರ್ ಕಮಿಷನ್ ಮುಂದೆ ಹೋದರು ಎನ್ನತಕ್ಕಂಥದ್ದರ ಬಗ್ಗೆ ನಮಗೆ ಯಾವುದೇ ರೀತಿಯಾದಂಥ ಮಾಹಿತಿ ಇಲ್ಲ. ಅಂದಾಗ ಇಬ್ಬರೂ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂಥವರು ಒಂದು ಅಂಡರ್‌ಟೇಕಿಂಗ್ ಮಾಡಿ ಅಗ್ರಿಮೆಂಟ್‌ಗೂ ಸಹಿ ಮಾಡಿದ್ದಂಥ ಸಂದರ್ಭದಲ್ಲಿ ಇವತ್ತಿನವರೆಗೂ ಕೂಡ ಸೆಂಟ್ರಲ್ ವಾಟರ್ ಕಮಿಷನ್ ಮುಂದೆ ಅವರು ಹೋಗಲಿಲ್ಲ. ಮತ್ತು ಅಕಸ್ಮಾತ್ ಹೋಗಿದ್ದರೂ ಕೂಡ ಇವತ್ತು ಕ್ವೈರೀಸ್ ಆಗಿ ಅದು ವಾಪಸ್ಸು ಬಂದು ಬಂದಿರಬಹುದು.

ಇಲ್ಲಿಯವರೆಗೂ ಕ್ಲಿಯರ್ ಮಾಡುವಂಥ ಪ್ರಯತ್ನ ಕಳೆದು 20 ವರ್ಷಗಳಿಂದ ಆಗಲಿಲ್ಲ ಎಂದರೆ, ಇವತ್ತು ನಾನು ಕೇಳುತ್ತೇನೆ. ಈ ರಾಜ್ಯದ ಜನ ಇನ್ನು ಯಾವ ರೀತಿಯಾದಂಥ ಅವಕಾಶವನ್ನು ಕೊಡಬೇಕು? ಇವತ್ತು ಈ ಸಭೆಯ ಸದಸ್ಯರಾಗಿದ್ದಂಥವರು, ಪ್ರಧಾನಮಂತ್ರಿಯಾಗಿ ಕುಳಿತು ಕೊಂಡಿದ್ದಂಥ ಸಂದರ್ಭದಲ್ಲಿ ಕೇವಲ ಇದು ಒಂದನ್ನು ಕ್ಲಿಯರ್ ಮಾಡಲಿಕ್ಕೆ ಆಗಲಿಲ್ಲ ಎಂದು ಹೇಳಿದರೆ, ನಿಮ್ಮ ಪ್ರಾಮಾಣಿಕತನವನ್ನು ಯಾವ ರೀತಿಯಿಂದ ಪ್ರಶ್ನೆ ಮಾಡಬೇಕು ಎನ್ನತಕ್ಕಂಥ ಮಾತನ್ನು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ನಾನು ಏತಕ್ಕೋಸ್ಕರ ಈ ಮಾತನ್ನು ಹೇಳುತ್ತೇನೆ ಎಂಬುದನ್ನು ಮುಂದೆ ಹೇಳುತ್ತೇನೆ. ಇದು ಒಂದು ಕಡೆ ಆಯಿತು. ಇವತ್ತು ಸ್ಕೀಮ್ 'ಬಿ' ನಲ್ಲಿ ಇರತಕ್ಕಂಥ 183 ಟಿ.ಎಂ.ಸಿ. ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ನಿಮಗೆ ಹಕ್ಕು ಇಲ್ಲವೇ? ಇವತ್ತೂ ಕೂಡ ನಮಗೆ ಹಕ್ಕಿದೆ. ಬಚಾವತ್ ತೀರ್ಪು ಪ್ರಕಾರಗಾಗಲೇ ನಮ್ಮ ಷೇರು, ನಮ್ಮ ನೀರಿನ ಪಾಲು ಏನು ಎನ್ನತಕ್ಕಂಥಾದ್ದು ತೀರ್ಮಾನ ಆಗಿರಬೇಕಾದರೆ, ಅದನ್ನು ಯಾವಾಗ ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿದರೆ, ಬಳಕೆ ಮಾಡತಕ್ಕಂಥಾದ್ದು ಎರಡು ಸಾವಿರ ವರ್ಷದ ಅಥವಾ ಯಾವುದೇ ಸಂದರ್ಭದಲ್ಲಿ ಕೂಡ, ನಮ್ಮ ಮೂರು ರಾಜ್ಯಗಳ ಸರ್ಕಾರಗಳ ಪ್ರತಿನಿಧಿಗಳು ಕುಳಿತುಕೊಂಡು ತೀರ್ಮಾನ ಮಾಡಿದಂಥ ಸಂದರ್ಭದಲ್ಲಿ ಅಥವಾ ಅಥಾರಿಟಿಯಾದಂಥಾ ಸಂದರ್ಭದಲ್ಲಿ ಈ ನೀರನ್ನು ಬಳಕೆ ಮಾಡಿಕೊಳ್ಳುವಂಥ ಹಕ್ಕು ನಮಗೆ ಬರುತ್ತದೆ ಎನ್ನತಕ್ಕಂಥ ಮಾತನ್ನು ಹೇಳಬೇಕಾದರೆ, ನಾನು ನಿಮ್ಮನ್ನು ಮೂಲಭೂತವಾಗಿ ಕೇಳತಕ್ಕದ್ದು ಏನೆಂದರೆ, ನಿಮ್ಮ ನೀರಿನ ಹಕ್ಕನ್ನು ನೀವು ಅರಿಯದೇ ಇದ್ದಂಥ ಸಂದರ್ಭದಲ್ಲಿ ಕೊನೆಯಪಕ್ಷ ಯೋಜನೆಗಳನ್ನಾದರೂ ಮಾಡಿ. ಇವತ್ತು ನಮ್ಮ ಯೋಜನೆಗಳ ಮುಖೇನ ನಮ್ಮ ನೀರಿನ ಹಕ್ಕನ್ನು ಪಡೆಯುವುದಕ್ಕೆ ನಾವು ಕೇಂದ್ರ ಸರ್ಕಾರದ ಮುಂಚೆ ಹೋಗಿದ್ದೇವೆ ಸೆಂಟ್ರಲ್ ವಾಟರ್ ಕಮಿಷನ್ ಮುಂದೆ ಹೋಗಿದ್ದೇವೆ ಎಂದು ಹೇಳತಕ್ಕಂಥ ಧೈರ್ಯ ನಿಮಗೆ, ನಿಮ್ಮ ಸರ್ಕಾರಕ್ಕೆ ಇಲ್ಲ. ಯಾಕೆ ಇದು? ನಿಮ್ಮ ಪ್ರಾಮಾಣಿಕ ಪ್ರಯತ್ನ ಏನಿದೆ? ಪ್ರಾಮಾಣಿಕವಾಗಿ ನಿಮ್ಮ ನೀರಿನ ಹಕ್ಕು ಉಳಿಸಿಕೊಳ್ಳುವಂಥ ಪ್ರಯತ್ನ ನಿಮ್ಮಿಂದ ಆಗಿದೆಯಾ? ಇಲ್ಲಿಯವರೆಗೂ ಇದು ಆಗಿಲ್ಲ. ಅದು ಯಾಕೆ, ಸ್ಕೀಮ್ 'ಎ' ಅಡಿಯಲ್ಲಿ ಬರತಕ್ಕಂಥ ಅನೇಕ ಪ್ರಾಜೆಕ್ಟ್‌ಗಳೂ ಕೂಡ ಇವತ್ತು ಕ್ಲಿಯರ್ ಆಗಿಲ್ಲ. ಕಾರಣಗಳು ಏನೇ ಇರಬಹುದು. ಒಂದು ಕಡೆ ಫಾರೆಸ್ಟ್ ಅಂಡ್ ಇಕಲಾಜಿಕಲ್ ಕ್ಲಿಯರೆನ್ಸ್ ಪೆಂಡಿಂಗ್ ಇರಬಹುದು, ಸೆಂಟ್ರಲ್ ವಾಟರ್ ಕಮಿಷನ್ನೇ ಇರಬಹುದು. ಅಥವಾ ಇನ್ನಾವುದೇ ತಡೆ ಸರ್ಕಾರದ ಮುಂದೆ ಇರಬಹುದು. ಆದರೆ ಬಚಾವತ್ ತೀರ್ಪನ್ನು ಕೊಡುವಂಥ ಸಂದರ್ಭದಲ್ಲಿ ಎಲ್ಲಾ ರಾಜ್ಯಗಳ ಸರ್ಕಾರಗಳೂ ಕೂಡ ಇವತ್ತು ಒಪ್ಪುತ್ತೇವೆ. ಅದು ಏನೆಂದು ಹೇಳಿದರೆ ನಾವು.

At any time after 31st May 2000, the order may be reviewed or revised by a competent authority or a tribunal. such a review or revision shall not as far as possible disturb any utilisation that may have been undertaken by the States within the limits if allocation made to it under foregoing clauses."

ಅಧ್ಯಕ್ಷರೇ ಇನ್ನೂ ಮುಂದಕ್ಕೆ ಹೋಗಿ ಒಂದು ಮಾತು ಹೇಳುತ್ತಾರೆ.

"Nothing in this order of the Tribunal shall impaire the right or power or authority of any state to regulate wight or power or authority of any stateto regulate within boundaries to use water or to enjoy the benefit of water within the state in the manner not consistent with the order of the Tribunal."

ಯಾವುದೇ ರೀತಿಯಲ್ಲಿ ಕೂಡ ಅವರು ಹಸ್ತಕ್ಷೇಪ ಮಾಡುವುದಕ್ಕೆ ಅವಕಾಶ ಇಲ್ಲ. ಇವತ್ತು ನಾನು ತಮಗೆ ಕೇಳುತ್ತೇನೆ, ರಾಜಕೀಯವಾಗಿ ಸೃಷ್ಟಿಸಿಕೊಂಡು ಇವತ್ತು ತೊಂದರೆಗಳನ್ನು ಕೊಡುತ್ತಿದ್ದಾರೆ. ಆಲಮಟ್ಟಿ ವಿಷಯ ಇರಬಹುದು ಅಥವಾ ಇನ್ನು ಯಾವುದೇ ಯೋಜನೆಯನ್ನು ಕ್ಲಿಯರ್ ಮಾಡುವುದಕ್ಕೆ ಹೋದರೂ ಕೂಡ, ಎಲ್ಲಾ ರೀತಿಯಿಂದ ನಿರಂತರವಾಗಿ ನಮಗೆ ಅಡೆತಡೆಗಳನ್ನು ತಂದು ನಮ್ಮ ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡುವುದಕ್ಕೆ ತೊಂದರೆಯನ್ನೇ ಒಡ್ಡತ್ತಿರತಕ್ಕಂಥ ಪಕ್ಕದ ರಾಜ್ಯಗಳ ಬಗ್ಗೆ ನಾವು ಯಾವರೀತಿ ಯಾದಂಥ ಪ್ರತಿಭಟನೆಯನ್ನು ಸಲ್ಲಿಸಿದ್ದೇವೆ? ಕೇಂದ್ರ ಸರ್ಕಾರದ ಮುಂದೆ ಯಾವ ರೀತಿಯಾದ ವಾದವನ್ನು ಇಟ್ಟಿದ್ದೇವೆ ಎಂದು ಹೇಳುವುದಕ್ಕೆ ನಿಮ್ಮಲ್ಲಿ ಯಾವುದೇ ತೆರನಾದ ವಾದವೂ ಇಲ್ಲ, ದಾಖಲಾತಿಯೂ ಇಲ್ಲ. ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಕೊನೆಯಪಕ್ಷ ಯೋಜನೆಗಳನ್ನಾದರೂ ಮಾಡಿ, ನೀರನ್ನು ಪಡೆಯತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗಿದೆ. ಕೊನೆಯಪಕ್ಷ ಬೇರೆ ರಾಜ್ಯದವರನ್ನು ನೋಡಿ ಕಲಿಯಬೇಕಾಗುತ್ತದೆ ಏನೋ ಇವತ್ತು ಬಹಳ ದುಃಖದಿಂದ ಈ ಮಾತನ್ನು ನಾನು ಹೇಳಬೇಕಾಗುತ್ತದೆ. ಆಂಧ್ರಪ್ರದೇಶದವರು ಇವತ್ತು ಸ್ಕೀಮ್ 'ಎ' ನಲ್ಲಿ ಇರತಕ್ಕಂಥ ಸಂಪೂರ್ಣ ನೀರನ್ನು ಬಳಕೆ ಮಾಡಿ ಸ್ಕೀಮ್ 'ಬಿ' ನಲ್ಲಿ ಬರತಕ್ಕಂಥ ನೀರನ್ನು ಸಂಪೂರ್ಣ ಬಳಕೆ ಮಾಡಿಕೊಂಡು, ಅದಕ್ಕಿಂತಲೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಇವತ್ತು ಶ್ರೀಶೈಲ ಪ್ರಾಜೆಕ್ಟ್ ಇರಬಹುದು, ಅಥವಾ ಇನ್ನೊಂದು ಪೂಲವರಂ ಪ್ರಾಜೆಕ್ಟ್ ಇರಬಹುದು, ಇದು ಯಾವುದೇ ಪ್ರಾಜೆಕ್ಟ್ ಆದರೂ ಕೂಡ ಬಹಳ ಮುಂದಕ್ಕೆ ಹೋಗಿ, ಸ್ಕೀಮ್ (ಬಿ) ನಲ್ಲಿ ಬರತಕ್ಕಂಥ ಎಲ್ಲಾ ನೀರನ್ನು ನಾವು ಉಪಯೋಗ ಮಾಡಿಕೊಂಡಿದ್ದೇವೆ, ಈಗಾಗಲೇ ಇನ್ವೆಸ್ಟಮೆಂಟ್ ಮಾಡಿದ್ದೇವೆ ಎನ್ನತಕ್ಕಂಥಾದ್ದನ್ನು ಹೇಳಿ ಯಾವುದೇ ಕೇಂದ್ರ ಸರ್ಕಾರದ ಮಾರ್ಗಸೂಚಿ ಇಲ್ಲ, ಇನ್ನೊಂದಿಲ್ಲ. ನಿಯಮಗಳನ್ನೆಲ್ಲವನ್ನೂ ಕಿತ್ತುಹಾಕಿ ಇವತ್ತು ನೀರನ್ನು ಬಳಕೆ ಮಾಡಿಕೊಂಡಿರಬೇಕಾದರೆ ನಾನು ಕೇಳುತ್ತೇನೆ, ನಿಮಗೆ ಅಂತಹ ಕೆಚ್ಚಿದೆ ಯಾಕೆ ಬರಲಿಲ್ಲ ಎಂದು? ಮತ್ತೊಂದು ಬಹಳ ಪ್ರಾಮುಖ್ಯವಾಗಿ ನಮ್ಮ ಜಿಲ್ಲೆಗೆ ಸಂಬಂಧಪಟ್ಟಂಥ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ನಂತರ ನೇರವಾಗಿ ನಾನು ವಿಷಯಕ್ಕೆ ಬರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಒಂದು, ಇವತ್ತು 734 ಟಿಎಂಸಿ ನೀರು ಬಳಕೆಯಾಗಬೇಕಾದರೆ ಒಂದು ಪ್ರಾಜೆಕ್ಟ್, ಬಚಾವತ್ ತೀರ್ಪಿನ ಮುಂದೆ ಬರುತ್ತದೆ. ಅದು ಭದ್ರಾ ಮೇಲ್ದಂಡೆ ಎನ್ನತಕ್ಕಂಥ ಯೋಜನೆಯನ್ನು ನಮ್ಮ ರಾಜ್ಯದಲ್ಲಿ ತುಮಕೂರು ಮತ್ತು ಚಿತ್ರದುರ್ಗ ಹಾಗೂ ಚಿಕ್ಕಮಗಳೂರಿನ ಭಾಗಗಳಿಗೆ ಸಹಾಯಕವಾಗುವ ರೀತಿಯಲ್ಲಿ drought-hit areas ಆಗಿರುವುದರಿಂದ ಅದರ ನೀರಿನ ಬಳಕೆಗೋಸ್ಕರ ಇವತ್ತು ಆ ಯೋಜನೆಯನ್ನು ಮಾಡಬೇಕು ಎನ್ನತಕ್ಕಂಥಾದ್ದನ್ನು ಅಂದು ಬಚಾವತ್ ತೀರ್ಪಿನಲ್ಲಿ ಕೊಟ್ಟಂಥ ಸಂದರ್ಭದಲ್ಲಿ, ಬಚಾವತ್‌ನವರು ಒಂದು ತೀರ್ಪನ್ನು ಕೊಡುತ್ತಾರೆ. ಅಧ್ಯಕ್ಷರೇ, ನಾನು ಇವತ್ತು ಅವರ ಮಾತನ್ನು ನೇರವಾಗಿ ಹೇಳಿದರೆ ಬಹುಶಃ ತಪ್ಪಾಗಲಾರದು.

"when a project was filed before the Krrishna water Disputet tribunal, the difinite allocation of water is that the demand for this project is not worth consideration, Unless a further study is made of water available in the Tungabhadra project, the project may be deferred, and they have allotted."

ಎನ್ನತಕ್ಕಂಥ ಮಾತನ್ನು ಹೇಳಿ, ಇವತ್ತು 734 ರಲ್ಲಿ 10 ಟಿಎಂಸಿ ನೀರನ್ನು ಸಾಂಕೇತಿಕವಾಗಿ ಇವತ್ತು ಪ್ರಾಜೆಕ್ಟ್‌ನಲ್ಲಿ ಅಲಾಟ್ ಮಾಡುವುದರ ಮುಖೇನ ಅಪ್ಪರ್ ಭದ್ರಾ ಪ್ರಾಜೆಕ್ಟ್ ಅಂತ ಹೇಳಿ ಅದನ್ನು ಮಾಡುತ್ತಾರೆ. ಆದ ಮೇಲೆ ಈಗಾಗಲೇ ಹೆಚ್ಚು ಕಡಿಮೆ 20 ವರ್ಷಗಳು ಕಳೆದಂಥ ಸಂದರ್ಭದಲ್ಲೂ ಕೂಡ ಇವತ್ತು ನಮ್ಮ ವ್ಯಾಪ್ತಿಯಲ್ಲಿ ಬರತಕ್ಕಂಥ, ಆ ಪ್ರಾಜೆಕ್ಟ್‌ನ್ನು ಕ್ಲೀಯರ್ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಎಷ್ಟರಮಟ್ಟಿಗೆ ಮಾಡಿದ್ದೀರಿ ಎಂದು ಹೇಳುವುದಕ್ಕೆ ಸನ್ಮಾನ್ಯ ತಿಪ್ಪೇಸ್ವಾಮಿ ಅವರಿಗೆ ಹೇಳುತ್ತೇನೆ. ಈಗಾಗಲೇ ನಮ್ಮ ಅಧಿಕಾರಿಗಳ ಮಟ್ಟದಿಂದ ಸುಮಾರು ಆರೇಳು ಪ್ರಾಜೆಕ್ಟ್‌ಗಳು ಕೂಡ ಆದವು.

6-7 ಪ್ರಾಜೆಕ್ಟ್‌ಗಳು ಎಂದರೆ ಯಾವ ರೀತಿಯಾಗಿ, ಯಾವುಯಾವುದೋ ಒಂದು ಡಿಫ್ರೆಂಟ್ ಸೈಟ್ಸ್‌ನ್ನು ಮಾಡಿದರು. ಮೊದಲನೆಯದಾಗಿ ಮಾಡಿದ್ದು ಎಂದರೆ, ಅಂದಿದ್ದಂಥ ಬಾಳಿಕುಂದ್ರಿಯವರ ಕಾಲದಲ್ಲಿ ಚಿಕ್ಕಮಗಳೂರು ಹತ್ತಿರ ಬರುವ ಮಹಾಗುಂದಿಯ ಪಕ್ಕ ಒಂದು ಡ್ಯಾಮನ್ನು ಕಟ್ಟಿ ಅಲ್ಲಿಂದ ನೀರನ್ನು ತರಬೇಕು ಎನ್ನುವಂಥಾದ್ದು. 36 ಟಿ.ಎಂ ಸಿ ನೀರಿಗೆ ಯೋಜನೆಯನ್ನು ಮಾಡುತ್ತಾರೆ ಆ ಪ್ರಾಜೆಕ್ಟ್‌ನ್ನು ಮಾಡಿ, ಅದನ್ನು ಡೀಟೈಲ್ ಆಗಿ ಸರ್ವೆ ಮಾಡತಕ್ಕ ಕೆಲಸವನ್ನೂ ಕೂಡ ಮಾಡುತ್ತಾರೆ. ಅದೇ ರೀತಿಯಲ್ಲಿ ಬೇರೆ ಬೇರೆಯಾಗಿ ಇವತ್ತು, ಡಿಫ್ರೆಂಟ್ ಆಲೋಕೇಷನ್, 45 ಟಿ ಎಂ ಸಿ 65 ಟಿಎಂ ಸಿ, ಅಥವಾ 12 ಟಿ ಎಂ ಸಿ ಆದರೆ ಹೇಗೆ ಎಂದು 7-8 ಪ್ರಾಜೆಕ್ಟ್‌ಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕ ಕೆಲಸವನ್ನು ಮಾಡುತ್ತಾರೆ. ಆದರೆ, ಎಲ್ಲಾ ವರದಿಗಳೂ ಕೂಡ ಇವತ್ತು ಸರ್ವೆ ಮಾಡಿ ಡೀಟೈಲ್ ಎಸ್ಟಿಮೇಟ್ ಯಾವುದೂ ಕಳುಹಿಸಲಿಲ್ಲ. ಕೇವಲ ಒಂದು ಟೋಪೋಶೀಟ್ ಸ್ಟಡೀಸ್, ಟೋಪೋಶೀಟ್ಸ್ ಸ್ಟಡೀಸ್ ಎಂದರೆ ಅಲ್ಲೇನೂ ಹೋಗಬೇಕಾಗಿಲ್ಲ. ಇಲ್ಲಿ ಆಫೀಸಿನಲ್ಲಿ ಕುಳಿತು ಯಾರೋ ಒಬ್ಬರು ಗುಮಾಸ್ತರು ಮಾಡಿಕೊಟ್ಟಿದ್ದನ್ನು ಮುಖ್ಯ ಇಂಜಿನಿಯರ್ ರವಾನೆ ಮಾಡಿ ಸರ್ಕಾರಕ್ಕೆ ಕಳುಹಿಸಿ, ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವಂಥ ಕೆಲಸವನ್ನು ಮಾಡಿರಬೇಕಾದರೆ, ಇವತ್ತಿನವರೆಗೂ ಕೂಡ ಅದರ ಬಗ್ಗೆ ಯಾವುದೇ ಪ್ರಸ್ತಾವವಾಗಿಲ್ಲ. ಯಾವ ಯೋಜನೆಯೂ ಕ್ಲಿಯರ್ ಆಗಲಿಕ್ಕೆ ಆಗಲಿಲ್ಲ. ಇವತ್ತು ನಿಮ್ಮ ಸರ್ಕಾರ ಬಂದ ಮೂರು ವರ್ಷದ ಹಿಂದೆ ಏನಾಯಿತು ಎನ್ನತಕ್ಕಂತಾದ್ದು.

ಉಪಾಧ್ಯಕ್ಷರು:- ಮಾನ್ಯ ಜಯಚಂದ್ರರವರೇ ಸ್ವಲ್ಪ ಬೇಗ ಮುಗಿಸಿ.

ಶ್ರೀ ಟಿ. ಬಿ. ಜಯಚಂದ್ರ:- ಮಹಾಗುಂದಿಯ ಹತ್ತಿರ ಬಂದಂಥ ನೀರು, 45 ಟಿ ಎಂ ಸಿ. ಆ ಪ್ರಾಜೆಕ್ಟ್‌ನ ಆಕಾರ, ಸ್ವರೂಪ ಯಾವ ಪ್ರಕಾರದಲ್ಲಿತ್ತು ಎನ್ನುವುದರ ಬಗ್ಗೆ ನಾನು ಸಂಕ್ಷಿಪ್ತವಾಗಿ ಹೇಳುತ್ತೇನೆ. ಸುಮಾರು 45 ಟಿಎಂಸಿ ನೀರಿನ ಒಂದು ಯೋಜನೆಯನ್ನು ಮಾಡುತ್ತಾರೆ. ಇವತ್ತು 5.37 ಲಕ್ಷ ಎಕರೆಗಳಿಗೆ, ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ತುಮಕೂರಿನ ಭಾಗಗಳಿಗೆ ನೀರನ್ನು ಕೊಡಬೇಕು ಎನ್ನತಕ್ಕಂಥಾದ್ದು. ಮತ್ತು ಸಬ್‌ಮರ್ಷನ್ ಎಷ್ಟಾಗುತ್ತದೆಂದರೆ, 13 ಸಾವಿರ

ಎಕರೆ ಸಬ್‌ಮರ್ಷನ್ ಆಗುತ್ತದೆ ಎಂದು ಪ್ರಾಥಮಿಕ ವರದಿಯಲ್ಲಿ ಇದೆ. ಅದರಲ್ಲಿ ಕಾಫಿ ಪ್ಲಾಂಟೇಷನ್ 2,973 ಎಕರೆ, ಫಾರೆಸ್ಟ್ ಲ್ಯಾಂಡ್ ಕೇವಲ 4,333 ಎಕರೆ. ಗಾರ್ಡನ್ ಲ್ಯಾಂಡ್ 320 ಎಕರೆ. ಏನೂ ಬೆಳೆಯದೇ ಇರತಕ್ಕ ಲ್ಯಾಂಡ್ 5 ಸಾವಿರ ಎಕರೆ. ಇವತ್ತು 13 ಸಾವಿರ ಎಕರೆ ಲ್ಯಾಂಡನ್ನು ಕೊಡುವುದರ ಮುಖೇನ, ನ್ಯಾಚುರಲ್ಲಾಗಿ, ಅನ್ ಎ ಗ್ರಾವಿಟಿ ಫ್ಲೋ ಇವತ್ತು ನಮ್ಮ ಭಾಗಕ್ಕೆ ನೀರು ಬರುತ್ತಾ ಇತ್ತು. ಆ ಯೋಜನೆ ಬಗ್ಗೆ ಸಾಕಷ್ಟು ವರ್ತಮಾನಗಳನ್ನು, ಮಾಹಿತಿಗಳನ್ನು ಕೇಂದ್ರ ಸರ್ಕಾರ ಸೆಂಟ್ರಲ್ ವಾಟರ್ ಕಮೀಷನ್ ಮುಂದೆ, ಫೈಲು ಹೋಗಿ ಬರುವ ಸಂದರ್ಭದಲ್ಲಿ ಕೊಡಲಾಗಿದೆ ಹುದ್ದೆ ಅದ್ದಂಥ ಅನೇಕ ಪ್ರಧಾನ ಮಂತ್ರಿಗಳು ಮಾನ್ಯ ನರಸಿಂಹರಾಯರು ಇರಬಹುದು ಅಥವಾ ದಿವಂಗತ ರಾಜೀವ್‌ಗಾಂಧಿಯವರು ಇರಬಹುದು, ಚುನಾವಣೆಗೆ ಬಂದಂಥ ಸಂದರ್ಭದಲ್ಲಿ ಈ ಪ್ರಾಜೆಕ್ಟ್‌ಗೆ ಒತ್ತನ್ನು ಕೊಡಬೇಕೆಂಬ ಸದಂದರ್ಭ ಕೂಡ ಇತ್ತು. ಅದು ಪತ್ರಿಕೆಯಲ್ಲೂ ಕೂಡ ಪ್ರಚಾರವಾಯಿತು ಈಗೇನಾಯಿತು, 1997ರಲ್ಲಿ ಅಂದರೆ ಹೋದವರ್ಷ ನಿಮ್ಮ ಸರ್ಕಾರ ಅಂತಹ ಪ್ರಾಜೆಕ್ಟ್‌ನ್ನು ರಿಜೆಕ್ಟ್ ಮಾಡುತ್ತಾರೆ. ಏಕೆ ರಿಜೆಕ್ಟ್ ಮಾಡುತ್ತಾರೆ, ಅದಕ್ಕೆ ಕಾರಣ ಏನು ಎನ್ನತಕ್ಕಂತಾದ್ದನ್ನು ಹೇಳಿಲ್ಲ ಮತ್ತು ಕಾರಣ ಯಾರಿಗೂ ಕೂಡ ಗೊತ್ತಿಲ್ಲ. ಇವತ್ತು ಸನ್ಮಾನ್ಯ ನೀರಾವರಿ ಸಚಿವರು ತುಮಕೂರು, ಚಿತ್ರದುರ್ಗ ಎಲ್ಲಾ ಭಾಗದ ಶಾಶಕರನ್ನು ಕರೆದು ಸಭೆಯನ್ನು ಮಾಡುವಂಥ ಸಂದರ್ಭದಲ್ಲಿ, ಅದರ ಬಗ್ಗೆ ಚಕಾರವನ್ನು ಎತ್ತಲಿಲ್ಲ. ಅದರ ಬಗ್ಗೆ ಪ್ರಸ್ತಾವವನ್ನೇ ಎತ್ತುವುದಕ್ಕೆ ಹೋಗದೇ, ಆ ಪ್ರಾಜೆಕ್ಟನ್ನು ಯಾರಿಗೂ ಗೊತ್ತಿಲ್ಲದೆ ಇರತಕ್ಕ ರೀತಿಯಲ್ಲಿ ರಿಜೆಕ್ಟ್ ಮಾಡತಕ್ಕ ಕೆಲಸವನ್ನು ಮಾಡಿದ್ದಾರೆ. ಇವತ್ತು ನಾನು, ನಿಮ್ಮನ್ನು ಕೇಳುತ್ತೇನೆ ಈ ಪ್ರಾಜೆಕ್ಟನ್ನು ರಿಜೆಕ್ಟ್‌ಮಾಡತಕ್ಕ ಕೆಲಸವನ್ನು ಮಾಡಿದ್ದಾರೆ. ಇವತ್ತು ನಾನು, ನಿಮ್ಮನ್ನು ಕೇಳುತ್ತೇನೆ ಈ ಪ್ರಾಜೆಕ್ಟನ್ನು ರಿಜೆಕ್ಟ್ ಮಾಡತಕ್ಕ ಸಂದರ್ಭವಾದರೂ ಕೂಡ ಏನಿತ್ತು? ಯಾರಿಗೋಸ್ಕರ ಇದನ್ನು ರಿಜೆಕ್ಟ್ ಮಾಡಿದಿರಿ, ಯಾರನ್ನು ಒಲಿಸುವುದಕ್ಕೋಸ್ಕರ ಈ ಪ್ರಾಜೆಕ್ಟನ್ನು ರಿಜೆಕ್ಟ್ ಮಾಡಿದಿರಿ ಎಂಬ ಮಾತನ್ನು ನಾನು ಹೇಳಬೇಕಾಗುತ್ತದೆ. ಬಹುಶಃ ಇದಾದ ಮೇಲೆ ಹೊಸದೊಂದು ಹೇಳಿದಿರಿ. ಯಾರನೋನೋ ಓಲೈಸುವುದಕ್ಕೋಸ್ಕರ ಹೋಗಿ, ಇವತ್ತು ತುಂಗಾ ಲಿಫ್ಟ್ ಎನ್ನತಕ್ಕಂಥ ಮಾತನ್ನು ಹೇಳಿದಿರಿ. ತುಂಗಾ ನದಿಯಲ್ಲಿ ಹೆಚ್ಚುವರಿಯಾಗಿರತಕ್ಕ ನೀರನ್ನು ಲಿಫ್ಟ್ ಮಾಡಿ, ಯಾವರೀತಿಯಾಗಿ ಅಲೋಕೇಷನ್ ಕೊಡುತ್ತೀರಿ ಎಂದು ಹೇಳಿದರೆ, ಇವತ್ತು ಬಚಾವತ್ ತೀರ್ಪಿನಲ್ಲಿ ಪ್ರಸ್ತಾಪವಾಗಿರತಕ್ಕ 8 ಟಿ.ಎಂ.ಸಿ. ನೀರನ್ನು ಅದು ಯಾವ ರೀತಿಯಾಗಿ ಬರುವುದು ಎಂದು ಹೇಳಿದರೆ, ಗೋದಾವರಿ ಡೈವರ್ಷನಿಂದ ಪೋಲಾವರಂ ಪ್ರಾಜೆಕ್ಟ್ ಕ್ಲಿಯರ್ ಆಗುವವರೆಗೆ ನಿಮಗೆ ಹಕ್ಕೇ ಬರುವುದಿಲ್ಲ. ಆ ನೀರಿನ ಆಧಾರ ಇಟ್ಟುಕೊಂಡು ಇವತ್ತು ಪ್ರಾಜೆಕ್ಟನ್ನು ಕ್ಲಿಯರ್ ಮಾಡಬೇಕೆಂದು ಹೊರಟು, ಅದಕ್ಕೆ ತುಂಗಾ ಲಿಫ್ಟ್ ಎಂದು ಹೆಸರು ಕೊಡುತ್ತೀರಿ ತುಂಗಾ ಲಿಫ್ಟ್ ಎಂದು ಹೇಳಿದರೆ, ಯಾವ ರೀತಿಯಾಗಿ ಮಾಡುತ್ತಾರೆಂದರೆ, ಕೇವಲ ಒಂದೂವರೆ ಎರಡು ಲಕ್ಷ ಎಕರೆಗೆ ಮಾತ್ರ ನೀರನ್ನು ಕೊಡುತ್ತೇವೆ, ಚಿತ್ರದುರ್ಗಾಕ್ಕೆ ಎರಡನೆ ಹಂತವಾಗಿ ತುಮಕೂರಿಗೆ ಎಂಬ ಮಾತನ್ನು ಹೇಳುತ್ತೀರಿ. ಇದರ ಬಗ್ಗೆ ನೀವು ಚಿತ್ರದುರ್ಗಕ್ಕೆ ಹೋದಂಥ ಸಂದರ್ಭದಲ್ಲಿ ನೀರಾವರಿ ಸಚಿವರು ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಅನೇಕ ಸಾರಿ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಪ್ರಾಜೆಕ್ಟ್ ಕೂಡ ಆಗಿಹೋಗಿದೆ. ಇನ್ನೇನು ಬಜೆಟ್‌ಗೆ ಸೇರುತ್ತದೆ, ಮಾಡುತ್ತೇವೆ ಎಂಬುದನ್ನು

ಇವತ್ತು ನಮ್ಮ ಭಾಗದ ಜನ ಕೂಡ ನಂಬಿದ್ದಾರೆ. ಇವತ್ತು ಆ ರೀತಿಯಾಗಿ ನೋಡುತ್ತಾ ಇದ್ದಾರೆ. ಇವತ್ತು ನಾನು ಕೇಳುತ್ತೇನೆ. ನಿಜವಾಗಿಯೂ ಕೂಡ ಈ ಪ್ರಾಜೆಕ್ಟನ್ನು ಮಾಡುವುದಕ್ಕೆ ಸಾಧ್ಯವೇ? ಇವತ್ತು ನಾನೇಕೆ ನಿಮ್ಮ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡುತ್ತೇನೆಂದರೆ, ಈ ಪ್ರಾಜೆಕ್ಟನ್ನು ಮಾಡುವುದಕ್ಕೆ ಸಾಧ್ಯವೇ? ಇವತ್ತು ತುಂಗಾದಿಂದ ಭದ್ರಾಕ್ಕೆ, ಭದ್ರಾದಿಂದ ಮೇಲ್ಗಡೆ ಲಿಫ್ಟ್ ಮಾಡುವುದಕ್ಕೆ, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರತಕ್ಕಂತಾದ್ದು. ವಿದ್ಯುತ್ ಖಾತೆಯನ್ನು ಬಹಳ ದಿವಸದಿಂದ ಇಟ್ಟುಕೊಂಡಿದ್ದಾರೆ. ಅಲ್ಲಿ ನೀರನ್ನು ಲಿಫ್ಟ್ ಮಾಡಬೇಕಾದರೆ ಸುಮಾರು 300 ಮೆಗಾವ್ಯಾಟ್ ವಿದ್ಯುತ್ ಬೇಕಾಗುತ್ತದೆ. ಪ್ಲಾನಿಂಗ್ ಕಮೀಷನ್‌ನವರು ಹೇಳುತ್ತಾರೆ, 300 ಮೆಗಾವ್ಯಾಟ್ ಪವರನ್ನು ಇಂಡಿಪೆಂಡೆಂಟ್ ಆಗಿ, ಈ ಯೋಜನೆಗೋಸ್ಕರವಾಗಿಯೇ ತಯಾರು ಮಾಡತಕ್ಕ ಕೆಲಸ ಮಾಡಬೇಕು. ಆ ರೀತಿ ವಿದ್ಯುತ್ ಉತ್ಪತ್ತಿ ಮಾಡಿದಾಗ ಮಾತ್ರ ಈ ಯೋಜನೆ ಜಯಪ್ರದವಾಗುತ್ತದೆ ಎಂಬ ಮಾತನ್ನು ಹೇಳುತ್ತಾರೆ. ಅಧ್ಯಕ್ಷರೇ, ನಾನು ತಮ್ಮನ್ನು ಕೇಳುತ್ತೇನೆ. ಈ 300 ಮೆಗಾವ್ಯಾಟ್ ಪವರ್ ಉತ್ಪಾದನೆಗೆ ನಾವು ಬಂಡವಾಳ ಹಾಕಬೇಕಾಗಿರುವುದೆಂದರೆ, ಇವತ್ತಿನ ಅಂದಾಜಿನ ಪ್ರಕಾರ ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಹಾಕಬೇಕಾಗುತ್ತದೆ. ಇಷ್ಟು ಹಣವನ್ನು ಹಾಕಿ, ವಿದ್ಯುತ್‌ನ್ನು ತಯಾರು ಮಾಡಿ, ಈ ಯೋಜನೆಗಳನ್ನು ಕಾರ್ಯಗತಗೊಳಿಸುತ್ತೇವೆ, ಈ ಯೋಜನೆಗಳ ಮುಖೇನ ನೀರನ್ನು ಕೊಡುತ್ತೇವೆ ಎಂಬ ಮಾತನ್ನು ಹೇಳಿದರೆ, ನಿಜವಾಗಿಯೂ ಕೂಡ ನಾವು ಎಷ್ಟರಮಟ್ಟಿಗೆ ನಂಬಬೇಕು ಎಂಬುದನ್ನು ಕೇಳಬೇಕಾಗುತ್ತದೆ. ನಾನು ಕೇಳುತ್ತೇನೆ, ಇವತ್ತು ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ, ಇವತ್ತಿನ ಸಂದರ್ಭದಲ್ಲಿ ವಿದ್ಯುಚ್ಛಕ್ತಿಯನ್ನು ತಯಾರು ಮಾಡುವುದಕ್ಕೆ ಸಾಧ್ಯವೇ? ಅದು ಖಂಡಿತ ಸಾಧ್ಯವಿಲ್ಲ. ಈಗಾಗಲೇ ನಿಮ್ಮ ಕೃಷ್ಣ ಬಚಾವತ್ ತೀರ್ಪಿನ ಪ್ರಕಾರ, ಅನೇಕ ಲಿಫ್ಟ್ ಇರಿಗೇಷನ್ಸ್ ತೆಗೆದುಕೊಂಡಿದ್ದೀರಿ. ಈಗಾಗಲೇ ನಮ್ಮ ಅಲಮಟ್ಟಿಯಿಂದ ದೊರೆಯತಕ್ಕ ವಿದ್ಯುಚ್ಛಕ್ತಿಯಿಂದ, ಸಂಪೂರ್ಣವಾಗಿ ಆ ಲಿಫ್ಟ್ ಇರಿಗೇಷನ್‌ಗೇ ಕೊಡುವುದಕ್ಕಾಗುವುದಿಲ್ಲ. ಇನ್ನು ಈ ಯೋಜನೆಗೆ ಕೊಡುವುದಕ್ಕೆ ಸಾಧ್ಯವೇ ಎನ್ನತಕ್ಕ ಮಾತು. ನಾನು ದಯಮಾಡಿ ಹೇಳುತ್ತೇನೆ. ಈ ಯೋಚನೆಗೆ "ತುಂಬು ತಿರುವು" ಎಂಬ ಹೆಸರನ್ನು ಕೊಡತಕ್ಕಂಥ ಸಂದರ್ಭವಾದರೂ ಏನಿತ್ತು? ಇವತ್ತು ಬಚಾವತ್ ತೀರ್ಪಿನಲ್ಲಿ ಉಲ್ಲೇಖವಾಗಿರತಕ್ಕಂತಾದ್ದು 20-30 ವರ್ಷಗಳಿಂದ ಪ್ರಸ್ತಾಪವಾಗಿರತಕ್ಕ ಪ್ರಾಜೆಕ್ಟನ್ನು ಯಾರಿಗೋ ಹೆದರಿಕೊಂಡು, ಇವತ್ತು ಯಾರನ್ನೋ ಓಲೈಸುವುದಕ್ಕೋಸ್ಕರ, ಅದರ ಸ್ವರೂಪವನ್ನು ಬದಲು ಮಾಡಿ, ಕೇವಲ ಕಾಗದದ ಮೇಲೆ ಉಳಿಯತಕ್ಕ ಯೋಜನೆಯನ್ನು ಮಾಡುವುದಾದರೆ, ಅದನ್ನು ನಿಜವಾಗಿಯೂ ಕೂಡ ಮಾಡಬೇಡಿ. ಇದರಿಂದ ಪ್ರಯೋಜನವಾಗುವುದಿಲ್ಲ. ತುಮಕೂರು, ಚಿತ್ರದುರ್ಗ ಭಾಗದ ಜನರ ಬವಣೆ ಏನು ಎನ್ನುವುದನ್ನು ಯಾವ ಭಾಷೆಯಲ್ಲೂ ಕೂಡ ಹೇಳುವುದಕ್ಕಾಗದೇ ಇರತಕ್ಕ ಪರಿಸ್ಥಿತಿಯಾಗಿದೆ. ಇವತ್ತು ಒಂದು ಸಾವಿರ ಅಡಿ ಕೊರೆದರೂ ನೀರು ಬರದೇ ಇರತಕ್ಕ ಸಂದರ್ಭ ಇರಬೇಕಾದರೆ, ಈ ರೀತಿ ಅಂತರ್‌ಜಲ ಬತ್ತಿ ಹೋಗಿರುವ ಸಂದರ್ಭದಲ್ಲಿ ಈ ಯೋಜನೆ ಬಿಟ್ಟರೆ, ಇನ್ನಾವ ಯೋಜನೆಯನ್ನೂ ಮಾಡುವುದಕ್ಕಾಗುವುದಿಲ್ಲ. ಈ ಯೋಜನೆಯನ್ನು ಬಿಟ್ಟರೆ,ಯಾವುದೇ ಯೋಜನೆಯಿಂದ ನೀರು ಕೊಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಪ್ರಾಮಾಣಿಕವಾಗಿ ನಮ್ಮ ಭಾಗಕ್ಕೇ ನೀರು ಕೊಡಲೇಬೇಕೆಂಬ ಆಸೆ ಇದ್ದರೆ, ನೀವು ಮೂಲ ಯೋಜನೆ ಏನಿದೆ, ಆ ಯೋಜನೆಯ ಪ್ರಕಾರವೇ, ಇವತ್ತು ಗ್ರಾವಿಟಿ ಫ್ಲೋನಲ್ಲಿ ಬರತಕ್ಕಂಥ ನೀರನ್ನು ಕೊಡತಕ್ಕ ಪ್ರಯತ್ನವನ್ನು ಮಾಡಿ.

ಉಪಾಧ್ಯಕ್ಷರು:- ನೀವು ಮಾತನಾಡಲು ಪ್ರಾರಂಭ ಮಾಡಿ 45 ನಿಮಿಷವಾಯಿತು, ಬಹಳ ಜನ ಮಾತನಾಡುವವರಿದ್ದಾರೆ. ನಾಳೆ ವೋಟಿಂಗ್ ಇದೆ, ಬೇಗ ಮುಗಿಸಿ.

ಶ್ರೀ ಟಿ.ಬಿ. ಜಯಚಂದ್ರ:- ನೀರಾವರಿ ಸಚಿವರು ಈಗತಾನೇ ಬಂದಿದ್ದಾರೆ. ನನ್ನ ಹೆಚ್ಚು ಕಾಲವನ್ನು ಬೇರೆ ಬೇರೆ ಸದಸ್ಯರು ತೆಗೆದುಕೊಂಡಿದ್ದಾರೆ. ದಯಮಾಡಿ ನನಗೆ ಸ್ವಲ್ಪ ಕಾಲಾವಕಾಶವನ್ನು ಕೊಡಬೇಕು. ಈ ಯೋಜನೆಯನ್ನು ಕೈಗೆತ್ತಿಕೊಳ್ಳತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಸನ್ಮಾನ್ಯ ನಾಗೇಗೌಡರು ನಮ್ಮ ಭಾಗಕ್ಕೆ ಬಂದಂಥ ಸಂದರ್ಭದಲ್ಲಿ ತುಂಗಾ ಲಿಫ್ಟ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಈಗಾಗಲೇ ಹೇಳಿದೆ. ಈ ಯೋಜನೆಯನ್ನು ಕಾರ್ಯಗತ ಗೊಳಿಸುವುದಕ್ಕೆ ಆಗುವುದಿಲ್ಲ. ಇವತ್ತು ನಿಮ್ಮ ಹತ್ತಿರ ಯಾವುದೇ ರೀತಿಯ ವ್ಯವಸ್ಥೆ ಇಲ್ಲ, ಅದು ಸಾಧ್ಯವೇ ಇಲ್ಲ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಮೂಲಭೂತವಾಗಿ, ಮಹಾಗುಂದಿಯ ಹತ್ತಿರ ಏನೊಂದು ಯೋಜನೆಯನ್ನು ಮಾಡಿತ್ತು, ಆ ಯೋಜನೆಗೆ ಅಂಟಿಸಿಕೊಂಡು ನೀರು ಕೊಡುವುದಾದರೆ ಮಾತ್ರ ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ಕೃಷ್ಣಾ ಮೇಲಿನ ನೀರನ್ನು ಬಳಕ್ಕೆ ಮಾಡುವಂಥ ಸಂದರ್ಭದಲ್ಲಿ ನಿಮಗೆ ಅನೇಕ ತರವಾದ ಅಡ್ಡಿ ಆತಂಕಗಳು ಬಂದಿವೆ. ಇವತ್ತು ರಾಜಕೀಯವಾಗಿ ಬೀರತಕ್ಕ ಪ್ರಭಾವ ಏನಿದೆ, ಆ ಪ್ರಭಾವವೂ ಕೂಡ ನಮ್ಮ ಯೋಜನೆ ಮೇಲೆ ಬೀಳುತ್ತಿದೆ ಎನ್ನುವುದಕ್ಕೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಒಂದು ರೀತಿಯಲ್ಲಿ ಪರೋಕ್ಷವಾಗಿ ಸಹಾಯವನ್ನು ಮತ್ತು ಸಪೋರ್ಟ್ ಮಾಡತಕ್ಕ ಆಂಧ್ರ ಪ್ರದೇಶದ ಪಕ್ಷ ಏನಿದೆ, ಅವರೇ ಮುಖ್ಯ ಮಂತ್ರಿಗಳಾಗಿರತಕ್ಕ ಸಂದರ್ಭದಲ್ಲಿ ಇವತ್ತು ಇಂತಹ ಯೋಜನೆಗಳು ಎಷ್ಟರಮಟ್ಟಿಗೆ ಸಹಾಯವಾಗುತ್ತವೆ ಎನ್ನುವುದನ್ನು ಕೂಡ ಯೋಚನೆ ಮಾಡಬೇಕಾಗುತ್ತದೆ ಎನ್ನುವುದನ್ನು ಹೇಳುವುದಕ್ಕೆ ಇಚ್ಚಿ ಪಡುತ್ತೇನೆ. ರಾಜಕೀಯವಾದ ಪ್ರಭಾವ ನಮ್ಮ ಯೋಜನೆಗಳ ಮೇಲೆ ಆಗುತ್ತಿದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳುವುದಾದರೆ, ಈಗಾಗಲೇ ತಮಿಳುನಾಡಿನ ಮಾಜಿ ಮುಖ್ಯಮಂತ್ರಿಗಳಾದ ಜಯಲಲಿತಾ ಅವರ ಪಕ್ಷವು ಕೇಂದ್ರ ಸರ್ಕಾರ ರಚನೆಗೆ ನೇರವಾಗಿ ಸಹಾಯವನ್ನು ಮಾಡುವಂಥ ಸಂದರ್ಭದಲ್ಲಿ ಅನೇಕ ತರಹವಾದ ಕಂಡೀಷನ್‌ಗಳನ್ನು ಹಾಕಿರತಕ್ಕದ್ದು ತಮಗೂ ಗೊತ್ತಿರತಕ್ಕ ವಿಚಾರ. ಯಾವ ಕಂಡೀಷನ್ ಬಗ್ಗೆ ನಾವು ಪ್ರಸ್ತಾಪ ಮಾಡದೇ ಇದ್ದರೂ ಸಹಿತ ಒಂದಂತೂ ನಿಜ. ಇವತ್ತು ಕಾವೇರಿ ಟ್ರಿಬ್ಯೂನಲ್ ಮುಂದೆ ನಾವು ಕೊಟ್ಟಂಥ 205 ಟಿಎಂಸಿ ನೀರನ್ನು ಬಳಕೆ ಮಾಡುವಂಥ, ಟ್ರಿಬ್ಯುನಲ್ ಆರ್ಡ್‌ರ್ ಏನಿದೆ, ಆ ಆರ್ಡ್‌ರನ್ನು ಬಿಗಿಯಾಗಿ ಇಂಪ್ಲಿಮೆಂಟ್ ಮಾಡತಕ್ಕಂಥ ಕಂಡೀಷನ್ ಹಾಕಿದ್ದಾರೆ. ಈ ಕಂಡೀಷನ್ ಮಾಡಿಕೊಂಡು, ಅವರುಗಳು ಒತ್ತಾಯವನ್ನು ತಂದು, ಬೆಂಬಲ ಕೊಡಬೇಕೆಂದು ಹೊರಟಿರಬೇಕಾದರೆ, ನಾನು ಮೊನ್ನೆದಿವಸ ಟಿ.ವಿ.ಯಲ್ಲಿ ಜಯಲಲಿತ ಅವರ ಭಾಷಣವನ್ನು ಕೇಳಿದೆ. ಜಯಲಲಿತರವರಿಗೆ ತಾವು ಹೇಳಿದ ಎಲ್ಲಾ ಅಂಶಗಳನ್ನು ಇವತ್ತು ವಾಜಪೇಯಿಯವರು ಒಪ್ಪಿದ್ದಾರೆಯೇ ಎಂದು ಕೇಳಿದಾಗ, ಬಹುತೇಕ ಎಲ್ಲಾ ಅಂಶಗಳಿಗೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದರು. ಸರ್ಕಾರ ಇವತ್ತು ಅಲ್ಲಿ ಪ್ರಸ್ತಾಪ ಆಗಿರತಕ್ಕಂಥ ಅಂಶಗಳ ಬಗ್ಗೆ ಮತ್ತು ಅದರಲ್ಲಿ ನಮ್ಮ ರಾಜ್ಯಕ್ಕೆ ಯಾವ ರೀತಿಯ ಧಕ್ಕೆಯಾಗುತ್ತದೆ ಮತ್ತು ಏನು ತೊಂದರೆಯಾಗುತ್ತದೆ ಎನ್ನುವುದರ ಬಗ್ಗೆ ಮತ್ತು ಅವರಲ್ಲಿ ಆಗಿರುವ ಅಗ್ರಿಮೆಂಟ್ ಏನು ಎಂಬುದನ್ನು ತಾವು ಬಹಿರಂಗಪಡಿಸುವುದಕ್ಕೆ ಪ್ರಯತ್ನ

ಮಾಡಬೇಕಾಗುತ್ತದೆ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಕಾವೇರಿ ವಿವಾದ ಪ್ರಾರಂಭವಾದ ದಿನದಿಂದಲೂ ಕೂಡ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ ಇವತ್ತು ತಮಿಳುನಾಡಿನಲ್ಲಿ ಯಾವುದೇ ಪಕ್ಷ ಬರಲಿ ಅಥವಾ ಮುಖ್ಯಮಂತ್ರಿಗಳು ಬರಲಿ ತನ್ನದೇ ಆದ ರೀತಿಯಲ್ಲಿ ಹೋರಾಟ ಮಾಡಿಕೊಂಡು ಬಂದು ನಮ್ಮ ನೀರಿನ ಸಂಪೂರ್ಣ ಹಕ್ಕನ್ನು ಕಿತ್ತುಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಇಂಥ ವಿಶೇಷ ಸಂದರ್ಭದಲ್ಲಿ, ಸರ್ಕಾರ ಇವತ್ತು ಯಾವ ರೀತಿಯ ನಿಲುವನ್ನು ತೆಗೆದುಕೊಳ್ಳುತ್ತೀರಿ ಮತ್ತು ಎಷ್ಟರಮಟ್ಟಿಗೆ ನಮ್ಮ ನೀರಿನ ಹಕ್ಕನ್ನು ರಕ್ಷಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಿ ಎಂಬುದನ್ನು ನಾನು ಕೇಳುತ್ತೇನೆ. ಸನ್ಮಾನ್ಯ ನಾಗೇಗೌಡರಿಗೆ ಒಂದು ಹೊಸ ವಿಷಯವನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ತುಂಗಾ ಲಿಫ್ಟ್‌ನ ಯೋಜನೆ ಬಗ್ಗೆ ತಾವು ಮೇಲ್ಮನೆಯಲ್ಲಿ ಏನು ಉತ್ತರ ಕೊಟ್ಟಿದ್ದೀರಿ, ಅದು ಸಂಪೂರ್ಣವಾಗಿ ಕಾರ್ಯಗತ ಆಗುವುದಕ್ಕೆ ಸಾಧ್ಯವಿಲ್ಲ, ಅದು ಕಾಗದದ ಮೇಲೆ ಇರತಕ್ಕಂಥ ಒಂದು ಯೋಜನೆ ಆಗುತ್ತದೆ ಈಗ ಟ್ರಿಬ್ಯುನಲ್ ಮುಂದೆ ಹೋಗಿರತಕ್ಕಂಥ ಏನು ಯೋಜನೆ ಇದೆ, ಆ ಯೋಜನೆಯನ್ನು ಜಾರಿಗೊಳಿಸುವುದರ ಮುಖೇನ ಇವತ್ತು ತುಮಕೂರು ಮತ್ತು ಚಿತ್ರದುರ್ಗ ಭಾಗಕ್ಕೆ ನೀರನ್ನು ಕೊಡುವುದಕ್ಕೆ ಸಾಧ್ಯ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. 1991ರಲ್ಲಿ ವಿಶ್ವಬ್ಯಾಂಕಿನ ಟೀಮ್ ಬಂದು ನಿಮಗೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ, ಆ ರಿಪೋರ್ಟ್‌ನಲ್ಲಿ

"sluice was opened to give water to the standing crop, which was closed for restoration of original sluice of right bank."

145 ಅಡಿ ಸ್ಲೂಯಿಸ್ ಇವರು ಭದ್ರ ಡ್ಯಾಮ್‌ನಿಂದ ನೀರು ಕೊಡುವುದಾದರೆ, ಇವತ್ತು ಲಿಫ್ಟ್‌ನ್ನು 100 ಪರ್ಸೆಂಟ್ ಅವಾಯ್ಡ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಲಿಫ್ಟ್‌ನ್ನು ಅವಾಯ್ಡ್ ಮಾಡಿ ಗ್ರಾವಿಟಿ ಆಫ್ ಫ್ಲೋನಲ್ಲಿ ನೀರನ್ನು ಕೊಡುವಂತೆ ಮಾಡಬೇಕೆಂದು ಹೇಳುತ್ತೇನೆ. ನಮಗೆ ಮೂಲಭೂತವಾಗಿ 10 ಟಿಎಂಸಿ ನೀರು ಮತ್ತು ಮಾಡ್ರನೈಸೇಷ್‌ನಿಂದ ಇವತ್ತು ಬರತಕ್ಕ 20-22 ಟಿಎಂಸಿ ಮತ್ತು ಇದೆಲ್ಲಕ್ಕಿಂತ ಮಿಗಿಲಾಗಿ ತುಂಗಭದ್ರಾ ಸಿಲ್ಟ್‌ನಿಂದ ಹೋಗತಕ್ಕಂಥ 24 ಟಿಎಂಸಿ ನೀರು ಹರಿದು ಹೋಗುತ್ತಿದೆ. ಇವತ್ತು ನಿಮ್ಮ ಮುಂದೆ ಈ ವರದಿ ಇರಬೇಕು. 24 ಟಿಎಂಸಿ ನೀರನ್ನು ಬಳಕೆ ಮಾಡುವುದಕ್ಕೆ ಆಗುತ್ತಿಲ್ಲ, ಅದು ಸಂಪೂರ್ಣವಾಗಿ ಆಂಧ್ರಪ್ರದೇಶಕ್ಕೆ ಹರಿದು ಹೋಗುತ್ತಿದೆ. ಅದನ್ನು ಉಳಿಸತಕ್ಕಂಥ ಯಾವುದೇ ಪ್ರಯತ್ನವನ್ನೂ ತಾವು ಮಾಡಿಲ್ಲ. ಈ 24 ಟಿಎಂಸಿ ನೀರನ್ನು ಸ್ಟೋರೇಜ್ ಮಾಡಿದರೆ ಬಹುಶಃ 3-4 ಟಿ.ಎಂ.ಸಿ ನೀರನ್ನು ಬಳಸುತ್ತಿರಲಿಲ್ಲ. ಇವತ್ತು ಇನ್ನು 20-21 ಟಿಎಂಸಿ ನೀರು ಹರಿದು ಹೋಗುತ್ತಿರುವುದನ್ನು ಭದ್ರ ಮೇಲ್ದಂಡೆ ಯೋಜನೆಗೆ ಕೊಡುವ ಫರ್‌ದರ್ ಆಲೋಕೇಷನ್ ಮಾಡಬೇಕಾಗುತ್ತದೆ. ಈ ಯೋಜನೆಗಳು ಕಾರ್ಯಗತ ಆಗಲು ನಿಮಗೆ ಇರತಕ್ಕಂಥ ನಿಬಂಧನೆಗಳು ಏನೆಂದರೆ ಇವತ್ತು ವೇದಾವತಿ ಸೆಟ್ ಬೇಸಿಕ್‌ನಲ್ಲಿ 43 ಟಿಎಂಸಿಗಿಂತ ಹೆಚ್ಚು ನೀರನ್ನು ಬಳಕೆ ಮಾಡುವುದಕ್ಕೆ ಆಗುವುದಿಲ್ಲ ಮತ್ತು ಕೆ-8 ಪ್ರಕಾರ 320 ಟಿಎಂಸಿ ನೀರನ್ನು ಬಳಕೆ ಮಾಡುವುದಕ್ಕೆ ಆಗುವುದಿಲ್ಲ. ಇಂಥ ಸಂದರ್ಭದಲ್ಲಿ ಈ ನೀರು ಬಳಕೆ ಮಾಡುವುದಕ್ಕೆ ಆಗುವುದಿಲ್ಲ ಇಂಥ ಸಂದರ್ಭದಲ್ಲಿ ಈ ನೀರು ಬಳಕೆ ಆಗುವುದಿಲ್ಲವೆಂದರೆ ಯಾವಾಗ ಆ ನೀರಿನ ಬಳಕೆ ಮಾಡುತ್ತೀರಿ? ಇವತ್ತು ನಿರೀಕ್ಷೆಗೆ ಮೀರಿ ಆಂಧ್ರಪ್ರದೇಶಕ್ಕೆ ಹೋಗುವ ನೀರನ್ನು ಅಪ್ಪರ್ ಭದ್ರಾಗೆ ಬಿಡಬೇಕು. ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ಸರ್ಕಾರಗಳ

ಜೊತೆ ಚರ್ಚೆ ಮಾಡಿ ಆ ನೀರನ್ನು ಭದ್ರಾ ಮೇಲ್ದಂಡೆ ಯೋಜನೆಗೆ ವಿನಿಯೋಗಿಸುವುದಕ್ಕೆ ಬಿಡಬೇಕು, ಇಲ್ಲದಿದ್ದರೆ ಬೇರೆ ಯಾವುದೇ ರೀತಿಯಲ್ಲಿ ಈ ನೀರನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ. ಇವತ್ತು ಆಂಧ್ರ ಪ್ರದೇಶಕ್ಕೆ ಹೋಗುತ್ತಿರುವ ನೀರನ್ನು ನಾವು ಕೇಳುತ್ತಿದ್ದೇವೆ. ಈ 24 ಟಿಎಂಸಿ ನೀರು ಭದ್ರ ಮೇಲ್ದಂಡೆ ಸೇರುವುದಾದರೆ 60-70 ಟಿಎಂಸಿ ನೀರನ್ನು ಬಳಸಲು ಸಾಧ್ಯವಾಗುತ್ತದೆ ಸ್ಕೀಮ್-(ಬಿ) ಯಲ್ಲಿ ನಾವು ಬಳಕೆ ಮಾಡುವ ನೀರಿನ ಬಗ್ಗೆ ಈ ಮನೆಯಲ್ಲಿ ನಿರ್ಣಯ ಮಾಡಿದ್ದೇವೆ. ಟ್ರಿಬ್ಯುನಲ್ ಮಾಡಬೇಕೆಂದು ಒತ್ತಾಯವನ್ನು ಮಾಡಿದ್ದೇವೆ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಕೇಸ್‌ನ್ನು ಹಾಕಿರುವಂಥದ್ದು ತಮಗೂ ಗೊತ್ತಿದೆ. ಸ್ಕೀಂ (ಬಿ) ನಲ್ಲಿ ಬರತಕ್ಕಂಥ 100 ಟಿಎಂಸಿ ನೀರನ್ನು ವಿವಿಧ ಯೋಜನೆಗಳಿಗೆ ಅಲಾಟ್ ಮಾಡಬೇಕೆಂದು ಮಾಡಿದ್ದೀರಿ. ಅಲಮಟ್ಟಿಗೆ ನೀವು ಎಷ್ಟು ಬೇಕಾದರೆ ಮಾಡಿ. ಇನ್ನು ಉಳಿಯತಕ್ಕಂಥ ಕನಿಷ್ಟ 70-80 ಟಿಎಂಸಿಯಲ್ಲಿ 30-40 ಟಿಎಂಸಿ ನೀರನ್ನಾದರೂ ಉಳಿತಾಯ ಮಾಡಿ. ಅದನ್ನು ಈ ಯೋಜನೆಗೆ ಮೀಸಲಿಡುವುದಾದರೆ, ಬಹುಶಃ ನನಗೆ ಗೊತ್ತಿರುವ ಹಾಗೆ ನೀರಿನ ಪ್ರಮಾಣ 50 ಪರ್ಸೆಂಟ್ ಡಿಪೆಂಡಿಬಿಲಿಟಿ ಅಥವಾ 75 ಪರ್ಸೆಂಟ್ ಡಿಪೆಂಡಬಿಲಿಟ್ ಆದರೂ ಕೂಡ 70-80 ಟಿಎಂಸಿ ನೀರನ್ನು ಶೇಖರಣೆ ಮಾಡುವುದಾದರೆ ತುಮಕೂರು, ಚಿತ್ರದುರ್ಗ ಮತ್ತು ಮುಖ್ಯ ಮಂತ್ರಿಗಳ ಕ್ಷೇತ್ರವಾದ ಚೆನ್ನಗಿರಿಯಿಂದ ಪ್ರಾರಂಭ ಮಾಡಿಕೊಂಡು ನೀರನ್ನು ಗ್ರಾವಿಟಿ ಫ್ಲೋನಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ತಾವು ಒಪ್ಪಲೇ ಬೇಕಾಗುತ್ತದೆ. ತಾವು ಮೇಲ್ಮನೆಯಲ್ಲಿ ಉತ್ತರ ಕೊಡುವಾಗ ಈ ಯೋಜನೆಯಲ್ಲಿ ಯಾವುದೇ ರೀತಿಯ ಬದಲಾವಣೆ ಮಾಡುವುದಿಲ್ಲ ಎಂಬ ಮಾತನ್ನು ಹೇಳಿದ್ದೀರಿ ದಯಮಾಡಿ ಆ ಕೆಲಸವನ್ನು ಮಾಡಬೇಡಿ. ಇವತ್ತು ಎಲ್ಲಾ ರೀತಿಯಾಗಿ ಹಿಂದೆ ಕೊಟ್ಟಂತಹ ಯೋಜನೆಯೂ ಕೂಡ ಡಿಟೈಲ್ ಸರ್ವೆ ಮಾಡಲು ಆರ್ಡ್‌ರ್ ಕೊಡಬೇಕು. ಇವತ್ತು ಸಬ್‌ಮೆರ್ಚನ್ ಎಷ್ಟು ಬರುತ್ತದೆ ಎಂಬುದನ್ನು ಹೇಳಬೇಕು, ಕೇವಲ ಟೋಫೋ ಶೀಟ್‌ನ ಆದರದ ಮೇಲೆ ನಮ್ಮದು ಇಷ್ಟು ಎಕರೆ ಮುಳುಗಡೆ ಆಗುತ್ತದೆ ಎನ್ನುವುದು ಬೇಡ. ಇವತ್ತು ನಾವು ಕಳೆದುಕೊಳ್ಳತಕ್ಕಂಥ ಜಮೀನಿನ ಪ್ರಮಾಣ ಬಹಳ ಅತ್ಯಂತ ಕಡಿಮೆ. ಇದರಿಂದ ನಮಗೆ ಹೆಚ್ಚು ತೊಂದರೆ ಏನೂ ಆಗುವುದಿಲ್ಲ. ಈ ಯೋಜನೆಯ ಕಾರ್ಯವನ್ನು ಮಾಡುವುದಕ್ಕೆ 50 ಕಿ.ಮೀ. ಡೆಡ್ ಲೈನಲ್ಲಿ ಬರುತ್ತದೆ ಮತ್ತು ಬಿಸಿ ರೇಷಿಯೋ ಹೆಚ್ಚು ಆಗುತ್ತದೆಂದು ಅನೇಕ ಕಾರಣಗಳನ್ನು ತಾವು ಕೊಟ್ಟಿದ್ದೀರಿ. ಬಹುಶಃ ಇಂಥ ಏರಿಯಾಗೆ ನೀರು ಕೊಡಬೇಕೆಂದು ಪ್ರಯತ್ನ ಮಾಡಿದರೆ ನಿಮಗೆ ಯಾವ ಬಿಸಿ ರೇಷಿಯೋ ಕೂಡ ನಿಮಗೆ ಅಡ್ಡ ಬರುವುದಿಲ್ಲ. ಅದನ್ನು ತಾವು ಮಾಡಬೇಡಿ. ನಿಮಗೆ ಯಾವುದೇ ಕಾರಣಗಳಿದ್ದರು ಅವುಗಳೆಲ್ಲವನ್ನು ಬದಿಗೊತ್ತಿ ನೀರು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಇವತ್ತು ಆಲೋಕೇಷನ್ ಆಫ್ ವಾಟರ್ ತುಂಬಾ ಅವಶ್ಯಕತೆ ಇದೆ ಪ್ರಾಮಾಣಿಕವಾಗಿ ನೀರು ಬಳಕೆ ಮಾಡತಕ್ಕಂಥ ಇಚ್ಚೆ ಇರುವುದಾದರೆ ಮತ್ತು ರಾಜಕೀಯವಾಗಿ ಆ ಶಕ್ತಿ ನಿಮ್ಮಲ್ಲಿ ಇದೆ ಎನ್ನುವುದಾದರೆ ಹಾಗೂ ನಿಮ್ಮ ಇಚ್ಛಾ ಶಕ್ತಿಯನ್ನು ಪ್ರದರ್ಶನ ಮಾಡಬೇಕಾದರೆ ಆಲೋಕೇಷನನ್ನು ಮೊದಲು ಮಾಡಿ. ಏಕೆ ಇದುವರೆಗೆ ಆಲೋಕೇಷನ್ ಮಾಡಿಲ್ಲ? ಇದರಿಂದ ನಿಮಗೆ ಎಲ್ಲಾ ರೀತಿಯಿಂದಲೂ ತೊಂದರೆಯಾಗುತ್ತದೆ. ಇದನ್ನು ನಮ್ಮ ಜನ ಎರಡು ವರ್ಷ ಆದಮೇಲೆ ನಿಮ್ಮನ್ನು ಕ್ಷಮಿಸುವುದಿಲ್ಲ ಎಂಬ ಮಾತನ್ನು ಹೇಳುತ್ತೇನೆ. ಇವತ್ತು ಕನಿಷ್ಠ 80-90 ಟಿಎಂಸಿ ನೀರನ್ನು ಮೊದಲು ಆಲೋಕೇಷನ್ ಮಾಡಿ

ಮತ್ತು ಡೀಟೈಲ್ ಸರ್ವೆ ಮಾಡಿ, ಸ್ಕೀಂ (ಎ) ಮತ್ತು ಸ್ಕೀಂ (ಬಿ) ವ್ಯಾಪ್ತಿಯಲ್ಲಿ ಬರತಕ್ಕಂಥ ಮತ್ತು ಸಿಲ್ಪಿನಿಂದ ಬರತಕ್ಕಂಥ ಎಲ್ಲಾ ನೀರನ್ನು ಬಳಕೆ ಮಾಡುವುದಾದರೆ ನಿಜವಾಗಿಯೂ ಕೂಡ ಒಳ್ಳೆಯ ಯೋಜನೆಯನ್ನು ಮಾಡುವುದಕ್ಕೆ ಅವಕಾಶ ಇರುತ್ತದೆ. ಸನ್ಮಾನ್ಯ ನಾಗೇಗೌಡರೆ, ಇವತ್ತು ನೀರಾವರಿ ಇಲಾಖೆಗೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿ ಇಲ್ಲ ಎಂಬುದನ್ನು ನಾನು ನಂಬುವುದಿಲ್ಲ. ಇವತ್ತು ಮುಖ್ಯಮಂತ್ರಿಗಳು ಎಲ್ಲಾ ರೀತಿಯ ಸ್ವಾತಂತ್ರ್ಯವನ್ನು ಕೊಟ್ಟಿರಬೇಕಾದರೆ ನಿಜವಾಗಿಯೂ ಕೂಡ ನಿಮ್ಮ ಬುದ್ಧಿಯನ್ನು ತೋರಿಸಿಕೊಳ್ಳಬೇಕು. ಮೊದಲು ನೀರನ್ನು ಅಲೋಕೇಟ್ ಮಾಡಿ ಆ ಪ್ರಕಾರ ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆದುಕೊಂಡು ಯೋಜನೆಗಳನ್ನು ಮಾಡಿ. ಅದು ಇವತ್ತಲ್ಲ ಅಥವಾ ನಾಳೆ, ನಾಡಿದ್ದು ಅಥವಾ 2000 ವರ್ಷದ ಹೊತ್ತಿಗೆ ನೀವು ನೀರನ್ನು ಏಕೆ ಉಪಯೋಗಿಸಲಿಲ್ಲ ಎಂದು ಕೇಳಲು ಬಂದರೆ, ನಮ್ಮ ಯೋಜನೆಗಳನ್ನು ನೀವೇ ಕ್ಲಿಯರ್ ಮಾಡಿಲ್ಲ ಎಂಬ ಮಾತನ್ನು ಹೇಳಬೇಕಾಗುತ್ತದೆ. ಈ ಮಾತನ್ನು ಹೇಳುವುದಕ್ಕೆ ಒಂದು ನೆಪ ಸಿಗುತ್ತದೆ ಮತ್ತು ಅವರನ್ನು ಕನ್ವಿನ್ಸ್ ಕೂಡ ಮಾಡಬೇಕಾಗುತ್ತದೆ. ದಯವಿಟ್ಟು ಈ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕೆಂಬ ಮಾತನ್ನು ಹೇಳುತ್ತೇನೆ ಮತ್ತು ಈ ವಿಷಯದಲ್ಲಿ ಅನೇಕ ರೀತಿಯಲ್ಲಿ ಅಂದರೆ ರಿಸೋರ್ಸಸ್ ಮೊಬಲೈಸೇಷನ್ ಆಗಲಿ, ನಿಮ್ಮ ಫಂಡಿಂಗ್ ಮಾಡಬೇಕು ಇವೆಲ್ಲಕ್ಕೂ ಕೂಡ ನನ್ನ ಸಲಹೆ ಏನೆಂದರೆ, ಒಂದು ಹೈಯೆಸ್ಟ್ ಅಪೆಕ್ಸ್ ಬಾಡಿಯನ್ನು ಕೃಷ್ಣ ಬೇಸಿನ್‌ನಲ್ಲಿ ನೀವು ಮಾಡಬೇಕಾಗುತ್ತದೆ. ಇವತ್ತು ಈ ಅಪೆಕ್ಸ್ ಬಾಡಿಯನ್ನು ನಿಮ್ಮ ಅಧ್ಯಕ್ಷತೆಯಲ್ಲಿ ಅಥವಾ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಾನ್‌ಸ್ಟಿಟ್ಯೂಟ್ ಮಾಡಿ. ಒಂದು ತಿಂಗಳೂ ಅಥವಾ ಎರಡು ತಿಂಗಳಿಗೊಂದು ಸಾರಿ ಇಲ್ಲಿ ಸಭೆ ಸೇರಿ ಅನೇಕ ತರಹದ ವಿಷಯಗಳನ್ನು ಚರ್ಚೆಮಾಡುವುದಕ್ಕೆ ಅನುಕೂಲವಾಗುತ್ತದೆ ಯೋಜನೆಗಳನ್ನು ಪರಿಪೂರ್ಣವಾಗಿ ಕಾರ್ಯಗತಗೊಳಿಸುವುದಕ್ಕೆ ಮತ್ತು ಅಲ್ಲಿರತಕ್ಕಂಥ ತೊಂದರೆಗಳನ್ನು ತಿಳಿದುಕೊಳ್ಳುವುದಕ್ಕೆ ಸಹಾಯವಾಗುತ್ತದೆ. ದಯಮಾಡಿ ಆ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈಗಾಗಲೇ ಈ ಫಂಡಿಂಗ್ ವಿಷಯದಲ್ಲಿ ಯೋಜನೆಗೆ ನಿಮ್ಮ ತೀರ್ಮಾನದ ಪ್ರಕಾರ ಎರಡು ವರ್ಷದಲ್ಲಿ 8-10 ಕೋಟಿ ರೂಪಾಯಿಗಳನ್ನು ನೀವು

5.10 ಪಿ.ಎಂ.

ಯಾವ ರೀತಿಯಲ್ಲಿ ತೊಡಗಿಸುತ್ತೀರಿ ಎನ್ನುವ ಮಾತನ್ನು ತಾವು, ತಮ್ಮ ಉತ್ತರದಲ್ಲಿ ಹೇಳಬೇಕಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ ಬಹುಶಃ ಇವತ್ತು ಮಾನ್ಯ ನೀರಾವರಿ ಸಚಿವರು, ಮಾನ್ಯ ಮುಖ್ಯಮಂತ್ರಿಗಳ ಮನಸ್ಸು ಒಲಿಸುವಂತಹ ಕೆಲಸವನ್ನು ಮಾಡಿದ್ದೀರಿ, ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ನಿರ್ದಿಷ್ಟವಾಗಿ ಯಾವ ರೀತಿಯಲ್ಲಿ ಈ ನೀರಿನ ಬಳಕೆಯನ್ನು ಮಾಡಿದ್ದೀರಿ, ಯಾವ ಯಾವ ಯೋಜನೆಗೆ ಎಷ್ಟೆಷ್ಟು ನೀರನ್ನು ಕೊಟ್ಟಿದ್ದೀರಿ, ಫಂಡಿಂಗ್ ಯಾವ ರೀತಿಯಲ್ಲಿ ಮಾಡುತ್ತೀರಿ? ಯಾವ ರೀತಿಯಲ್ಲಿ ತಾವು ರಾಜ್ಯಪಾಲರ ಭಾಷಣದಲ್ಲಿ ಹೇಳಿರತಕ್ಕಂಥ ಮಾತನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಿ? ರಾಜಕೀಯವಾಗಿ ಏನೇ ಇದ್ದರೂ ಕೂಡ ಇವತ್ತು ಈ ರಾಜ್ಯದ ಹಿತಾಶಕ್ತಿಯನ್ನು ಕಾಪಾಡಬೇಕಾದರೆ ಯಾವ ರೀತಿಯ ಪ್ರಯತ್ನವನ್ನು ಮಾಡುತ್ತೀರಿ ಎಂದು ಹೇಳುವುದರ ಜೊತೆಗೆ ರಾಜಕೀಯವಾಗಿ ಇರತಕ್ಕಂಥ ಜಯಲಲಿತಾ ಅವರ ಒತ್ತಡ ಒಂದು ಕಡೆ ಇರಬಹುದು ಮತ್ತು ಮಾನ್ಯ ಚಂದ್ರಬಾಬು

ನಾಯ್ಡು ಅವರ ಕಡೆಯಿಂದ ಬರತಕ್ಕಂಥ ಅಡೆತಡೆಗಳನ್ನು ಯಾವ ರೀತಿ ನಿಭಾಯಿಸುತ್ತೀರಿ ಎನ್ನುವ ಮಾತನ್ನು ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಬೇಕೆಂದೂ ಮತ್ತು ತಾವು ಪ್ರಾಮಾಣಿಕವಾದ ಕೆಲಸವನ್ನು ಮಾಡಬೇಕೆಂದು ಹೇಳಿ, ನನಗೆ ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

7 ರಾಷ್ಟ್ರೀಯ ಅಜೆಂಡಾದಲ್ಲಿ ಕಾವೇರಿ ವಿಷಯವನ್ನು ಸೇರಿಸಿರುವುದರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ.

ಉಪಾಧ್ಯಕ್ಷರು:- ಬೇಡ , ಬೇಡ ಮಾನ್ಯ ಶ್ರೀ ರಾಮರೆಡ್ಡಿಯವರು ಮಾತನಾಡಲಿ. ತಾವು ಈ ವಿಷಯವನ್ನು ಮಾತನಾಡಲು ಶುರು ಮಾಡಿದರೆ ಎಲ್ಲರೂ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಇದು ಬಹಳ ಪ್ರಾಮುಖ್ಯವಾದ ವಿಷಯ. ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿದ್ದಾರೆ. ರಾಷ್ಟ್ರೀಯ ಅಜೆಂಡಾದಲ್ಲಿ ಕಾವೇರಿಯನ್ನು ಸೇರಿಸಿದ್ದಾರೆ ಕಾವೇರಿ ನೀರನ್ನು ಪ್ರತಿ ವರ್ಷ 205 ಟಿಎಂಸಿ ಬಿಡುವ ಬಗ್ಗೆ ರಾಷ್ಟ್ರೀಯ ಅಜೆಂಡಾದಲ್ಲಿ ಸೇರಿದ್ದಾರೆ. ಅದರ ಬಗ್ಗೆ ನಮ್ಮ ಸರ್ಕಾರದ ನಿಲುವು ಏನು?

ಉಪಾಧ್ಯಕ್ಷರು:- ಬೇಡ. ತಾವು ದಯಮಾಡಿ ಕುಳಿತುಕೊಳ್ಳಿ. ಅವರು ಕಮ್ಯುನಿಸ್ಟ್ ಪಕ್ಷದ ನಾಯಕರು.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಸರ್ಕಾರದ ನಿಲುವು ಏನು? ರಾಷ್ಟ್ರೀಯ ಅಜೆಂಡಾದಲ್ಲಿ ಕಾವೇರಿ ವಿಷಯ ಸೇರಿಸಿದ್ದಾರೆ.

ಉಪಾಧ್ಯಕ್ಷರು:- ಬೇಕಾದ್ದು ಮಾಡಿ. ನಾನು ಏನೂ ಮಾಡಲು ಸಾಧ್ಯ? ತಾವು ಒಬ್ಬರು ಮಾತನಾಡಿದರೆ ಎಲ್ಲರೂ ಮಾತನಾಡುತ್ತಾರೆ. ಸಾಧ್ಯವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಆಯಿತು ನಾನು ಮಾತನಾಡುವುದಿಲ್ಲ ಬಿಡಿ ಸ್ವಾಮಿ ರಾಷ್ಟ್ರೀಯ ಅಜೆಂಡಾದಲ್ಲಿ ಕಾವೇರಿ ವಿಷಯವನ್ನು ಸೇರಿಸಿರುವುದನ್ನು ವಿರೋಧಿಸಿ ನಾನು ಈ ಸಭೆಯಲ್ಲಿ ಧರಣಿ ಮಾಡುತ್ತೇನೆ.

(ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ಕುಳಿತರು).

ಉಪಾಧ್ಯಕ್ಷರು:- ಆಯಿತು, ತಾವು ಧರಣಿ ಮಾಡಿ, ಶ್ರೀರಾಮರೆಡ್ಡಿಯವರೇ ತಾವು ಮಾತನಾಡಿ.

ಶ್ರೀ ಎಂ. ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಗಂಭೀರವಾದ ವಿಷಯವನ್ನು ಸದನದ ಗಮನಕ್ಕೆ ತಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ನೋಡಿದ್ದಾರೆ. ನಾಳೆ ಉತ್ತರ ಕೊಡುವಾಗ ಇದಕ್ಕೆ ನಿರ್ದಿಷ್ಟವಾಗಿ ಒಂದು ಉತ್ತರವನ್ನು ಕೊಡುತ್ತೇವೆ ತಾವು ಧರಣಿ ಮಾಡಬೇಡಿ ಮಾನ್ಯ. ಮುಖ್ಯಮಂತ್ರಿಗಳು ನಾಳೆ ಉತ್ತರ ಕೊಡುತ್ತಾರೆ.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ತಮ್ಮ ಸ್ಥಳಕ್ಕೆ ಬಂದರೆ ನಾನು ಉತ್ತರ ಕೊಡುತ್ತೇನೆ.